ನಾಸ್ತಿಕತೆ, ಬಹುದೇವ ವಿಶ್ವಾಸ
ಮತ್ತು
ಏಕದೇವತ್ವ

ಡಾ. ಇಬ್ರಾಹೀಮ್ ಸಈದ್

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಮಾನವಕುಲದ ಇತಿಹಾಸದುದ್ದಕ್ಕೂ ಮನುಷ್ಯನು ದೇವನನ್ನು ನಂಬುತ್ತಾ ಬಂದಿದ್ದಾನೆ. ಇಂದಿಗೂ ಜಗತ್ತಿನ ಅತ್ಯಧಿಕ ಜನರು ದೇವನನ್ನು ನಂಬುವವರಾಗಿದ್ದಾರೆ. ಆದರೆ ದೇವವಿಶ್ವಾಸವು ಕೇವಲ ಒಂದು ನಂಬಿಕೆಯಾಗಿದ್ದು, ಅದನ್ನು ವೈಚಾರಿಕವಾಗಿ ಸಮರ್ಥಿಸಲು ಸಾಧ್ಯವಿಲ್ಲವೆಂಬುದೇ ಸಾಮಾನ್ಯ ನಂಬಿಕೆ. ಇದನ್ನು 'ನಾಸ್ತಿಕತೆ, ಬಹುದೇವ ವಿಶ್ವಾಸ ಮತ್ತು ಏಕದೇವತ್ವ' ಎಂಬ ಈ ಕೃತಿಯಲ್ಲಿ ಅಲ್ಲಗಳೆಯಲಾಗಿದೆ!

ದೇವವಿಶ್ವಾಸದ ಕುರಿತು ನಾಸ್ತಿಕರು ಮುಂದಿಡುವ ವಾದ ಮತ್ತು ಅವುಗಳ ಪುರಾವೆಗಳನ್ನು ವಿಮರ್ಶಿಸುತ್ತಾ ಬಹುದೇವ ವಿಶ್ವಾಸದ ಪೊಳ್ಳುತನವನ್ನು ಸಾಬೀತು ಪಡಿಸಿ ಏಕದೇವತ್ವದ ಸ್ಪಷ್ಟ ಕಲ್ಪನೆಯನ್ನು ಜನರ ಮುಂದಿಡುವ ಉತ್ತಮ ಕೃತಿಯಿದು. ಇದು ಎಲ್ಲ ಧರ್ಮದ ಜನರು ಮತ್ತು ಯಾವುದೇ ಧರ್ಮದಲ್ಲಿ ವಿಶ್ವಾಸವಿಲ್ಲದವರೂ ಏಕ ಪ್ರಕಾರ ಪ್ರಯೋಜನ ಪಡೆಯಬಹುದಾದ ಕೃತಿಯಾಗಿದೆ.

ಶಾಂತಿ ಪ್ರಕಾಶನ

೧

ಅನುಕ್ರಮಣಿಕೆ

ದೇವರು ಮಾನವ ದೌರ್ಬಲ್ಯದ ಸೃಷ್ಟಿಯೇ?

'ದೇವರು ಮಾನವ ದೌರ್ಬಲ್ಯದ ಸೃಷ್ಟಿ' ಎಂಬುದು ನಾಸ್ತಿಕರು ಬಹಳ ಗಂಭೀರವಾಗಿ ಪ್ರಸ್ತುತಪಡಿಸುವ ವಿಚಾರಗಳಲ್ಲಿ ಒಂದು. 'ಪುರಾತನ ಕಾಲದಲ್ಲಿ ಮನುಷ್ಯನು ತನ್ನನ್ನು ಅತ್ಯಂತ ದುರ್ಬಲನೆಂದು ಪರಿಗಣಿಸುತ್ತಿದ್ದ. ಅವನಿಗೆ ಒಂದು ಬಲವಾದ ಆಸರೆಯ ಅಗತ್ಯವಿತ್ತು. ಅವನು ಒಂದು ಅಸ್ತಿತ್ವವನ್ನು ಸಂಕಲ್ಪಿಸಿಕೊಂಡು ಅದಕ್ಕೆ ದೇವರು ಎಂಬ ಹೆಸರಿಟ್ಟ. ಆಧುನಿಕ ಮಾನವನು ಪ್ರಕೃತಿಯನ್ನು ಜಯಿಸಿದ್ದಾನೆ. ಅವನು ತನ್ನ ಶಕ್ತಿ-ಸಾಮರ್ಥ್ಯಗಳ ಮೇಲೆ ಭರವಸೆಯುಳ್ಳವನಾಗಿದ್ದಾನೆ. ತನ್ನ ಸಂಕಷ್ಟಗಳನ್ನು ತಾನೇ ನಿವಾರಿಸಬಲ್ಲವನಾಗಿದ್ದಾನೆ. ಅವನು ತಾನೇ ತನ್ನ ದೇವರಾಗಿದ್ದಾನೆ.' ಇದು ಅವರ ವಿಚಾರದ ಸಾರ.

ಇದು ವಸ್ತುಸ್ಥಿತಿಯ ಸರಿಯಾದ ಚಿತ್ರಣವೇ? ಮನುಷ್ಯನಿಗೆ ಒಂದು ಬಲವಾದ ಆಸರೆಯ ಅಗತ್ಯವಿದ್ದುದರಿಂದ ಮಾತ್ರ ದೇವರನ್ನು ನಂಬಲಾಯಿತೇ? ಅದು ಕೇವಲ ಒಂದು ಕಾಲ್ಪನಿಕ ಅಸ್ತಿತ್ವವೇ? ಅದಕ್ಕೆ ಯಾವುದೇ ಸ್ಪಷ್ಟ ಆಧಾರ-ಪ್ರಮಾಣಗಳಿಲ್ಲವೇ? ಪ್ರಕೃತಿಯಲ್ಲಿ ಮತ್ತು ಮಾನವರಲ್ಲಿ ದೇವಾಸ್ತಿತ್ವಕ್ಕೆ ಯಾವುದೇ ಪುರಾವೆಯಿಲ್ಲವೇ? ಈ ವಾದದ ನಿರಾಕರಣೆಗೆ ವಿಶ್ವದ ಸಂಕೇತಗಳು, ಮಾನವ ಮನೋವಿಜ್ಞಾನ ಮತ್ತು ವಿಶ್ವ ಧರ್ಮಗಳ ವಿಶಾಲ ಗ್ರಂಥಭಂಡಾರ ಸಮರ್ಥವಾಗಿವೆ.

ಸಹಸ್ರಾರು ವರ್ಷಗಳ ಸುದೀರ್ಘ ಮಾನವ ಇತಿಹಾಸದಲ್ಲಿ ಕೇವಲ ಮೂಢನಂಬಿಕೆ ಮತ್ತು ಹೇಡಿತನದ ಕಾರಣದಿಂದಲೇ ಜನರು ದೇವರನ್ನು ನಂಬಿದರೆ? ವಿಚಾರವಂತರು, ಬುದ್ಧಿಜೀವಿಗಳು, ಧೈರ್ಯಶಾಲಿಗಳು ಮತ್ತು ಪರಾಕ್ರಮಿಗಳೆಲ್ಲರೂ ದೇವರನ್ನು ನಿರಾಕರಿಸಿದ್ದರೆ? ಪ್ರಸಕ್ತ ಪಾಶ್ಚಾತ್ಯ ಸಂಸ್ಕೃತಿಯ ಮೇಲ್ಮೆಗಿಂತ ಮೊದಲು ಮಾನವಕುಲವು ಸಾಮಾನ್ಯವಾಗಿ ದೇವರನ್ನು ನಂಬುತ್ತಿತ್ತು ಎಂಬುದು ಒಂದು ಚಾರಿತ್ರಿಕ ಸತ್ಯ. ಮಹಾ ಮೇಧಾವಿಗಳು, ದಾರ್ಶನಿಕರು, ಜ್ಞಾನಿಗಳು, ಪರಾಕ್ರಮಿಗಳು- ಎಂದು ಇತಿಹಾಸವು ಯಾರನ್ನೆಲ್ಲಾ ಪರಿಗಣಿಸುತ್ತದೋ ಹೆಚ್ಚಿನಂಶ ಅವರೆಲ್ಲರೂ ದೇವರನ್ನು ನಂಬುವವರಾಗಿದ್ದರು.

ಆಡಳಿತದ ಚುಕ್ಕಾಣಿ, ಸಾಂಸ್ಕೃತಿಕ ಮೇಧಾವಿತ್ವ, ಕಲೆ ಮತ್ತು ಸಾಹಿತ್ಯ ಇತ್ಯಾದಿಗಳ ಸಾರಥ್ಯ ನಾಸ್ತಿಕರ ಕೈಯಲ್ಲೇ ಇರುವಾಗ ಇಂದಿಗೂ ಮಾನವಕುಲದ ದೊಡ್ಡ ಭಾಗವು ದೇವರನ್ನು ನಂಬುವವರದ್ದಾಗಿದೆ. ಪೂರ್ವ ಪಶ್ಚಿಮಗಳ ಅನೇಕ ಚಿಂತಕರು, ತತ್ವಜ್ಞಾನಿಗಳು

ಮತ್ತು ವಿದ್ವಾಂಸರು ದೇವವಿಶ್ವಾಸಿಗಳಾಗಿದ್ದಾರೆ. ನಾಸ್ತಿಕತೆಯ ಬೆಂಬಲಕ್ಕೆ ವಿಜ್ಞಾನ ಮತ್ತು ವಿಜ್ಞಾನಿಗಳಿದ್ದಾರೆಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ಇದು ಸರಿಯೆ? ವಿಜ್ಞಾನದ ಆಧುನಿಕ ಬೆಳವಣಿಗೆಯ ಕುರಿತು ತಿಳಿದವರೆಲ್ಲರೂ ಇದನ್ನು ನಿರಾಕರಿಸದಿರಲಾರರು. ವಾಸ್ತವದಲ್ಲಿ ವಿಜ್ಞಾನ ಮತ್ತು ನಾಸ್ತಿಕತೆಗೆ ಯಾವ ಸಂಬಂಧವೂ ಇಲ್ಲ. ವಸ್ತುತಃ ವಿಜ್ಞಾನದ ಎಲ್ಲ ಆವಿಷ್ಕಾರಗಳು ದೇವಾಸ್ತಿತ್ವದ ಕಡೆಗೆ ಮಾರ್ಗದರ್ಶನ ಮಾಡುತ್ತವೆ. ವಿಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ಗಾಢ ಪ್ರಭಾವ ಬೀರಿದ ವಿಜ್ಞಾನಿಗಳ ದೊಡ್ಡ ಸಂಖ್ಯೆಯು ದೇವಾಸ್ತಿತ್ವವನ್ನು ನಂಬುವ ಅಥವಾ ಕನಿಷ್ಠಪಕ್ಷ ಆ ವಿಷಯದಲ್ಲಿ ಮೌನ ವಹಿಸಿದವರದ್ದಾಗಿದೆ. ಈ ಮೌನಕ್ಕೆ ಕಾರಣವೇನೆಂದರೆ ದೇವರ ಅಸ್ತಿತ್ವದ ವಿಚಾರವು ವಿಜ್ಞಾನದ ವಿಷಯವಾಗಿರದೆ ತತ್ವಜ್ಞಾನದ ವಿಷಯವಾಗಿದೆ. ವಿಜ್ಞಾನದ ವಿಷಯವು ಭೌತಿಕ ಜಗತ್ತು ಮತ್ತು ಅದರ ಪ್ರಾಕೃತಿಕ ಕಾನೂನುಗಳಾಗಿವೆ. ಈ ವಿಶ್ವಕ್ಕೆ ಅತೀತವಾಗಿ ಒಂದು ಶಕ್ತಿಯಿದೆಯೋ ಇಲ್ಲವೋ ಎಂಬುದು ವಿಜ್ಞಾನದ ವ್ಯಾಪ್ತಿಗೆ ಮೀರಿದ ಒಂದು ಪ್ರಶ್ನೆಯಾಗಿದೆ. ವಿಜ್ಞಾನದ ಈ ವೈಶಿಷ್ಟ್ಯದಿಂದಾಗಿಯೇ ವಿಜ್ಞಾನವು ಭೌತಿಕತೆಯನ್ನು ಒಪ್ಪುತ್ತದೆಯೇ ವಿನಾ ದೇವಾಸ್ತಿತ್ವವನ್ನಲ್ಲ ಎಂಬ ತಪ್ಪು ಕಲ್ಪನೆಯು ಜನಸಾಮಾನ್ಯರಲ್ಲಿ ಹರಡಿತು. ಕೆಲವು ವಿಜ್ಞಾನಿಗಳು ದೇವರನ್ನು ನಿರಾಕರಿಸಿದಾಗ ಜನರು ಅವರ ಈ ನಿರಾಕರಣೆಯನ್ನು ವಿಜ್ಞಾನ ಮತ್ತು ಅದರ ಸಂಶೋಧನೆಗಳೊಂದಿಗೆ ಜೋಡಿಸಿದರು. ವಿಜ್ಞಾನವು ದೇವರನ್ನು ನಿರಾಕರಿಸುತ್ತದೆ ಎಂದು ಹೇಳುವುದು ವಿಜ್ಞಾನ ಮತ್ತು ಅದರ ಕಾರ್ಯವ್ಯಾಪ್ತಿಯ ಕುರಿತ ಅಜ್ಞಾನದ ಕಾರಣದಿಂದಾಗಿದೆ ಅಥವಾ ಅದು ವಿಜ್ಞಾನದ ದುರುಪಯೋಗವಾಗಿದೆ. ದೇವರ ಅಸ್ತಿತ್ವ ಅಥವಾ ಇಲ್ಲದಿರುವಿಕೆಯು ವಿಜ್ಞಾನದ ವ್ಯಾಪ್ತಿಯಿಂದ ಹೊರತಾದ ವಿಷಯವಾಗಿದೆ ಎಂಬುದೇ ವಾಸ್ತವಿಕತೆಯಾಗಿದೆ.

ಪುರಾತನ ಕಾಲದಿಂದಲೂ ಮಾನವಕೋಟಿಯು ದೇವರನ್ನು ನಂಬುತ್ತಾ ಬಂದಿದೆ ಎಂಬ ಕಾರಣಕ್ಕೆ ನೀವು ಕೂಡಾ ದೇವರನ್ನು ನಂಬಬೇಕೆಂದು ನಾವು ಹೇಳುವುದಿಲ್ಲ. ದೇವರನ್ನು ನಂಬುವುದು ಅಥವಾ ನಂಬದಿರುವುದು ಆಧಾರ ಪ್ರಮಾಣಗಳ ಬುನಾದಿಯಲ್ಲಾಗಿರಬೇಕು. ನಾವು ಅದನ್ನೇ ಸರಿ ಎನ್ನುತ್ತೇವೆ. ಅದನ್ನೇ ಅನುಸರಿಸುತ್ತಿದ್ದೇವೆ. ನಮ್ಮ ನಾಸ್ತಿಕ ಮಿತ್ರರು ಕೂಡಾ ಸುತ್ತಿ ಬಳಸಿ ಮಾತಾಡುವ ಬದಲು ತಮ್ಮ ಈ ನಿಲುವಿನ ಹಿಂದೆ ಇರುವ ಆಧಾರ ಪ್ರಮಾಣಗಳನ್ನು ಪ್ರಸ್ತುತಪಡಿಸಲಿ. "ದೇವರು ಮಾನವ ದೌರ್ಬಲ್ಯದ ಸೃಷ್ಟಿ" ಎಂಬುದು ಒಂದು ಆಧಾರ ಪ್ರಮಾಣವಲ್ಲ. ಕೇವಲ ಒಂದು ವಾದ ಮಾತ್ರ. ಅದರ ಬೆಂಬಲಕ್ಕೆ ಯಾವ ಪುರಾವೆಯೂ ಇಲ್ಲ. ಇತಿಹಾಸದುದ್ದಕ್ಕೂ ಹೆಚ್ಚಿನ ಚಿಂತಕರು, ವಿದ್ವಾಂಸರು, ತತ್ವಜ್ಞಾನಿಗಳು ಮತ್ತು ಧೀರ ಪರಾಕ್ರಮಿಗಳು ದೇವವಿಶ್ವಾಸಿಗಳಾಗಿದ್ದರು ಎಂಬುದೇ ಈ ವಾದದ ನಿರಾಕರಣೆಗೆ ಪರ್ಯಾಪ್ತವಾಗಿದೆ. ತಮ್ಮ ಹೊರತು ಇತರೆಲ್ಲರೂ ಹೇಡಿಗಳು ಮತ್ತು ಮೂಢರು ಎಂದು ಭಾವಿಸುವವರು ತಮಗಿಷ್ಟ ಬಂದಂತೆ ಹೇಳುತ್ತಿರಬಹುದು. ಆದರೆ ಅಂತಹ ಕೆಟ್ಟ ಜನರು ಮಾನವರ ಮಾರ್ಗದರ್ಶನ ಮತ್ತು ಅವರ ಸಮಸ್ಯೆಗಳ ಪರಿಹಾರಕ್ಕೆ ಖಂಡಿತ ಅರ್ಹರಲ್ಲ.

ಆಧುನಿಕತೆಯ ಭ್ರಮಾಲೋಕದಲ್ಲಿ ವಿಹರಿಸುತ್ತಿರುವವರು ತಾವು ಪ್ರಕೃತಿಯನ್ನು ಜಯಿಸಿದ್ದೇವೆಂದು ಭಾವಿಸುತ್ತಾರೆ. ಆದ್ದರಿಂದ ದೇವರ ಮುಂದೆ ತಲೆ ಬಾಗುವುದು ಅವರ ಪಾಲಿಗೆ ಅವಮಾನಕರವಾಗಿದೆ. ಆದರೆ ವಾಸ್ತವದಲ್ಲಿ ಅವರು ಆತ್ಮವಂಚನೆಗೊಳಗಾಗಿದ್ದಾರೆ. ಪ್ರಕೃತಿಯನ್ನು ಜಯಿಸುವುದೆಂದರೆ ಮನುಷ್ಯನು ಪ್ರಕೃತಿ ನಿಯಮ(Law of Nature)ಗಳಿಂದ ಮುಕ್ತಿ ಹೊಂದಬೇಕು. ಅವುಗಳಿಂದ ಆಳಲ್ಪಡುವ ಬದಲು ಪ್ರಕೃತಿ ನಿಯಮಗಳ ಮೇಲೆ ತನ್ನ ಆಧಿಪತ್ಯವನ್ನು ನಡೆಸುವಂತಾಗಬೇಕು. ಆದರೆ ಇದರಲ್ಲಿ ಮನುಷ್ಯನಿಗೆ ಒಂದಿಷ್ಟೂ ಸಫಲತೆ ಪ್ರಾಪ್ತವಾಗಿಲ್ಲ. ಮುಂದೆ ಪ್ರಾಪ್ತವಾಗುವ ಯಾವ ಲಕ್ಷಣಗಳೂ ಗೋಚರಿಸುತ್ತಿಲ್ಲ. ಹಿಂದೆ ಮನುಷ್ಯನು ಯಾವ ರೀತಿ ಪ್ರಕೃತಿ ನಿಯಮಗಳಿಂದ ಬಿಗಿಯಲ್ಪಟ್ಟಿದ್ದನೋ ಇಂದಿಗೂ ಹಾಗೆಯೇ ಬಿಗಿಯಲ್ಪಟ್ಟಿದ್ದಾನೆ. ವ್ಯತ್ಯಾಸವಿಷ್ಟೆ- ಹಿಂದೆ ಮಾನವನಿಗೆ ಕೆಲವೇ ನಿಸರ್ಗ ನಿಯಮಗಳ ಅರಿವಿತ್ತು. ಇಂದು ಸ್ವಲ್ಪ ಹೆಚ್ಚಿನ ನಿಯಮಗಳ ಅರಿವಾಗಿದೆ. ಆದರೆ ಇದರಿಂದ ಮನುಷ್ಯನು ಪ್ರಕೃತಿ ನಿಯಮಗಳಿಗೆ ಬದ್ಧನಾಗಿರುವನೆಂಬ ವಸ್ತುಸ್ಥಿತಿಯಲ್ಲಿ ಯಾವುದೇ ಮಾರ್ಪಾಡು ಉಂಟಾಗುವುದಿಲ್ಲ. ಅವನು ಹಿಂದೆ ಇದ್ದಂತೆ ಇಂದಿಗೂ ಪ್ರಕೃತಿ ನಿಯಮಗಳಿಗೆ ಅಧೀನವಾಗಿದ್ದಾನೆ. ಹಿಂದೆಯೂ ಸಂಪನ್ಮೂಲಗಳ ಆಧಿಕ್ಯ, ಐಶ್ವರ್ಯದ ಹೆಚ್ಚಳ ಮತ್ತು ಅಧಿಕಾರದ ಮದವು ಮನುಷ್ಯನನ್ನು ಮತಿಗೆಡಿಸುತ್ತಿತ್ತು. ಅವನು ದೇವರ ಮುಂದೆ ಶಿರಬಾಗುವುದನ್ನು ಅವಮಾನವೆಂದು ಬಗೆಯುತ್ತಿದ್ದನು. ಇಂದಿನ ಮನುಷ್ಯನೂ ವಿಜ್ಞಾನ-ತಂತ್ರಜ್ಞಾನಗಳ ಪ್ರಗತಿಯಿಂದ, ಕಲೆ-ಸಾಹಿತ್ಯಗಳ ಅಭಿವೃದ್ಧಿಯಿಂದ, ಸಂಸ್ಕೃತಿ-ನಾಗರಿಕತೆಗಳ ಉಚ್ಛ್ರಾಯದಿಂದ ದುರಹಂಕಾರದ ಅದೇ ಹಳೆಯ ಇತಿಹಾಸವನ್ನು ಮರುಕಳಿಸುತ್ತಿದ್ದಾನೆ. ಆದರೆ ಒಂದು ವ್ಯತ್ಯಾಸವಿದೆ. ಹಿಂದಿನಕಾಲದ ದುರಹಂಕಾರಿಗಳು ದೇವರಿಗೆ ಅವಿಧೇಯರಾಗುತ್ತಿದ್ದರೇ ಹೊರತು ಅವನನ್ನು ನಿರಾಕರಿಸುತ್ತಿರಲಿಲ್ಲ. ಆದರೆ ಇಂದಿನ ಮನುಷ್ಯ ತನ್ನ ದುರಹಂಕಾರದಲ್ಲಿ ದೇವರನ್ನೇ ನಿರಾಕರಿಸಿಬಿಟ್ಟು ಆ ಅಜ್ಞಾನಜನ್ಯ ಭಾವನೆಯನ್ನು ಪರಿಪೂರ್ಣತೆಗೆ ಮುಟ್ಟಿಸಿದ್ದಾನೆ.

ಮನುಷ್ಯನ ಅತಿದೊಡ್ಡ ದೌರ್ಬಲ್ಯವೇನೆಂದರೆ ಅವನು ಐಶ್ವರ್ಯ ಮತ್ತು ಅಧಿಕಾರವನ್ನು ಪಡೆದು ಬಹಳ ಬೇಗ ಎಡುವುತ್ತಾನೆ. ತನ್ನನ್ನು ತಾನು ಮರೆತು ಬಿಡುತ್ತಾನೆ. ಆತ ಸಜ್ಜನನೂ ಸುಧಾರಕನೂ ಆಗುವ ಬದಲು ಅಕ್ರಮ-ಅನ್ಯಾಯಗಳ ಸಾಕಾರ ಮೂರ್ತಿಯಾಗಿ ಬಿಡುತ್ತಾನೆ. ಹಿಂದೆಯೂ ಹೀಗೆಯೇ ಆಗಿದೆ. ವಿಜ್ಞಾನ-ತಂತ್ರಜ್ಞಾನದ ಎಲ್ಲ ಪ್ರಗತಿಗಳ ಹೊರತಾಗಿಯೂ ಮನುಷ್ಯನು ಇಂದಿಗೂ ಅದೇ ದೌರ್ಬಲ್ಯದಲ್ಲಿ ಸಿಲುಕಿದ್ದಾನೆ. ಇಂದು ಜಗತ್ತಿನೆಲ್ಲೆಡೆ ಅಶಾಂತಿ ಗೊಂದಲಗಳು ಹರಡಿಕೊಂಡಿವೆ. ಜಗತ್ತಿನ ಬೃಹತ್ ಶಕ್ತಿಗಳು ಈ ಅಶಾಂತಿ ಗೊಂದಲಗಳನ್ನು ಹೆಚ್ಚಿಸುವುದರಲ್ಲಿ ನಿರತವಾಗಿವೆ. ತಿಳಿದೂ ತಿಳಿದೂ ಜಗತ್ತನ್ನು ಅವರು ಅಣು ಯುದ್ಧದ ವಿನಾಶದೆಡೆಗೆ ತಳ್ಳುತ್ತಿದ್ದಾರೆ. ಅದರ ಹಿಂದಿರುವುದು ಮಾನವನ ಇದೇ ದೌರ್ಬಲ್ಯವಾಗಿದೆ. ಆಧುನಿಕ ಯುಗದ ಮನುಷ್ಯನು ವಿಜ್ಞಾನ ತಂತ್ರಜ್ಞಾನದ ಪ್ರಗತಿಯ ಉತ್ತುಂಗಕ್ಕೆ ತಲುಪಿಯೂ ಈ ದೌರ್ಬಲ್ಯಕ್ಕೆ ಯಾವ ಚಿಕಿತ್ಸೆಯನ್ನೂ

ಕಂಡುಕೊಂಡಿಲ್ಲ. ಬಾಹ್ಯಾಂತರಿಕ್ಷದಲ್ಲಿ ಸಂಚರಿಸುವ, ಭೂಮಿಯನ್ನು ಸುತ್ತಾಡುವ, ಚಂದ್ರನನ್ನು ಜಯಿಸಿ ಮಂಗಳಗ್ರಹದತ್ತ ಧಾವಿಸಿರುವ ಮಾನವನು ಭೂಮಿಯ ಮೇಲೆ ಮಾನವನಾಗಿ ಜೀವಿಸಲು ಮಾತ್ರ ಸಮರ್ಥನಾಗಲಿಲ್ಲ.

ಈ ದೌರ್ಬಲ್ಯದ ಏಕೈಕ ಸಿದ್ಧೌಷಧ ಮನುಷ್ಯನಿಗೆ ಅವನ ನೈಜ ನೆಲೆಯನ್ನು ತಿಳಿಸುವುದಾಗಿದೆ. ಆತನನ್ನು ನಾಸ್ತಿಯಿಂದ ಅಸ್ತಿತ್ವಕ್ಕೆ ತಂದವನು ವಿಶ್ವದ ಸೃಷ್ಟಿಕರ್ತನಾಗಿದ್ದಾನೆ. ಅವನಿಗೆ ಅತ್ಯುತ್ತಮ ಶಕ್ತಿ-ಸಾಮರ್ಥ್ಯಗಳನ್ನು ನೀಡಿ ಅವನನ್ನು ಪರಿಪಾಲಿಸುತ್ತಿರುವವನು, ಆ ದೇವನೇ ಆಗಿದ್ದಾನೆ. ಮನುಷ್ಯನು ಅಡಿಯಿಂದ ಮುಡಿತನಕ ಅವನ ಆಶ್ರಿತನಾಗಿದ್ದಾನೆ. ಆತನ ದಾಸ್ಯ ಮತ್ತು ವಿಧೇಯತೆಯ ಜೀವನವೇ ಅವನ ನೈಜ ನೆಲೆಯಾಗಿದೆ. ಅವನು ತನ್ನೆಲ್ಲ ನಡೆ-ನುಡಿಗಳಿಗೆ ಆತನ ಮುಂದೆ ಜವಾಬ್ದಾರನಾಗಿದ್ದಾನೆ.

ಸೃಷ್ಟಿಕರ್ತನಾದ ದೇವನ ಸರಿಯಾದ ಕಲ್ಪನೆ ಮತ್ತು ಅವನ ಮುಂದೆ ಹೊಣೆಗಾರಿಕೆಯ ನಂಬಿಕೆಯೇ ಮನುಷ್ಯನು ಐಶ್ವರ್ಯ ಮತ್ತು ಆಧಿಪತ್ಯದ ಔನ್ನತ್ಯಗಳಿಗೆ ತಲುಪಿಯೂ ಎಡವಿಬೀಳದಂತೆ ಅವನನ್ನು ರಕ್ಷಿಸಬಲ್ಲುದು. ಈ ಒಂದು ನಂಬಿಕೆಯ ಹೊರತು ಬೇರಾವ ಉಪಾಯದಿಂದಲೂ ಮನುಷ್ಯನನ್ನು ನಿಯಂತ್ರಣದಲ್ಲಿಟ್ಟಿರುವುದು ಸಾಧ್ಯವಿಲ್ಲವೆಂಬುದಕ್ಕೆ ಮಾನವ ಇತಿಹಾಸ ಸಾಕ್ಷಿಯಾಗಿದೆ.

ನಾಸ್ತಿಕತೆ ಇಲ್ಲವೇ ಪ್ರಕೃತಿಯ ಭಯ

ಹಿಂದೆ ಮನುಷ್ಯನು ಬಲಹೀನನಾಗಿದ್ದ, ಆದ್ದರಿಂದ ಅವನಿಗೆ ಒಬ್ಬ ದೇವರನ್ನು ನಂಬುವುದು ಅನಿವಾರ್ಯವಾಗಿತ್ತು. ಆದರೆ ಇಂದಿನ ಮಾನವನು ದುರ್ಬಲನಲ್ಲ. ಅವನಲ್ಲಿ ಅಸಾಮಾನ್ಯ ಶಕ್ತಿ-ಸಾಮರ್ಥ್ಯಗಳು ಬಂದು ಬಿಟ್ಟಿವೆ. ಆದ್ದರಿಂದ ಅವನು ಕಾಣದ ದೇವರ ಮುಂದೆ ಮಂಡಿಯೂರಬೇಕಾದ ಅಗತ್ಯವಿಲ್ಲ. ಅವನು ತನ್ನ ಸಮಸ್ಯೆಗಳನ್ನು ತಾನೇ ಪರಿಹರಿಸಿಕೊಳ್ಳಬಲ್ಲವನಾಗಿದ್ದಾನೆ ಎಂದು ಹೇಳಲಾಗುತ್ತದೆ. ಆದರೆ ಇದು ಅತಿದೊಡ್ಡ ಆತ್ಮವಂಚನೆಯಾಗಿದೆ. ಮನುಷ್ಯನು ಹಿಂದೆಯೂ ದುರ್ಬಲನಾಗಿದ್ದ ಇಂದಿಗೂ ದುರ್ಬಲನಾಗಿದ್ದಾನೆ. ಹಿಂದೆಯೂ ಆತ ಒಂದು ಸೃಷ್ಟಿಯಾಗಿದ್ದ. ಇಂದಿಗೂ ಅವನ ಈ ನೆಲೆಯಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ತನಗೆ ಪ್ರಕೃತಿಯು ದಯಪಾಲಿಸುವ ಶರೀರ, ರೂಪ, ಬಣ್ಣ ಮತ್ತು ಸಾಮರ್ಥ್ಯಗಳಲ್ಲಿ ಯಾವುದೇ ಬದಲಾವಣೆ ಮಾಡಲಿಕ್ಕಾಗಲಿ, ಅವುಗಳಲ್ಲಿ ತನಗೆ ಬೇಕಾದುದನ್ನು ಆರಿಸಿಕೊಳ್ಳಲಿಕ್ಕಾಗಲಿ ಅವನಿಗೆ ಅವಕಾಶವಿಲ್ಲ. ಅವನು ತನ್ನ ಹುಟ್ಟು ಯಾವ ಮನೆತನದಲ್ಲಿ ಎಲ್ಲಿ ಮತ್ತು ಯಾವ ಪರಿಸ್ಥಿತಿಯಲ್ಲಾಗಬೇಕೆಂದು ನಿರ್ಧರಿಸುವ ಶಕ್ತಿಯನ್ನು ಪಡೆಯುವುದು ಎಂದಿಗೂ ಸಾಧ್ಯವಿಲ್ಲ.

ಮನುಷ್ಯನು ಹುಟ್ಟುವಾಗ ಕೇವಲ ಒಂದು ಮಾಂಸದ ಮುದ್ದೆಯಂತಿರುತ್ತಾನೆ. ಅದಕ್ಕೆ ಸರಿಯಾದ ಪಾಲನೆ-ಪೋಷಣೆ ಮತ್ತು ಮೇಲ್ನೋಟ ಸಿಗದೆ ಹೋದರೆ ಅದರ ಸಾಮರ್ಥ್ಯಗಳ ಬೆಳವಣಿಗೆಯಂತಿರಲಿ, ಅದು ಬದುಕಿರುವುದು ಕೂಡಾ ಅಸಾಧ್ಯವಾಗುತ್ತದೆ.

ಬೆಳೆದು ಯುವಕನಾದಾಗ ಅವನಲ್ಲಿ ಮಾನವ ಸಾಮರ್ಥ್ಯಗಳು ಉತ್ತುಂಗದಲ್ಲಿರುತ್ತವೆ ಯಾದರೂ ಮುದಿತನವು ಅವನ ಶಕ್ತಿ-ಸಾಮರ್ಥ್ಯಗಳನ್ನೆಲ್ಲಾ ಒಂದೊಂದಾಗಿ ಕಳಕೊಳ್ಳು ವಂತೆ ಮಾಡುತ್ತದೆ. ಮತ್ತೆ ಸಾವು ಅವನ ಜೀವನಕ್ಕೇ ಚರಮ ಗೀತೆ ಹಾಡುತ್ತದೆ. ಈ ಎಲ್ಲ ವಿಷಯಗಳಲ್ಲಿ ಮನುಷ್ಯನು ಹಿಂದಿನಂತೆ ಈಗಲೂ ಸಂಪೂರ್ಣ ವಿವಶನಾಗಿದ್ದಾನೆ.

ಮನುಷ್ಯನು ಗಾಳಿ, ಬೆಳಕು, ನೀರು, ಆಹಾರಗಳಿಲ್ಲದೆ ಬದುಕುವುದು ಸಾಧ್ಯವೇ ಇಲ್ಲ. ರೋಗರುಜಿನಗಳು ಅವನನ್ನು ಸದಾ ಕಾಡುತ್ತಿರುತ್ತವೆ. ರೋಗಗಳ ನಿಯಂತ್ರಣದ ಎಲ್ಲ ವಾದಗಳ ಹೊರತಾಗಿಯೂ ಹಳೆಯ ರೋಗಗಳು ನಿಯಂತ್ರಣಕ್ಕೆ ಬರುವುದಕ್ಕಿಂತ ಮುಂಚೆಯೇ ಹೊಸ ರೋಗಗಳು ಹುಟ್ಟಿಕೊಳ್ಳುತ್ತವೆ. ಕ್ಯಾನ್ಸರ್ ಇನ್ನೂ ನಿಯಂತ್ರಣಕ್ಕೆ ಬಂದಿಲ್ಲ. ಅದಕ್ಕೆ ಮೊದಲೇ ಮಾರಕ ಏಯ್ಡ್ಸ್ ರೋಗವು ಮಾನವಕುಲವನ್ನು ಚಿಂತೆಗೀಡು ಮಾಡಿದೆ. ಮನುಷ್ಯನಿಂದು ತನ್ನ ರಕ್ಷಣೆಗೆಂದು ಕೂಡಿಟ್ಟ ಶಸ್ತ್ರಾಸ್ತ್ರಗಳಿಂದಲೇ ಅತ್ಯಧಿಕ ಚಿಂತಿತನಾಗಿದ್ದಾನೆ. ಅಣು ಬಾಂಬ್, ಹೈಡ್ರೋಜನ್ ಬಾಂಬ್ ಇತ್ಯಾದಿಗಳ ಸಂಗ್ರಹವು ಇಡೀ ಮಾನವಕುಲವನ್ನು ನಾಶ ಮಾಡಲು ಪರ್ಯಾಪ್ತವಿದೆ. ತನ್ನ ವಿನಾಶಕ್ಕಾಗಿ ತನ್ನ ಕರಗಳಿಂದ ಶೇಖರಿಸಿಟ್ಟಿರುವ ಈ ಮಾರಕಾಸ್ತ್ರಗಳಿಂದ ಜಗತ್ತಿಗೆ ಹೇಗೆ ಮುಕ್ತಿ ನೀಡುವುದೆಂಬುದೇ ಈಗ ಅವನ ದೊಡ್ಡ ಚಿಂತೆಯಾಗಿದೆ. ಹಿಂದೆ ಮನುಷ್ಯನ ಮೇಲೆ ನೆಲ, ಜಲ ಮತ್ತು ವಾಯುವಿನಿಂದ ಸಾವು ಮತ್ತು ವಿನಾಶದ ಮಳೆಗೆರೆಯುತ್ತಿತ್ತು. ಆದರೆ ಈಗ ಈ ವಿನಾಶ ವರ್ಷವು ಅಂತರಿಕ್ಷದಿಂದಲೂ ಆಗುತ್ತಿದೆ. ಪ್ರಾಕೃತಿಕ ದುರಂತಗಳು ಮೊದಲೂ ಮನುಷ್ಯನ ಮೇಲೆ ಎರಗುತ್ತಿದ್ದುವು. ಆದರೆ ಇಂದು ಮಾನವನ ವೈಜ್ಞಾನಿಕ ಸಂಶೋಧನೆಗಳಿಂದಾಗಿ ಯಾಂತ್ರಿಕ ದುರಂತಗಳೂ ಅವನ ಮೇಲೆರಗುತ್ತಿವೆ. ಈ ಹಿಂದೆಯೂ ಮನುಷ್ಯನು ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿದ್ದನು, ಆದರೆ ಇಂದು ಆ ಸಮಸ್ಯೆಗಳು ಅಪರಿಹಾರ್ಯವೆನ್ನುವಷ್ಟರ ಮಟ್ಟಿಗೆ ಸಿಕ್ಕಾಗಿವೆ. ಒಟ್ಟಿನಲ್ಲಿ ಮಾನವನು ಹಿಂದಿಗಿಂತಲೂ ಹೆಚ್ಚು ಇಂದು ಬಲಹೀನನಾಗಿ ಮಾರ್ಪಟ್ಟಿರುವನು. ಸಿರಿವಂತರು ಮತ್ತು ಆಡಳಿತಗಾರರು ಹಿಂದಿನಂತೆ ಇಂದೂ ಇತರ ಮನುಷ್ಯರನ್ನು ಆಶ್ರಯಿಸಿದ್ದಾರೆ. ಈ ಆಶ್ರಯ ತಪ್ಪಿ ಹೋದರೆ ಅತಿದೊಡ್ಡ ವ್ಯಕ್ತಿ ಕೂಡಾ ಸಾಮಾನ್ಯರಲ್ಲಿ ಸಾಮಾನ್ಯನಾಗಿ ಬಿಡುತ್ತಾನೆ.

ಈ ದೃಷ್ಟಿಕೋನದಿಂದಾಗಿ ಮಾನವನು ತನ್ನ ಭವಿಷ್ಯದ ಬಗ್ಗೆ ನಿರಾಶನಾಗಿ ತನ್ನ ಪೂರ್ಣ ಜೀವನವನ್ನು ಭಯಾಶಂಕೆಯಲ್ಲಿ ಕಳೆಯ ಬೇಕಾದೀತು. ಬ್ರಿಟಿಷ್ ತತ್ವಜ್ಞಾನಿ ಮತ್ತು ಖ್ಯಾತ ನಾಸ್ತಿಕ ಬರ್ಟ್ರಾಂಡ್ ರಸ್ಸೆಲ್ ವಿಶ್ವದ ಭೌತಿಕ ವಿವರಣೆ ನೀಡುತ್ತಾ ಹೀಗೆ ಹೇಳಿರುವನು,

'ಮನುಷ್ಯನು ಅಂಧಪ್ರಕೃತಿಯ ಕೈಯಲ್ಲಿ ಒಂದು ಉದ್ದೇಶ ರಹಿತ ಆಟಿಕೆಯಾಗಿದ್ದಾನೆ. ಅವನ ಹುಟ್ಟು, ಬೆಳವಣಿಗೆ, ಬಯಕೆ, ಬೇಡಿಕೆ, ಕಲ್ಪನೆ, ಶ್ರದ್ಧೆ, ನಂಬಿಕೆಗಳೆಲ್ಲವೂ ಜೀವಕೋಶಗಳ ಸಂಯೋಜನೆಯ ಪರಿಣಾಮವಾಗಿದೆ. ಅವನ ಜೀವನದ ಕೊನೆ ಸಮಾಧಿಯಾಗಿದೆ. ಅದರ ನಂತರ ಯಾವುದೇ ಭಾವನೆ ಮತ್ತು ಸಿದ್ಧಾಂತ ಅವನಿಗೆ ಜೀವನ

ನೀಡಲಾರದು. ಶತಮಾನಗಳ ಪರಿಶ್ರಮ, ಧ್ಯೇಯನಿಷ್ಠೆ, ಮೇಧಾವಿತ್ವದ ಸಾಧನೆಗಳೆಲ್ಲವೂ ಸೌರಮಂಡಲದೊಂದಿಗೆ ಕೊನೆಗೊಳ್ಳಲಿದೆ. ವಿಶ್ವವು ಅಡಿಮೇಲಾಗುವಾಗ ಮನುಷ್ಯನ ಉತ್ಕೃಷ್ಟತೆಗಳೆಲ್ಲವೂ ಅದರ ಅವಶೇಷಗಳಡಿಯಲ್ಲಿ ಅಪ್ಪಚ್ಚಿಯಾಗುವುವು.'

ಎಷ್ಟು ಭೀಕರ ಮತ್ತು ನಿರಾಶಾದಾಯಕ ದೃಷ್ಟಿಕೋನವಿದು. ಇದು ಯಾರಿಗೆ ಮೆಚ್ಚುಗೆಯಾಗುತ್ತದೋ ಅವರು ಅದನ್ನು ನಿಸ್ಸಂಕೋಚವಾಗಿ ಸ್ವೀಕರಿಸಿಕೊಳ್ಳಬಹುದು. ನಮಗಂತೂ ಯಾವುದು ವಾಸ್ತವಿಕತೆಗೆ ಅತ್ಯಂತ ನಿಕಟವಾದುದೆಂದು ಭಾಸವಾಗುತ್ತದೋ ಅದು ಮಾನವನು ಪ್ರಕೃತಿಯ ಕುರುಡು-ಕಿವುಡು ಶಕ್ತಿಗಳ ಕೈಯಲ್ಲಿ ಕೇವಲ ಆಟಿಕೆ ಯಾಗಿರದೆ ವಿಶ್ವದ ಸಾರ್ವಭೌಮನ ಪ್ರಜೆಯಾಗಿರುವನು ಎಂಬುದಾಗಿದೆ. ಆ ಸಾರ್ವಭೌಮನು ವಿಶ್ವವನ್ನು ಪೂರ್ಣಜ್ಞಾನ ಮತ್ತು ಅತ್ಯಧಿಕ ಜಾಣ್ಮೆಯೊಂದಿಗೆ ವ್ಯವಸ್ಥೆಗೊಳಿಸುತ್ತಿದ್ದಾನೆ. ಅವನು ತನ್ನ ಸೃಷ್ಟಿಗಳ ಮೇಲೆ ಅತ್ಯಧಿಕ ಕರುಣಾಮಯಿಯಾಗಿರುತ್ತಾನೆ. ಯಾರು ಅವನ ಇಷ್ಟದಂತೆ ಬಾಳುವೆ ನಡೆಸುತ್ತಾರೋ ಅವರ ಪಾಲಿಗೆ ಅವನ ಸಹಾಯ ಮತ್ತು ಕೃಪಾಕಟಾಕ್ಷವು ತೆರೆದಿರುತ್ತದೆ. ವಿಶ್ವದ ಎಲ್ಲ ಶಕ್ತಿಗಳೂ ಅವನೊಂದಿಗೆ ಸಮನ್ವಯ ಗೊಳ್ಳುತ್ತವೆ. ಲೋಕದ ಯಾವ ಶಕ್ತಿಯೂ ಇಂಥವರ ಕೂದಲನ್ನು ಕೊಂಕಿಸಲಾರದು. ದೇವವಿಶ್ವಾಸ ಮತ್ತು ದೇವ ವಿಧೇಯತೆಯ ಈ ಸಿದ್ಧಾಂತವು ಸರಿಯಾಗಿರುವುದು ಮಾತ್ರವಲ್ಲ ಅದು ಮನುಷ್ಯನನ್ನು ಭಯಾಶಂಕೆ, ನಿರಾಶೆಗಳಿಂದ ರಕ್ಷಿಸಿ ಅವನಲ್ಲಿ ಆಶಾವಾದ ಮತ್ತು ನಿರ್ಭಯತೆಯನ್ನು ಉದ್ದೀಪನಗೊಳಿಸುತ್ತದೆ.

ಭಯ ಮತ್ತು ನಿರಾಶೆಯು ವ್ಯಕ್ತಿ ಮತ್ತು ಜನಾಂಗಗಳ ಮಟ್ಟಿಗೆ ಮರಣ ಮೃದಂಗವಾಗಿದೆಯೆಂಬುದು ಒಂದು ಚಾರಿತ್ರಿಕ ಮತ್ತು ಮನೋವೈಜ್ಞಾನಿಕ ವಾಸ್ತವಿಕತೆ ಯಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ನಿರ್ಭಯತೆ ಮತ್ತು ಆಶಾವಾದವು ವ್ಯಕ್ತಿ ಮತ್ತು ಜನಾಂಗಗಳಿಗೆ ಸಂಜೀವಿನಿಯಾಗಿದೆ. ಅವರನ್ನು ಅದು ಪ್ರಗತಿಯ ಉನ್ನತಿಯೆಡೆಗೆ ತಲುಪಿಸಿ ಅವರ ದುಃಖ ದುಮ್ಮಾನಗಳನ್ನು ಅಳಿಸುತ್ತದೆ. ಈ ಎರಡು ಅಸ್ತ್ರಗಳು ಕೈಯಲ್ಲಿದ್ದರೆ ಪರಿಸ್ಥಿತಿ ಎಷ್ಟೇ ಪ್ರತಿಕೂಲವಾಗಿದ್ದರೂ ಅದನ್ನು ಬದಲಿಸುವ ನಿರೀಕ್ಷೆ ಜೀವಂತವಾಗಿರುತ್ತದೆ.

ದಯೆ-ದಾಕ್ಷಿಣ್ಯಗಳಿಲ್ಲದ ಅಂಧ-ಬಧಿರ ಶಕ್ತಿಗಳು ಈ ಭೌತಿಕ ಜಗತ್ತಿನಲ್ಲಿ ಮನುಷ್ಯನನ್ನು ಹರಿದು ತಿನ್ನಲು ಮುಂದಾಗಿರುವಾಗ, ಆಡಳಿತ ವರ್ಗ ಮತ್ತು ಐಶ್ವರ್ಯ ವಂತರು ಅವನನ್ನು ಎಲ್ಲ ರೀತಿಯ ಶೋಷಣೆಗೆ ಒಳಪಡಿಸಿರುವಾಗ, ದೇವವಿಶ್ವಾಸ ಒಂದು ಮಾತ್ರ ದುರ್ಬಲರನ್ನು ಭಯ ಮತ್ತು ನಿರಾಶೆಯಿಂದ ರಕ್ಷಿಸಬಲ್ಲುದು.

ಲಾಭ-ನಷ್ಟಗಳು, ಜೀವನ-ಮರಣಗಳು ತನ್ನ ನಿಯಂತ್ರಣದಲ್ಲೂ ಇಲ್ಲ, ಇತರ ಮನುಷ್ಯರ ನಿಯಂತ್ರಣದಲ್ಲೂ ಇಲ್ಲ. ಪ್ರಕೃತಿಯ ಅಂಧ-ಬಧಿರ ಶಕ್ತಿಗಳ ಕೈಯಲ್ಲೂ ಇಲ್ಲ. ಎಲ್ಲವೂ ಕೇವಲ ಸೃಷ್ಟಿಕರ್ತನಾದ ಅಲ್ಲಾಹನ ಕೈಯಲ್ಲಿದೆ. ಆದ್ದರಿಂದ ಆಡಳಿತ ವರ್ಗ, ಐಶ್ವರ್ಯವಂತರು ಮತ್ತು ಪ್ರಾಕೃತಿಯ ಅಂಧ-ಬಧಿರ ಶಕ್ತಿಗಳನ್ನು ಭಯಪಡುವ ಅಗತ್ಯವೇ ಇಲ್ಲ. ಎಲ್ಲ ಶಕ್ತಿ-ಸಾಮರ್ಥ್ಯಗಳೂ ಅಲ್ಲಾಹನ ಕೈಯಲ್ಲಿದ್ದು ಅವನೊಬ್ಬನೇ ಈ ಎಲ್ಲ ಶಕ್ತಿಗಳನ್ನೂ ನೋಡಿಕೊಳ್ಳಲು ಸಮರ್ಥನಿದ್ದಾನೆ.

ದೇವರನ್ನು ನಿರಾಕರಿಸುತ್ತಲೇ ಈ ಪ್ರಬಲ ಶಕ್ತಿ ನಮ್ಮಿಂದ ಹೊರಟು ಹೋಗುತ್ತದೆ. ಆದ್ದರಿಂದಲೇ ನಾಸ್ತಿಕರಿಗೆ ಭೌತಿಕ ಸಂಪನ್ಮೂಲಗಳು ಕೈಕೊಟ್ಟಾಗ ಜೀವನವು ಅವರ ಪಾಲಿಗೆ ಅಂಧಕಾರಮಯವಾಗುತ್ತದೆ ಮತ್ತು ಅವರು ತಮ್ಮ ಯಾತನಾಮಯ ಜೀವನಕ್ಕೆ ಆತ್ಮಹತ್ಯೆಯ ಮೂಲಕ ತೆರೆಯೆಳೆಯುತ್ತಾರೆ ಅಥವಾ ಅವರು ಅನ್ಯಾಯ-ಅತ್ಯಾಚಾರಗಳ ಮುಂದೆ ಮಂಡಿಯೂರುತ್ತಾರೆ. ಕಮ್ಯೂನಿಷ್ಟರ ಹೀರೋ ಆಗಿದ್ದ ಕ್ರುಶ್ಚೇವ್ ಮತ್ತು ಅವನ ಸಂಗಾತಿಗಳು ಅವರ ದೃಷ್ಟಿಯಲ್ಲಿ ಸರ್ವಾಧಿಕಾರಿಯಾಗಿದ್ದ ಸ್ಟಾಲಿನ್‌ರ ದಬ್ಬಾಳಿಕೆಗಳ ಮುಂದೆ ಮಂಡಿಯೂರಿದಂತೆ.

ನಾಸ್ತಿಕರ ಪುರಾವೆಗಳು

ಇನ್ನು ನಾಸ್ತಿಕರು ದೇವಾಸ್ತಿತ್ವವನ್ನು ನಿರಾಕರಿಸಲಿಕ್ಕೆ ಮುಂದಿಡುವ ಪುರಾವೆಗಳು ಮತ್ತು ಅವುಗಳ ತಾರ್ಕಿಕತೆಯ ಕಡೆಗೆ ಗಮನ ಹರಿಸೋಣ. ದೇವಾಸ್ತಿತ್ವದ ನಿರಾಕರಣೆಗೆ ಅವರು ಮುಂದಿಡುವ ಆಧಾರ-ಪ್ರಮಾಣಗಳಲ್ಲಿ, ಅತ್ಯಂತ ಪ್ರಮುಖವಾದುದು 'ದೇವರು ನಮಗೆ ಕಾಣಿಸುತ್ತಿಲ್ಲ' ಎಂಬುದಾಗಿದೆ. 'ದೇವರು ಇದ್ದರೆ ಖಂಡಿತ ನಮಗೆ ಕಾಣಿಸುತ್ತಿದ್ದ. ವಿಶ್ವವು ಯಾವ ರೀತಿ ನಮಗೆ ಅನುಭವವಾಗುತ್ತದೋ ಅದೇ ರೀತಿ ನಾವು ಅದನ್ನು ಒಪ್ಪುತ್ತೇವೆ. ದೇವರು ನಮ್ಮ ಅನುಭವಕ್ಕೆ ಬಾರದೆ ಇರುವುದರಿಂದ ವಿಶ್ವಕ್ಕೆ ಒಬ್ಬ ದೇವನಿದ್ದಾನೆಂದು ಒಪ್ಪುವಂತಿಲ್ಲ. ಇದು ವಿಜ್ಞಾನ ಯುಗ. ಈಗ ಯಾವುದನ್ನೂ ಪ್ರಯೋಗ, ಅನುಭವಗಳ ಹೊರತು ಅಂಗೀಕರಿಸಲಾಗುವುದಿಲ್ಲ. ವಿಶ್ವದಲ್ಲಿ ಇರುವುದೆಲ್ಲ ಅಣುಗಳಾಗಿವೆ. ಅಣುಗಳು ಮತ್ತು ಅದರ ವಿವಿಧ ರೂಪಗಳಲ್ಲದೆ ಯಾವ ವಸ್ತುವೂ ಇಲ್ಲಿ ಗೋಚರಿಸುವುದಿಲ್ಲ. ದೇವರು ಆತ್ಮ ಎಂಬುದೆಲ್ಲಾ ಮಾನವ ಮಸ್ತಿಷ್ಕದ ಸೃಷ್ಟಿಯಾಗಿದೆ.'

ಈ ಎಲ್ಲ ವಾದಗಳ ಸಾರವು ದೇವರು ನಮ್ಮ ಇಂದ್ರಿಯಗಳಿಗೆ ನಿಲುಕದ ಕಾರಣ ಅವನ ಅಸ್ತಿತ್ವವಿಲ್ಲವೆಂದಾಗಿದೆ. ಈ ವಾದದ ವೈಜ್ಞಾನಿಕ ವಿಶ್ಲೇಷಣೆ ಮಾಡಿದಾಗ ಇದರಿಂದ ಮೂರು ಅಂಶಗಳು ನಮ್ಮ ಮುಂದೆ ಬರುತ್ತವೆ;

1. ಯಾವುದೇ ವಸ್ತುವಿನ ಜ್ಞಾನದ ಮೂಲ ಇಂದ್ರಿಯಗಳಾಗಿವೆ. ಇಂದ್ರಿಯಗಳ ಹೊರತು ಇತರ ಯಾವುದೇ ಮೂಲದಿಂದ ಯಾವುದೇ ವಿಷಯ ತಿಳಿಯುವುದು ಸಾಧ್ಯವಿಲ್ಲ.

2. ಯಾವುದೇ ವಸ್ತುವಿನ ಬಗ್ಗೆ ತಿಳುವಳಿಕೆ ಇಲ್ಲದಿರುವುದರ ಅರ್ಥ ಆ ವಸ್ತು ಇಲ್ಲವೆಂದಾಗಿದೆ.

3. ದೇವಾಸ್ತಿತ್ವವು ಇಂದ್ರಿಯಗಳ ಮೂಲಕ ತಿಳಿಯುವುದಿಲ್ಲ.

ನಾಸ್ತಿಕರ ಪುರಾವೆಯಲ್ಲಿ ಈ ಮೂರು ಅಂಶಗಳು ಒಳಗೊಂಡಿವೆ. ಈ ಪೈಕಿ ಯಾವುದೇ ಒಂದು ಅಂಶವು ತಪ್ಪೆಂದು ರುಜುವಾದರೆ ಈ ಪುರಾವೆಯೇ ಕೊನೆಗೊಳ್ಳುತ್ತದೆ. ಉದಾ; ಇಂದ್ರಿಯಗಳು ಮಾತ್ರ ಜ್ಞಾನ ಸಂಪಾದನೆಯ ಏಕೈಕ ಮೂಲವಲ್ಲ. ಇತರ ಮೂಲಗಳಿಂದಲೂ ಯಾವುದಾದರೂ ವಸ್ತುವಿನ ಕುರಿತು ತಿಳಿಯುವುದು ಸಾಧ್ಯ ಎಂದು

ಸಾಬೀತಾದರೆ ಈ ವಾದದ ಬಲವೇ ಕುಸಿದು ಬಿಡುತ್ತದೆ. ಭಾಷಣ ಮತ್ತು ಲೇಖನ ಗಳೆರಡರಿಂದಲೂ ಜ್ಞಾನಗಳಿಸಬಹುದು. ಆದ್ದರಿಂದ ಭಾಷಣ ಕೇಳದವನಿಗೆ ಜ್ಞಾನವಿಲ್ಲ ವೆಂದು ನೀವು ವಾದಿಸುವಂತಿಲ್ಲ. ಏಕೆಂದರೆ ಅವನು ಗ್ರಂಥಗಳ ಮೂಲಕ ಜ್ಞಾನ ಗಳಿಸಿರಬಹುದು. ಅಂತೆಯೇ ಪಂಚೇಂದ್ರಿಯಗಳು ಜ್ಞಾನಗಳಿಕೆಯ ಏಕೈಕ ಮೂಲವಾಗಿರದೆ ಅದರ ಹೊರತು ಜ್ಞಾನ ಸಂಪಾದನೆಯ ಇತರ ಮೂಲಗಳೂ ಇರಬಹುದು ಎಂದಾದರೆ ನಿಮ್ಮ ವಾದವೇ ಕೊನೆಗೊಳ್ಳುತ್ತದೆ. ದೇವರು ಇಂದ್ರಿಯಗಳಿಗೆ ಎಟಕದ ಕಾರಣ ಅವನ ಅಸ್ತಿತ್ವವೇ ಇಲ್ಲ ಎನ್ನುವಂತಿಲ್ಲ. ಏಕೆಂದರೆ ಇನ್ನಾವುದೇ ಮೂಲದಿಂದ ದೇವರ ಬಗ್ಗೆ ತಿಳುವಳಿಕೆ ಗಳಿಸಬಹುದಾಗಿದೆ.

ವಾದದ ಎರಡನೆಯ ಅಂಶದಲ್ಲಿ ತಿಳಿಯದೇ ಇರುವುದನ್ನು ಇಲ್ಲದೇ ಇರುವುದಕ್ಕೆ ಪುರಾವೆ ಎನ್ನಲಾಗಿದೆ. ನಿಜವಾಗಿ ತಿಳಿದಿಲ್ಲ ಎಂಬುದು 'ಇಲ್ಲ' ಎಂಬುದರ ಪುರಾವೆಯಲ್ಲ. ದೇವರ ಬಗ್ಗೆ ನಮಗೆ ತಿಳಿದಿಲ್ಲ ಎಂದರೆ ದೇವರಿಲ್ಲ ಎಂದು ಅರ್ಥವಲ್ಲ. ದೇವಾಸ್ತಿತ್ವವನ್ನು ನಿರಾಕರಿಸಲು ಇದು ಪರ್ಯಾಪ್ತ ಪುರಾವೆಯಲ್ಲ.

ದೇವರು ಇಂದ್ರಿಯಗಳಿಗೆ ಎಟಕುವುದಿಲ್ಲ ಅಥವಾ ಎಟಕಲಾರ ಎಂಬುದನ್ನು ತಪ್ಪೆಂದು ಸಾಬೀತು ಪಡಿಸಿದರೆ ಮೇಲಿನ ಎರಡು ಅಂಶಗಳು ಸರಿಯೆಂದು ಸಾಬೀತಾದರೂ ಈ ವಾದದ ಕಟ್ಟಡವೇ ಕುಸಿದು ಬೀಳುವುದು.

ಪಂಚೇಂದ್ರಿಯಗಳು ಜ್ಞಾನದ ಏಕೈಕ ಮಾಧ್ಯಮವೇ?

ಪಂಚೇಂದ್ರಿಯಗಳು ಜ್ಞಾನದ ಏಕೈಕ ಮೂಲವಾಗಿದೆ ಎಂಬುದು ಒಂದು ಸಿದ್ಧಗೊಂಡ ವಾಸ್ತವಿಕತೆಯಲ್ಲ. ಅದನ್ನು ಕೇವಲ ದೇವಾಸ್ತಿತ್ವದ ನಿರಾಕರಣೆಗಾಗಿ ಬಳಸಲಾಗುತ್ತದೆ. ವೈಚಾರಿಕವಾಗಿ ನೋಡಿದರೆ ಪಂಚೇಂದ್ರಿಯಗಳು ಜ್ಞಾನದ ಮೂಲವಾಗಿದೆ ಎಂದು ಮಾತ್ರ ಹೇಳಬಹುದೇ ಹೊರತು ಪಂಚೇಂದ್ರಿಯಗಳ ಹೊರತು ಜ್ಞಾನದ ಯಾವ ಮೂಲವೂ ಇಲ್ಲ ಎಂದು ಹೇಳಲಾಗದು.

ಯಾವುದೇ ಪ್ರಯೋಗದಿಂದಲೂ ಪಂಚೇಂದ್ರಿಯಗಳು ಜ್ಞಾನದ ಏಕೈಕ ಮೂಲ ಎಂಬುದು ದೃಢಪಟ್ಟಿಲ್ಲ. ಈ ತನಕ ಏನು ಆಗುತ್ತಿದೆ ಎಂಬುದನ್ನು ಮಾತ್ರ ಪ್ರಯೋಗ ತಿಳಿಸಬಲ್ಲುದು. ಏನೆಲ್ಲಾ ಆಗಬಲ್ಲುದು ಮತ್ತು ಏನು ಆಗಲು ಸಾಧ್ಯವಿಲ್ಲವೆಂಬುದಕ್ಕೆ ಪ್ರಯೋಗದಿಂದ ಯಾವುದೇ ಬೆಳಕು ಹರಿಯುವುದಿಲ್ಲ. ಈ ತನಕ ಯಾವ ಮೂಲಗಳಿಂದೆಲ್ಲಾ ಜ್ಞಾನ ಗಳಿಸಲಾಗುತ್ತಿತ್ತು ಎಂಬುದನ್ನು ಮಾತ್ರ ಪ್ರಯೋಗದಿಂದ ತಿಳಿಯಬಹುದು. ಜ್ಞಾನ ಗಳಿಕೆಯ ಎಲ್ಲ ಮೂಲಗಳನ್ನು ಕಂಡು ಹಿಡಿಯುವುದು ಯಾವುದೇ ಪ್ರಯೋಗದ ವ್ಯಾಪ್ತಿಯಿಂದ ಹೊರತಾದ ವಿಷಯವಾಗಿದೆ.

ಉದಾಹರಣೆಗೆ ಮಾನವ ಶರೀರದ ವ್ಯವಸ್ಥೆಯನ್ನು ತಿಳಿಯುವ ಜ್ಞಾನಶಾಖೆಯ ಕುರಿತು ನೋಡೋಣ. ಅದಕ್ಕೆ ಅನೇಕ ವಿಧಾನಗಳು ಮತ್ತು ಪರಿಕರಗಳ ಸಂಶೋಧನೆ

ಈಗಾಗಲೇ ಆಗಿದ್ದು ಇನ್ನಷ್ಟು ಸಂಶೋಧನೆಗಳು ಮುಂದುವರಿದಿವೆ. ಕ್ಷ-ಕಿರಣ (X-ray), ಅಲ್ಟ್ರಾಸೌಂಡ್, ಸ್ಕ್ಯಾನಿಂಗ್‌ಗಳು ಮನುಷ್ಯ ದೇಹದ ಒಳಗಿನ ಸ್ಥಿತಿಯನ್ನು ತಿಳಿಯುವುದನ್ನು ಬಹಳ ಸುಲಭಗೊಳಿಸಿವೆ. ಆದರೆ ಮಾನವ ದೇಹದೊಳಗಿನ ವ್ಯವಸ್ಥೆಯನ್ನು ಅರಿಯುವ ಮೂಲಗಳು ಇವು ಮಾತ್ರ. ಇದಲ್ಲದೆ ಬೇರೆ ಮೂಲಗಳಿರುವುದು ಸಾಧ್ಯವಿಲ್ಲವೆಂದು ಯಾರಾದರೂ ವಾದಿಸಿದರೆ ಅದು ಅವನ ಮೂರ್ಖತನದ ಸಂಕೇತವಾದೀತು.

ಇದೇ ರೀತಿ ವಿಶ್ವದ ಎಲ್ಲ ವ್ಯವಸ್ಥೆಗಳ ಕುರಿತೂ ಮನುಷ್ಯನಿಗೆ ತಿಳಿವಳಿಕೆಯ ಯಾವೆಲ್ಲ ಮೂಲಗಳು ಈಗ ಲಭ್ಯವಿದೆಯೋ ಅವು ಪರಿಪೂರ್ಣವೆಂದೋ ಅವುಗಳ ಹೊರತು ವಿಶ್ವದ ರಹಸ್ಯಗಳನ್ನು ಭೇದಿಸುವ ಬೇರಾವ ಮೂಲವೂ ಇಲ್ಲವೆಂದೋ ಯಾರೂ ವಾದಿಸುವಂತಿಲ್ಲ.

ಇದರಿಂದ ತಿಳಿಯುವುದೇನೆಂದರೆ ಅನುಭವ ಮತ್ತು ಪ್ರಯೋಗಗಳಿಂದ ಜ್ಞಾನ ಮೂಲಗಳನ್ನೆಲ್ಲಾ ತಿಳಿಯುವುದು ಅಸಾಧ್ಯ. ಈ ತನಕ ಯಾವ ಮೂಲಗಳಿಂದ ಜ್ಞಾನ ಪ್ರಾಪ್ತವಾಗುತ್ತಿತ್ತು ಎಂದು ನೀವು ಅನುಭವದ ಆಧಾರದಲ್ಲಿ ಹೇಳಬಹುದು. ಆದರೆ ಜ್ಞಾನಗಳಿಕೆಯ ಎಲ್ಲ ಮೂಲಗಳನ್ನು ಯಾರೂ ಅನುಭವ ಅಥವಾ ಪ್ರಯೋಗದ ಆಧಾರದಲ್ಲಿ ಕಂಡುಕೊಳ್ಳುವಂತಿಲ್ಲ. "ಪಂಚೇಂದ್ರಿಯಗಳು ಜ್ಞಾನ ಗಳಿಕೆಯ ಏಕೈಕ ಮಾಧ್ಯಮವೇ" ಎಂಬುದರ ಸಾಕ್ಷ್ಯವನ್ನು ನೀವು ಅನುಭವ ಅಥವಾ ಪ್ರಯೋಗದ ಆಧಾರದಲ್ಲಿ ಪಡೆಯಲು ಸಾಧ್ಯವಿಲ್ಲ. ಬುದ್ಧಿಯಾಗಲಿ, ಅನುಭವವಾಗಲಿ ಅದಕ್ಕೆ ಸಾಕ್ಷ್ಯ ನೀಡುವುದಿಲ್ಲ.

ಜ್ಞಾನದ ಯಾವೆಲ್ಲ ಮಾಧ್ಯಮಗಳಿರುವುದು ಸಾಧ್ಯ? ಅನುಭವದಿಂದ ಈ ಪ್ರಶ್ನೆಗೆ ಉತ್ತರ ನೀಡಲು ಖಂಡಿತ ಸಾಧ್ಯವಿಲ್ಲ. ಈ ತನಕ ಯಾವೆಲ್ಲ ಮಾಧ್ಯಮಗಳಿಂದ ಜ್ಞಾನಗಳಿಸಲಾಗುತ್ತಿತ್ತು ಎಂಬುದನ್ನು ಮಾತ್ರ ಅನುಭವವು ನಮಗೆ ತಿಳಿಸಬಲ್ಲುದು. ಈ ತನಕ ಮಾನವನಿಗೆ ಲಭಿಸಿದ ಜ್ಞಾನವೆಲ್ಲವೂ ಪಂಚೇಂದ್ರಿಯಗಳ ಮೂಲಕವೇ ಲಭಿಸಿತ್ತೇ? ಅಥವಾ ಜ್ಞಾನದ ಇತರ ಮಾಧ್ಯಮಗಳೂ ಇದ್ದುವೇ?

ಈ ಪ್ರಶ್ನೆಯ ಸಂಕ್ಷಿಪ್ತ ಉತ್ತರವೇನೆಂದರೆ ಪಂಚೇಂದ್ರಿಯಗಳು ಜ್ಞಾನದ ಏಕೈಕ ಮಾಧ್ಯಮವಲ್ಲ. ಅನೇಕ ಮಾಧ್ಯಮಗಳಿಂದ ಮನುಷ್ಯನಿಗೆ ಜ್ಞಾನ ಲಭಿಸುತ್ತದೆ. ಅವುಗಳ ಪೈಕಿ ಪಂಚೇಂದ್ರಿಯಗಳೂ ಒಂದು ಮಾಧ್ಯಮ. ಆದರೆ ಅದು ಅತ್ಯಂತ ಸೀಮಿತ ಮತ್ತು ದೋಷಪೂರ್ಣವಾಗಿದ್ದು ಅನೇಕ ವೇಳೆ ತಪ್ಪು ದಾರಿಗೆಳೆಯುವಂತಹದ್ದಾಗಿದೆ. ಜ್ಞಾನದ ಒಂದು ದೊಡ್ಡ ಭಾಗವು ಪಂಚೇಂದ್ರಿಯಗಳ ಹೊರತು ಇತರ ಮಾಧ್ಯಮಗಳಿಂದ ಲಭಿಸಿದ್ದಾಗಿದೆ. ಇದೊಂದು ನಿರಾಕರಿಸಲಾಗದ ವಾಸ್ತವಿಕತೆಯಾಗಿದೆ. ವಿಜ್ಞಾನದ ವಿವಿಧ ಶಾಖೆಗಳ ಅಲ್ಪಸ್ವಲ್ಪ ಮಾಹಿತಿ ಹೊಂದಿದವನೂ ಇದನ್ನು ಅಂಗೀಕರಿಸುತ್ತಾನೆ. ಆದರೆ ಧರ್ಮ ಮತ್ತು ದೇವರ ವಿಷಯ ಬಂದಾಗ ಈ ವಾಸ್ತವಿಕತೆಯನ್ನು ನಿರಾಕರಿಸಲಾಗುತ್ತಿರುವುದು ಒಂದು ಸೋಜಿಗವಾಗಿದೆ.

ಜ್ಞಾನದ ಪ್ರಥಮ ಮಾಧ್ಯಮ ಪಂಚೇಂದ್ರಿಯಗಳಾಗಿವೆ. ನಾವು ಕಣ್ಣಿನಿಂದ ನೋಡುತ್ತೇವೆ, ಕಿವಿಯಿಂದ ಕೇಳುತ್ತೇವೆ, ಮೂಗಿನಿಂದ ಮೂಸುತ್ತೇವೆ, ನಾಲಗೆಯಿಂದ ರುಚಿಸುತ್ತೇವೆ, ಕೈ ಮತ್ತು ಚರ್ಮದಿಂದ ಸ್ಪರ್ಶಿಸುತ್ತೇವೆ. ಈ ಪಂಚೇಂದ್ರಿಯಗಳು ಜ್ಞಾನದ ಮೂಲಭೂತ ಮತ್ತು ಪ್ರಾಥಮಿಕ ಮಾಧ್ಯಮವಾಗಿದೆಯೇ ಹೊರತು ಅಂತಿಮ ಮಾಧ್ಯಮವಲ್ಲ. ಪರಿಪೂರ್ಣ ಮಾಧ್ಯಮವೂ ಅಲ್ಲ. ಅಭೌತಿಕ ವಸ್ತುಗಳನ್ನಂತು ಪಂಚೇಂದ್ರಿಯಗಳಿಂದ ತಿಳಿಯುವುದೇ ಸಾಧ್ಯವಿಲ್ಲ. ಭೌತಿಕ ವಸ್ತುಗಳ ಪೈಕಿ ಕೇವಲ ಕೆಲವು ವಸ್ತುಗಳನ್ನು ಮಾತ್ರ ಪಂಚೇಂದ್ರಿಯಗಳ ಮೂಲಕ ತಿಳಿಯುವುದು ಸಾಧ್ಯ. ನಮ್ಮ ನಾಲಗೆಗೆ ಬಂದ ವಸ್ತುವನ್ನು ಮಾತ್ರ ನಾವು ರುಚಿಸಬಲ್ಲೆವು. ನಮ್ಮ ಶರೀರಕ್ಕೆ ತಾಗಿದ ವಸ್ತುಗಳ ಸ್ಪರ್ಶಜ್ಞಾನ ಮಾತ್ರ ನಮಗೆ ಆಗಲು ಸಾಧ್ಯ. ಮೂಗು ಕೆಲವು ಗಜಗಳಷ್ಟು ದೂರದ ವಸ್ತುಗಳ ವಾಸನೆಯನ್ನು ಮೂಸಬಲ್ಲದು. ಕಿವಿಯ ಆಲಿಸುವ ಶಕ್ತಿಯು ಇನ್ನೂ ಸ್ವಲ್ಪ ದೂರಕ್ಕೆ ಹೋಗಬಲ್ಲುದು. ಕಣ್ಣು ಅದಕ್ಕಿಂತಲೂ ಸ್ವಲ್ಪ ದೂರದ ವಸ್ತುಗಳನ್ನು ನೋಡಬಲ್ಲುದು. ಆದರೆ ದೂರದ ವಸ್ತುಗಳು ಚಿಕ್ಕದಾಗಿದ್ದರೆ ಅಥವಾ ಅದಕ್ಕೆ ಬೆಳಕು ಹರಿಯದಿದ್ದರೆ ಅದು ಕಣ್ಣಿಗೆ ಕಾಣಿಸಲಾರದು. ದೂರದ ವಸ್ತುಗಳ ನೈಜ ಗಾತ್ರ, ಬಣ್ಣ ಮತ್ತು ಆಕಾರವನ್ನು ಕಣ್ಣು ಗ್ರಹಿಸಲಾರದು. ಹತ್ತಿರದ ಸಣ್ಣ ವಸ್ತುಗಳನ್ನು ನೋಡಲು ಸೂಕ್ಷ್ಮದರ್ಶಕ ಮತ್ತು ದೂರದ ವಸ್ತುಗಳನ್ನು ನೋಡಲು ದೂರದರ್ಶಕದ ಅಗತ್ಯವಿರುತ್ತದೆ.

ಈ ಜ್ಞಾನೇಂದ್ರಿಯಗಳು ಅತ್ಯಂತ ಸೀಮಿತ ಮತ್ತು ದೋಷಪೂರ್ಣ ಮಾತ್ರವಲ್ಲ ಹಲವೊಮ್ಮೆ ಅದು ಮನುಷ್ಯನನ್ನು ಮೋಸಕ್ಕೆ ಒಳಪಡಿಸುತ್ತವೆ. ರೈಲು ಮಾರ್ಗದ ಪಟ್ಟಿ ಸಮಾನಾಂತರವಾಗಿರುತ್ತವೆ. ಆದರೆ ಸ್ವಲ್ಪ ದೂರದಲ್ಲೇ ಅದು ಪರಸ್ಪರ ಒಟ್ಟಾದಂತೆ ಕಾಣಿಸುತ್ತದೆ. ಚಲಿಸುವ ವಾಹನದಿಂದ ಹೊರಗೆ ನೋಡಿದಾಗ ಎಲ್ಲ ವಸ್ತುಗಳೂ ನಿಮ್ಮ ವಿರುದ್ಧ ದಿಕ್ಕಿನಲ್ಲಿ ಓಡುತ್ತಿರುವಂತೆ ಕಾಣಿಸುತ್ತದೆ. ವಸ್ತುತಃ ಚಲಿಸುತ್ತಿರುವುದು ಆ ವಸ್ತುಗಳಲ್ಲ. ನಿಮ್ಮ ವಾಹನವಾಗಿದೆ. ಒಂದು ನೇರಾದ ಕೋಲಿನ ಅರ್ಧಾಂಶ ನೀರಿನೊಳಗಿದ್ದರೆ ಅದು ನಮಗೆ ವಕ್ರವಾಗಿ ಕಾಣಿಸುತ್ತದೆ. ಅದೇ ಕೋಲು ಪೂರ್ತಿ ನೀರಿನಲ್ಲಿದ್ದರೆ ನೇರವಾಗಿಯೇ ಕಾಣಿಸುತ್ತದೆ. ಆದರೆ ಅದು ಇದ್ದುದಕ್ಕಿಂತ ದಪ್ಪವಾಗಿ ಕಾಣಿಸುತ್ತದೆ. ಸೂರ್ಯನು ಪೂರ್ವದಿಂದ ಉದಿಸಿ ಆಕಾಶದ ಪಯಣ ಮಾಡುತ್ತಾ ಪಶ್ಚಿಮದಲ್ಲಿ ಮುಳುಗುತ್ತಾನೆ. ಇದಕ್ಕೆ ತದ್ವಿರುದ್ಧವಾಗಿ ಭೂಮಿಯು ನಮಗೆ ನಿಶ್ಚಲವಾಗಿ ಕಾಣುತ್ತದೆ. ಇದು ನಾವು ನಿತ್ಯ ಕಾಣುವ ದೃಶ್ಯ. ಈ ಅನುಭವದಿಂದ ಸಹಸ್ರಾರು ವರ್ಷಗಳ ತನಕ ದೊಡ್ಡ ದೊಡ್ಡ ತತ್ವಜ್ಞಾನಿಗಳು ಮತ್ತು ಖಗೋಳ ವಿಜ್ಞಾನಿಗಳು ಭೂಮಿ ನಿಶ್ಚಲವಾಗಿದೆಯೆಂದೂ ಸೂರ್ಯನು ಅದರ ಸುತ್ತ ಸುತ್ತುತ್ತಿರುವನೆಂದೂ ಖಚಿತವಾಗಿ ನಂಬಿದ್ದರು. ಆದರೆ ಅದು ತಪ್ಪಾಗಿದೆ ಎಂಬುದು ಇಂದು ಸಾಮಾನ್ಯ ಜ್ಞಾನ. ಬಾಹ್ಯ ನೋಟಕ್ಕೆ ಬಿಸಿಲಿಗೆ ಇರುವ ಬಣ್ಣ ಒಂದೇ. ಆದರೆ ಅದು ಸಪ್ತ ಬಣ್ಣಗಳಿಂದ ಕೂಡಿದೆ. ಸೂರ್ಯ-ಚಂದ್ರ ಬರಿಗಣ್ಣಿಗೆ ಬಹಳ ದೊಡ್ಡದಾಗಿ ಕಾಣುತ್ತವೆ. ಇತರೆಲ್ಲ ನಕ್ಷತ್ರಗಳೂ ಸಣ್ಣದಾಗಿ ಕಾಣುತ್ತವೆ. ಆದರೆ ವಾಸ್ತವಿಕತೆಯು ಇದಕ್ಕೆ ವ್ಯತಿರಿಕ್ತವಾಗಿದೆ.

ಇವು ಕೇವಲ ನಮ್ಮ ದೃಷ್ಟಿಯ ಸಾಮರ್ಥ್ಯದ ಕುರಿತ ಕೆಲವು ಉದಾಹರಣೆಗಳು ಮಾತ್ರ. ಆದ್ದರಿಂದಲೇ ನಮಗೆ ನಮ್ಮ ಎಲ್ಲ ಇಂದ್ರಿಯಗಳ ಸಾಮರ್ಥ್ಯದ ಸೀಮಿತತೆಯನ್ನು ಊಹಿಸಬಹುದಾಗಿದೆ. ಆದ್ದರಿಂದ ನಾವು ವಿಶ್ವದ ಹೆಚ್ಚೆಚ್ಚು ವಸ್ತುಗಳ ಬಗ್ಗೆ ಸರಿಯಾದ ಮಾಹಿತಿಯನ್ನು ಹೊಂದ ಬಯಸುವುದಾದರೆ ಇದಕ್ಕಿಂತಲೂ ಹೆಚ್ಚು ಸಮರ್ಥ ಮತ್ತು ವಿಶ್ವಾಸಾರ್ಹ ಮಾಧ್ಯಮಗಳನ್ನು ಕಂಡುಕೊಳ್ಳಬೇಕಾದುದು ಅನಿವಾರ್ಯವಾಗಿದೆ. ಈ ಪ್ರಜ್ಞೆಯೇ ಮನುಷ್ಯನನ್ನು ಪಂಚೇಂದ್ರಿಯಗಳ ಸಾಮರ್ಥ್ಯವನ್ನು ಹೆಚ್ಚಿಸಬಲ್ಲ ಉಪಕರಣಗಳ ಸಂಶೋಧನೆಗೆ ಪ್ರೇರೇಪಿಸುವುದು. ಆದರೆ ಆ ವಿಜ್ಞಾನಶಾಖೆಯು ಅಭಿವೃದ್ಧಿ ಹೊಂದಿ ಇಂದು ಇಂದ್ರಿಯಗಳ ಹೊರತಾದ ಒಂದು ಜ್ಞಾನ ಮೂಲವಾಗಿ ಮಾರ್ಪಟ್ಟಿದೆ.

ಬುದ್ಧಿಯೇ ಜ್ಞಾನದ ನೈಜ ಮೂಲ

ಮಾನವ ಬುದ್ಧಿಯೂ ಒಂದು ಪ್ರಮುಖ ಜ್ಞಾನ ಮೂಲವಾಗಿದೆ. ಇಂದ್ರಿಯಗಳ ಮತ್ತು ವೈಜ್ಞಾನಿಕ ಉಪಕರಣಗಳ ಮೂಲಕ ಗಳಿಸಿದ ಜ್ಞಾನಕ್ಕೂ ಮೂಲ ಮಾನವ ಮಸ್ತಿಷ್ಕವೇ ಆಗಿದೆ. ವಾಸ್ತವದಲ್ಲಿ ಅನೇಕ ವಸ್ತುಗಳ ಬಗ್ಗೆ ನಾವು ಇಂದ್ರಿಯಗಳ ಮೂಲಕ ತಿಳಿಯದೆಯೇ ಕೇವಲ ಬುದ್ಧಿಯ ಬೇಡಿಕೆಯೆಂಬ ನೆಲೆಯಲ್ಲಿ ನಂಬುತ್ತೇವೆ. ನಿಜವಾಗಿ ಹೆಚ್ಚಿನ ವಸ್ತುಗಳು ನಮಗೆ ಇಂದ್ರಿಯಗಳಿಗಿಂತ ಬುದ್ಧಿಯಿಂದಲೇ ತಿಳಿಯುತ್ತವೆ. ಮನುಷ್ಯನ ಕಣ್ಣು, ಕಿವಿ, ಮೂಗು, ನಾಲಗೆ ಮತ್ತು ಸ್ಪರ್ಶೇಂದ್ರಿಯವು ನಿಜವಾಗಿ ಇಂದ್ರಿಯಗಳಾಗಿರದೆ ಅವು ಕೇವಲ ಉಪಕರಣಗಳಾಗಿವೆ. ಕಣ್ಣು ಛಾಯಾ ಚಿತ್ರ ಮೂಡಿಸುವ ಕ್ಯಾಮರಾ ಆಗಿದೆ. ನಮ್ಮ ದೃಶ್ಯ ಸಾಮರ್ಥ್ಯವು ಆ ಛಾಯಾ ಚಿತ್ರವನ್ನು ನೋಡುತ್ತದೆ. ಕರ್ಣ ಪಟಲವು ಡೋಲಿನ ಚರ್ಮದಂತೆ ಶಬ್ದದ ತರಂಗಗಳಿಗೆ ಕಂಪಿಸುತ್ತದೆ. ನಮ್ಮ ಶ್ರವಣ ಶಕ್ತಿಯು ಆ ಕಂಪನವನ್ನು ಆಲಿಸುತ್ತದೆ. ಇತರ ಇಂದ್ರಿಯಗಳೂ ಅವುಗಳ ಉಪಕರಣಗಳೂ ಹೀಗೆಯೇ ಇವೆ. ಪಂಚೇಂದ್ರಿಯಗಳು ಮೆದುಳಿನೊಂದಿಗೆ ಸಂಬಂಧ ಹೊಂದಿವೆ. ಆದರೆ ಆ ಮೆದುಳಿನಲ್ಲಿರುವ ಅವುಗಳ ಮೂಲವನ್ನು ಇಂದಿನ ತನಕ ಈ ಇಂದ್ರಿಯಗಳ ಮೂಲಕವಾಗಲೀ ಯಾವುದೇ ಉಪಕರಣಗಳ ಮೂಲಕವಾಗಲೀ ತಲುಪಲು ಸಾಧ್ಯವಾಗಲಿಲ್ಲ. ಆದರೆ ಮೆದುಳಿನಲ್ಲಿ ಇವುಗಳ ಕೇಂದ್ರದ ಇರುವನ್ನು ನಾವು ಒಪ್ಪಲೇಬೇಕಾಗಿದೆ. ಏಕೆಂದರೆ ಈ ಇಂದ್ರಿಯಗಳ ಕಾರ್ಯವನ್ನು ನಾವು ಅನುಭವಿಸುತ್ತಿದ್ದೇವೆ.

ಮನುಷ್ಯನು ಬುದ್ಧಿವಂತ. ಅವನಲ್ಲಿ ವಿಚಾರ ಶಕ್ತಿಯಿದೆಯೆಂದು ನಾವು ನಂಬುತ್ತೇವಾದರೂ ಇಂದಿನವರೆಗೂ ಆ ಶಕ್ತಿಯನ್ನು ಇಂದ್ರಿಯಗಳ ಮೂಲಕವಾಗಲೀ ಉಪಕರಣಗಳ ಮೂಲಕವಾಗಲೀ ಕಂಡು ಕೊಳ್ಳಲಾಗಲಿಲ್ಲ. ಆದರೂ ಒಂದು ಕ್ಷಣದ ಮಟ್ಟಿಗೂ ನಾವು ಬುದ್ಧಿಯ ಇರುವಿಕೆಯ ಬಗ್ಗೆ ಸಂಶಯ ತಾಳುವುದಿಲ್ಲ. ಏಕೆಂದರೆ ನಾವು ಯೋಚಿಸುವ ಕ್ರಿಯೆಯಿಂದ ವಿಚಾರ ಶಕ್ತಿಯನ್ನು ಗುರುತಿಸುತ್ತೇವೆ. ಇದೇ ರೀತಿ ನಾವು ಸ್ಮರಣ ಶಕ್ತಿ, ಕಲ್ಪನಾ ಶಕ್ತಿ, ಪ್ರತಿಭಾಶಕ್ತಿಯೇ ಮುಂತಾದ ಮೆದುಳಿನ ಇತರ ಶಕ್ತಿಗಳನ್ನು

ಒಪ್ಪುತ್ತೇವೆ. ಏಕೆಂದರೆ ಅವುಗಳ ಕ್ರಿಯೆಯಿಂದ ಅವುಗಳ ಅಸ್ತಿತ್ವದ ಅರಿವಾಗುತ್ತದೆ. ಪಂಚೇಂದ್ರಿಯಗಳು ಮಾತ್ರ ಜ್ಞಾನದ ಮೂಲಗಳೆಂದು ನಾವು ಒಪ್ಪಿಕೊಂಡರೆ ಈ ಎಲ್ಲ ಶಕ್ತಿಗಳನ್ನು ನಾವು ಗುರುತಿಸಲಾರೆವು. ಏಕೆಂದರೆ ಅವು ಪಂಚೇಂದ್ರಿಯಗಳಿಂದ ನಮ್ಮ ತಿಳುವಳಿಕೆಗೆ ಬರುವುದಿಲ್ಲ.

ಇಂದಿನ ಮನುಷ್ಯನು ಅಣುಬಾಂಬ್ ಮತ್ತು ಅಣುಸ್ಫೋಟಗಳನ್ನು ಪ್ರಯೋಗಿಸಿ ತಿಳಿದುಕೊಂಡಿದ್ದಾನೆ. ಅಣು ಶಕ್ತಿಯಿಂದ ಚಲಿಸುವ ಯಂತ್ರಗಳನ್ನೂ ವಾಹನಗಳನ್ನೂ ಕಾಣುತ್ತಿದ್ದಾನೆ. ಆದ್ದರಿಂದ ಅಣು, ಅಣು ಶಕ್ತಿ, ಅಣುವಿನ ಅಂಶಗಳಾದ ಇಲೆಕ್ಟ್ರಾನ್, ಪ್ರೋಟೋನ್, ನ್ಯೂಟ್ರಾನ್‌ಗಳನ್ನು ಅವನು ನಿರಾಕರಿಸಲು ಸಾಧ್ಯವಿಲ್ಲ. ಆದರೆ ಈ ಪೈಕಿ ಯಾವುದೂ ಪಂಚೇಂದ್ರಿಯಗಳಿಂದ ಗುರುತಿಸಲ್ಪಡುವುದಿಲ್ಲ.

ಅನೇಕ ವಸ್ತುಗಳನ್ನು ನಾವು ಅವುಗಳ ಕುರುಹುಗಳನ್ನು ಕಂಡೇ ಪೂರ್ಣ ಭರವಸೆಯೊಂದಿಗೆ ಒಪ್ಪಿಕೊಳ್ಳುತ್ತೇವೆ. ಹೊಗೆಯಿದ್ದರೆ ಅದರ ಹಿಂದೆ ಬೆಂಕಿಯಿರಲೇಬೇಕು. ಒಂದು ಊರನ್ನು ಕಂಡು ಅದರ ನಿವಾಸಿಗಳ ಕಡೆಗೆ ನಮ್ಮ ವಿಚಾರ ಹರಿಯುತ್ತದೆ. ಕಟ್ಟಡಗಳ ಅವಶೇಷಗಳನ್ನು ಕಂಡು ನಾವು ಮನುಷ್ಯವಾಸ ಅಲ್ಲಿದ್ದಿರಬಹುದೆಂದು ಗುರುತಿಸುತ್ತೇವೆ. ನಮಗಿಂತ ಸಾವಿರಾರು ವರ್ಷ ಹಿಂದೆ ಜೀವಿಸಿದವರ ಪಳಿಯುಳಿಕೆಗಳನ್ನು ಕಂಡು ಅವರ ಇರವನ್ನು ನಾವು ಗುರುತಿಸುತ್ತೇವೆ. ಅವರ ಅಸ್ತಿತ್ವದ ಪುರಾವೆ ವಸತಿಗಳು, ಕಟ್ಟಡಗಳು, ಗೋರಿಗಳು, ಅವಶೇಷಗಳು, ಶಿಲಾಲೇಖನ ಇತ್ಯಾದಿಗಳು ಮಾತ್ರವಾಗಿದೆ. ಇವೆಲ್ಲವೂ ಕುರುಹುಗಳಾಗಿವೆ. ಆ ಜನಾಂಗಗಳ ಇರವನ್ನು ಪಂಚೇಂದ್ರಿಯಗಳಿಂದಾಗಲೀ ಉಪಕರಣಗಳಿಂದಾಗಲೀ ಖಚಿತಪಡಿಸುವುದು ಸಾಧ್ಯವಿಲ್ಲ.

ಅನೇಕ ವಿಷಯಗಳನ್ನು ನಾವು ಇತರರ ಮೇಲೆ ಭರವಸೆಯಿಟ್ಟು ಒಪ್ಪಿಕೊಳ್ಳುತ್ತೇವೆ. ಈ ಭರವಸೆಯು ಇಂದ್ರಿಯಗಳ ಅನುಭವವಾಗಲೀ, ಉಪಕರಣಗಳ ದಾಖಲೆಯಾಗಲಿ, ವೈಚಾರಿಕ ರುಜುವಾತಾಗಲಿ ಖಂಡಿತ ಅಲ್ಲ. ಒಬ್ಬ ವ್ಯಕ್ತಿಯು ಸತ್ಯಸಂಧನೂ, ಹೊಣೆಗಾರನೂ, ತಿಳಿದವನೂ ಆಗಿದ್ದರೆ ಅವನು ಯಾವುದಾದರೂ ವಿಷಯದ ಬಗ್ಗೆ ನೀಡುವ ಮಾಹಿತಿಯನ್ನು ನಾವು ಸತ್ಯವೆಂದು ಒಪ್ಪಿಕೊಳ್ಳುತ್ತೇವೆ. ಈ ಭರವಸೆಯ ಹೊರತು ಜೀವನದ ಬಂಡಿಯು ಎರಡು ಹೆಜ್ಜೆಯೂ ಮುಂದೆ ಸಾಗಲಾರದು. ಜೀವನದ ಎಲ್ಲ ರಂಗಗಳ ಬಗ್ಗೆ ಸಮಗ್ರ ವಿದ್ಯೆಗಳಿಸುವುದು ಯಾವ ವ್ಯಕ್ತಿಗೂ ಸಾಧ್ಯವಿಲ್ಲದ ವಿಷಯ. ಒಬ್ಬ ವ್ಯಕ್ತಿ ಕೆಲವು ವಿಷಯಗಳ ಕುರಿತು ತಿಳಿಯಬಲ್ಲನು. ಒಂದೆರಡು ವಿಷಯಗಳಲ್ಲಿ ಮಾತ್ರ ಪರಿಣತಿಗಳಿಸ ಬಲ್ಲನು. ಇತರೆಲ್ಲ ರಂಗಗಳ ಬಗ್ಗೆ ಆತನು ಇತರರ ಮೇಲೆ ಭರವಸೆಯಿಡಲೇ ಬೇಕಾಗುತ್ತದೆ. ಇದರ ಹೊರತು ವೈಚಾರಿಕ ಮತ್ತು ವ್ಯಾವಹಾರಿಕ ಜೀವನದ ರಥವು ಒಂದಡಿಯೂ ಮುಂದೆ ಹೋಗಲಾರದು.

ನಿಮಗೆ ಮಂಗಳೂರಿನಿಂದ ಗುಲ್ಬರ್ಗಾಕ್ಕೆ ಹೋಗಬೇಕು. ಇದು ನಿಮ್ಮ ಪ್ರಥಮ ಪ್ರವಾಸ. ನೀವು ಎಂದೂ ಗುಲ್ಬರ್ಗಾ ಕಂಡವರಲ್ಲ. ಆ ದಾರಿಯಾಗಿ ನೀವು ಹಾದು

ಹೋಗಿಯೂ ಇಲ್ಲ. ಗುಲ್ಬರ್ಗಾ ಇದೆಯೆಂದು ನೀವು ಹೇಗೆ ಒಪ್ಪಿಕೊಂಡಿರಿ. ಅಲ್ಲಿಗೆ ಹೋಗಲು ಏಕೆ ನಿರ್ಧರಿಸಿದಿರಿ. ನೀವು ಭೂಗೋಳದ ಮೇಲೆ ಭರವಸೆಯಿಟ್ಟಿರಿ. ಗುಲ್ಬರ್ಗಾಕ್ಕೆ ಹೋಗಿ ಬಂದ ಜನರನ್ನು ನಂಬಿದಿರಿ. ಇದು ಕೇವಲ ನಿಮ್ಮ ಕಥೆಯಲ್ಲ. ಜಗತ್ತಿನ ಯಾವ ವ್ಯಕ್ತಿಯೂ ಎಲ್ಲ ದೇಶಗಳನ್ನು ಎಲ್ಲ ನಗರಗಳನ್ನು ನೋಡಿಲ್ಲ. ಆದರೆ ಎಲ್ಲರೂ ಎಲ್ಲ ದೇಶಗಳನ್ನು ನಗರಗಳನ್ನೂ ಒಪ್ಪಿಕೊಳ್ಳುತ್ತಾರೆ. ಇದು ವೈಯಕ್ತಿಕ ತಿಳುವಳಿಕೆಯ ಆಧಾರದಲ್ಲಲ್ಲ. ಕೇವಲ ಭರವಸೆಯ ಆಧಾರದಲ್ಲಾಗಿದೆ.

ಗುಲ್ಬರ್ಗಾಕ್ಕೆ ಹೋಗಲು ನೀವು ಮಂಗಳೂರು ರೈಲು ನಿಲ್ದಾಣ ತಲುಪಿದಿರಿ. ನೀವು ಗುಲ್ಬರ್ಗಾಕ್ಕೆ ಹೋಗುವ ಗಾಡಿಯನ್ನು ಗುರುತಿಸುವುದು ಹೇಗೆ. ರೈಲ್ವೆ ಸಿಬ್ಬಂದಿಗಳು ಹೇಳಿದ ಗಾಡಿಯಲ್ಲಿ ನೀವು ಕುಳಿತುಕೊಳ್ಳುತ್ತೀರಿ ಅಥವಾ ಗಾಡಿಯಲ್ಲಿ ತೂಗಾಡಿಸಿದ ಫಲಕಗಳನ್ನು ನೋಡಿ ನೀವು ಗುರುತಿಸುತ್ತೀರಿ. ನಿಮ್ಮ ಪಂಚೇಂದ್ರಿಯಗಳಿಂದಾಗಲೀ ಉಪಕರಣ ಗಳಿಂದಾಗಲೀ ಆ ಗಾಡಿ ಗುಲ್ಬರ್ಗಾಕ್ಕೆ ಹೋಗುತ್ತದೆಂದು ಖಚಿತಪಡಿಸುವುದು ಸಾಧ್ಯವಿಲ್ಲ. ಆದರೆ ಅದು ನಿಮ್ಮನ್ನು ಗುಲ್ಬರ್ಗಾಕ್ಕೆ ತಲುಪಿಸಿದಾಗ ನಿಮಗೆ ಅದು ನಿಜವಾಗಿ ಗುಲ್ಬರ್ಗಾಕ್ಕೆ ಹೋಗುತ್ತದೆಂಬುದರ ಅನುಭವವಾಗುತ್ತದೆ. ಆದರೆ ಆಗ ಅನುಭವವಾದರೆ ಸಾಲದು. ನಿಮಗೆ ಮಂಗಳೂರು ನಿಲ್ದಾಣದಲ್ಲೇ ಅದು ಖಚಿತವಾಗಬೇಕು.

ಇದು ಒಂದು ಘಟನೆ ಮಾತ್ರವಲ್ಲ. ಜೀವನದಲ್ಲಿ ನಿತ್ಯ ನಿಮಗೆ ಇಂತಹ ಅನೇಕ ಘಟನೆಗಳು ಎದುರಾಗುತ್ತವೆ. ಕೇವಲ ಜ್ಞಾನದ ಆಧಾರದಲ್ಲಿ ನೀವು ಯಾವ ಕಾರ್ಯವನ್ನು ಮಾಡುವಂತಿಲ್ಲ. ಇತರ ವ್ಯಕ್ತಿಗಳ ಮೇಲೆ ಭರವಸೆ ಇಡಲೇ ಬೇಕಾಗುತ್ತದೆ. ಕೆಲವೊಮ್ಮೆ ಈ ಭರವಸೆಯು ಹುಸಿಯಾಗುತ್ತದೆಂಬುದು ನಿಜವೆ. ಆದರೆ ಎಲ್ಲ ಜ್ಞಾನ ಮೂಲಗಳಲ್ಲೂ ಇಂತಹ ತಪ್ಪಾಗುವ ಸಂಭವ ಇದ್ದೇ ಇದೆ. ಅದು ಇಂದ್ರಿಯಗಳ ಮೂಲಕ ಗಳಿಸಿದ ಜ್ಞಾನವಾಗಿರಲಿ, ಉಪಕರಣಗಳ ಮೂಲಕ ಗಳಿಸಿದ ಜ್ಞಾನವಾಗಿರಲಿ ವೈಚಾರಿಕವಾಗಿ ಗಳಿಸಿದ ಜ್ಞಾನವಾಗಲಿ. ತಪ್ಪು ಸಂಭವಿಸಬಹುದು ಎಂಬ ಕಾರಣಕ್ಕಾಗಿ ಯಾವುದೇ ಜ್ಞಾನ ಮೂಲವನ್ನು ನಾವು ತೊರೆಯುವುದಿಲ್ಲ.

ಬಹುದೇವವಾದವೆಂದರೇನು?

ಬಹುದೇವಾರಾಧನೆಯು ನಿಜವಾಗಿ ಸೃಷ್ಟಿ ಪೂಜೆಯಾಗಿದೆ. ಅದರ ವಿವಿಧ ರೂಪಗಳಿರಬಹುದು-

1. ಯಾವುದೇ ಸೃಷ್ಟಿಯನ್ನು ವಿಶ್ವದ ಅಥವಾ ಅದರ ಯಾವುದಾದರೊಂದು ಭಾಗದ ಸೃಷ್ಟಿಕರ್ತನೆಂದು ನಂಬುವುದು.

ಗ್ರೀಕ್ ತತ್ವಜ್ಞಾನಿಗಳ ಪ್ರಕಾರ ದೇವರು ಪ್ರಥಮ ಸೃಷ್ಟಿಕರ್ತನಾಗಿದ್ದು (first cause) ವಿಶ್ವದಲ್ಲಿ ಅನೇಕ ಸೃಷ್ಟಿಕರ್ತರಿದ್ದಾರೆ (causes). ಇರಾನ್‌ನ ಅಗ್ನಿ ಆರಾಧಕರು ಒಳಿತಿಗೊಂದು ಸೃಷ್ಟಿಕರ್ತ 'ಯಝ್‌ದಾನ್' ಮತ್ತು ಕೆಡುಕಿಗೊಂದು ಸೃಷ್ಟಿಕರ್ತ 'ಅಹರ್ಮನ್' ಇದ್ದಾರೆಂದು

ನಂಬುತ್ತಾರೆ. ಹಿಂದೂ ಧರ್ಮದ ಪ್ರಸಿದ್ಧ ಗ್ರಂಥ ಮನುಸ್ಮೃತಿಯ ಪ್ರಕಾರ ಪರಮಾತ್ಮನು ಮೊದಲು ನೀರನ್ನು ಸೃಷ್ಟಿಸಿದ. ಅನಂತರ ನೀರಿನಲ್ಲಿ ಬೀಜ ಹಾಕಿದ, ಅದು ಒಂದು ಮೊಟ್ಟೆಯ ರೂಪ ತಾಳಿತು. ಅದರಿಂದ ಬ್ರಹ್ಮನು ಹುಟ್ಟಿದನು. ಬ್ರಹ್ಮನು ಸಮಸ್ತ ವಿಶ್ವವನ್ನು ಸೃಷ್ಟಿಸಿದನು. ಬ್ರಹ್ಮನು ತನ್ನ ದೇಹವನ್ನು ಎರಡು ಭಾಗಗಳಾಗಿ ಮಾಡಿದನು. ಅರ್ಧ ಭಾಗದಿಂದ ಪುರುಷ ರೂಪ ಉಂಟಾಯಿತು ಮತ್ತು ಉಳಿದರ್ಧದಿಂದ ಸ್ತ್ರೀ ರೂಪ ಉಂಟಾಯಿತು. ಇವೆರಡನ್ನು ಸೇರಿಸಿ ಬ್ರಹ್ಮನು ಬ್ರಾಟನ್ನು ಸೃಷ್ಟಿಸಿದನು. ಬ್ರಾಟನು ಮನುವನ್ನು ಸೃಷ್ಟಿಸಿದನು. ಮನು ಋಷಿಗಳನ್ನೂ ದೇವತೆಗಳನ್ನೂ, ರಾಕ್ಷಸರನ್ನೂ, ಸ್ವರ್ಗ ಇತ್ಯಾದಿ ಅನೇಕ ವಸ್ತುಗಳನ್ನು ಸೃಷ್ಟಿಸಿದನು. **(ಮನುಸ್ಮೃತಿ, ಅಧ್ಯಾಯ: 4-10)**

2. ಯಾವುದೇ ಸೃಷ್ಟಿಯನ್ನು ವಿಶ್ವದ ಸೃಷ್ಟಿಕರ್ತನ ಮಗ, ಮಗಳು, ತಾಯಿ, ತಂದೆ, ಪತಿ-ಪತ್ನಿ ಎಂದು ಸಾರುವುದು.

3. ಯಾವುದೇ ಸೃಷ್ಟಿಯನ್ನು ವಿಶ್ವದ ಅಥವಾ ಅವರ ಒಂದು ಭಾಗದ ಒಡೆಯ ಮತ್ತು ಅಧಿಪತಿ (ದೇವರು) ಎಂದು ಭಾವಿಸುವುದು.

4. ಯಾವುದೇ ಸೃಷ್ಟಿಯ ಬಗ್ಗೆ- ಅದಕ್ಕೆ ಈ ವಿಶ್ವದ ವ್ಯವಸ್ಥೆಯಲ್ಲಿ ಪಾತ್ರವಿದೆ ಯೆಂದು ಪರಿಗಣಿಸುವುದು.

5. ಯಾವುದೇ ಸೃಷ್ಟಿಯನ್ನು ಇಷ್ಟಾರ್ಥ ಸಿದ್ಧಿಸುವವನು, ಸಂಕಟಹರನು, ಪ್ರಾರ್ಥನೆ ಗಳನ್ನು ಈಡೇರಿಸುವವನು ಎಂದು ಬಗೆಯುವುದು. ಜೀವನ-ಮರಣ, ಲಾಭ-ನಷ್ಟ, ಆರೋಗ್ಯ-ಅನಾರೋಗ್ಯ, ಅನ್ನಾಹಾರ, ಸಂತತಿ, ಕೀರ್ತಿ, ಅಪಮಾನ ಅಥವಾ ಅದೃಷ್ಟ ಅದರ ಕೈಯಲ್ಲಿದೆ ಎಂದು ಭಾವಿಸುವುದು.

6. ಯಾವುದೇ ಸೃಷ್ಟಿಯ ಬಗ್ಗೆ ಅದಕ್ಕೆ ಪ್ರಕೃತಿಗೆ ಅತೀತವಾದ ಶಕ್ತಿ (super natural powers) ಗಳಿವೆಯೆಂದು ನಂಬುವುದು.

7. ಯಾವುದೇ ಸೃಷ್ಟಿಯ ಬಗ್ಗೆ ಅದರ ಶಿಫಾರಸು ಅಥವಾ ಅದರ ಇಷ್ಟದ ಹೊರತು ದೇವರು ಏನೂ ಮಾಡುವುದಿಲ್ಲ ಎಂದು ನಂಬುವುದು.

8. ಯಾವುದೇ ಸೃಷ್ಟಿಯನ್ನು ಪೂಜೆ-ಪುರಸ್ಕಾರಗಳಿಗೆ ಅರ್ಹವೆಂದು ಬಗೆಯುವುದು. ಅದರ ಮುಂದೆ ಕೈಕಟ್ಟಿ ನಿಲ್ಲುವುದು, ಶಿರಬಾಗುವುದು, ಸಾಷ್ಟಾಂಗವೆರಗುವುದು. ಅದರ ಮುಂದೆ ಪ್ರಾರ್ಥನೆ ಮಾಡುವುದು. ಅದನ್ನು ಸಹಾಯಕ್ಕಾಗಿ ಕರೆಯುವುದು. ಅದರ ನಾಮವನ್ನು ಜಪಿಸುವುದು. ಅದರ ಮುಂದೆ ಬಲಿದಾನಗಳನ್ನು ಅರ್ಪಿಸುವುದು. ಹರಕೆ-ಕಾಣಿಕೆಗಳನ್ನು ಸಲ್ಲಿಸುವುದು. ಅದರ ಸುತ್ತ ಪ್ರದಕ್ಷಿಣೆ ಮಾಡುವುದು. ಅದರ ಮುಂದೆ ಉಪವಾಸಾದಿ ವ್ರತಗಳನ್ನು ಆಚರಿಸುವುದು.

9. ಯಾವನೇ ಸೃಷ್ಟಿಯನ್ನು ನಿಶ್ಶರ್ತ ಅನುಸರಣೆಗೆ ಅರ್ಹನೆಂದು ಬಗೆಯುವುದು. ಅವನ ದಾಸ್ಯ ಕೈಗೊಳ್ಳುವುದು. ಅವನ ಸಂಪ್ರೀತಿಯನ್ನು ಜೀವನದ ಧ್ಯೇಯವಾಗಿಸುವುದು. ದೇವರನ್ನು ಭಯ ಪಡುವಂತೆ ಅವನನ್ನು ಭಯ ಪಡುವುದು. ದೇವರಲ್ಲಿ ಭರವಸೆಯಿಡು ವಂತೆ ಅವನಲ್ಲಿ ಭರವಸೆಯಿಡುವುದು.

10. ಯಾವನೇ ಸೃಷ್ಟಿಗೆ ಮನುಷ್ಯ ಜೀವನದ ಕಾನೂನು ರಚನೆಯ ಪೂರ್ಣಾಧಿಕಾರ ವಿದೆಯೆಂದು ನಂಬುವುದು.

ಬಹುದೇವವಾದ- ಅವೈಚಾರಿಕ ಕಲ್ಪನೆ

ಬಹುದೇವಾರಾಧನೆಯ ದ್ವಾರವು ಒಮ್ಮೆ ತೆರೆದರೆ ಸಾಕು, ಅದು ಯಾವ ಹಂತದಲ್ಲೂ ನಿಲ್ಲದು. ಒಮ್ಮೆ ಮನುಷ್ಯನು ಯಾವುದೇ ಸೃಷ್ಟಿಯನ್ನು ದೇವರೆಂದು ಬಗೆದರೆ ಅದು ಅವನನ್ನು ಎಲ್ಲ ಸೃಷ್ಟಿಗಳ ಮುಂದೆ ತಲೆಬಾಗುವಂತೆ ಮಾಡುತ್ತದೆ. ಆದ್ದರಿಂದಲೇ ಬಹುದೇವಾರಾಧಕರು ಯಾವುದೇ ಹೊಸ ದೇವರ ಸೇರ್ಪಡೆಯನ್ನು ಬಹಳ ಸುಲಭದಲ್ಲಿ ಅಂಗೀಕರಿಸುತ್ತಾರೆ. ಎಲ್ಲಿಯವರೆಗೆಂದರೆ ಅವರ ದೇವರುಗಳ ಪಟ್ಟಿಯಲ್ಲಿ ಜಗತ್ತಿನ ಎಲ್ಲ ವಸ್ತುಗಳೂ ಸೇರಿ ಬಿಡುತ್ತವೆ. ದೇವಚರರು, ಪ್ರವಾದಿಗಳು, ಸಂತರು, ಯಕ್ಷರು, ಭೂತ-ಪ್ರೇತಗಳು, ಸೂರ್ಯ, ಚಂದ್ರ, ನಕ್ಷತ್ರಗಳು, ಭೂಮಿ, ಆಕಾಶ, ಪ್ರಾಣಿಗಳು, ವೃಕ್ಷಗಳು, ಪರ್ವತಗಳು, ನದಿಗಳು, ಕ್ರಿಮಿ-ಕೀಟಗಳು, ಗಾಳಿ, ನೀರು, ಸಂಪತ್ತು, ಗೋರಿ, ಮೂರ್ತಿ, ಆತ್ಮ, ಮನುಷ್ಯನ ಅಂಗಗಳು, ಗಂಡು-ಹೆಣ್ಣಿನ ಗುಪ್ತಾಂಗಗಳು ಇತ್ಯಾದಿಗಳೆಲ್ಲವೂ ದೇವರಾಗಿ ಬಿಟ್ಟವು. ಇವುಗಳಲ್ಲದೆ ಅನೇಕ ಕಾಲ್ಪನಿಕ ದೇವರುಗಳನ್ನು ಮಾಡಿಕೊಳ್ಳ ಲಾಯಿತು. ಇವುಗಳು ಪ್ರತಿಯೊಂದು ಜನಾಂಗಕ್ಕೆ ಭಿನ್ನಭಿನ್ನವಾಗಿದ್ದುವು. ಈ ಎಲ್ಲ ದೇವರು-ದಿಂಡರುಗಳ ಮೇಲೆ ನಂಬಿಕೆಯಿಡುವುದನ್ನು ಧರ್ಮವೆಂದು ಸಾರಲಾಯಿತು. ಇದನ್ನು ಕಂಡು-ಕೇಳಿ ವಿದ್ಯಾವಂತ ಬುದ್ಧಿಜೀವಿಗಳು ಅದರ ಬಗ್ಗೆ ಹೇಸಿಗೆ ಪಟ್ಟುಕೊಂಡರು.

ವಿಜ್ಞಾನದಿಂದ ನಮಗೆ ತಿಳಿದುಬರುವಂತೆ ವಿಶ್ವದ ವ್ಯವಸ್ಥೆಯು ಸಂಪೂರ್ಣ ಸಮತೋಲನ ಮತ್ತು ಸಾಮರಸ್ಯದಿಂದ ನಡೆಯುತ್ತಿದೆ. ಈ ರೀತಿಯ ಯೋಜನೆ, ಸಮತೋಲನ ಮತ್ತು ಸಾಮರಸ್ಯವಿಲ್ಲದೆ ವಿಶ್ವ ಮತ್ತು ಅದರ ವಿವಿಧ ವಸ್ತುಗಳ ಕಲ್ಪನೆಯನ್ನು ಮಾಡುವುದು ಕೂಡಾ ಸಾಧ್ಯವಿಲ್ಲ. ಗೋಧಿಯ ಒಂದು ಕಾಳು ಕೂಡಾ ಭೂಮಿ-ಆಕಾಶಗಳ ಎಲ್ಲ ಶಕ್ತಿಗಳು ಕೂಡಿ ಕೆಲಸ ಮಾಡದಿದ್ದರೆ ಬೆಳೆಯಲಾರದು. ಭೂಮಿಯ ಖನಿಜ, ಲವಣ, ನೀರು, ಗಾಳಿ, ಮೋಡ, ಸೂರ್ಯನ ತಾಪ ಮತ್ತು ಬಿಸಿಲು, ಚಂದ್ರನ ಬೆಳಕು, ಇಬ್ಬನಿ ಇತ್ಯಾದಿಗಳೆಲ್ಲವೂ ಒಂದು ವಿಶಿಷ್ಟ ಯೋಜನೆಯನುಸಾರ, ಪೂರ್ಣ ಸಹಕಾರ- ಸಾಮರಸ್ಯಗಳೊಂದಿಗೆ ಕೂಡಿ ಕೆಲಸ ಮಾಡಿದಾಗ ಮಾತ್ರ ಗೋಧಿಯ ಒಂದು ಕಾಳು ಬೆಳೆಯ ಬಲ್ಲುದು. ಇವುಗಳಿಗೆಲ್ಲಾ ವಿವಿಧ ದೇವರುಗಳಿದ್ದು ಪ್ರತಿಯೊಬ್ಬ ದೇವರು ತನ್ನ ಸ್ವತಂತ್ರ ಇಚ್ಛೆಯಂತೆ ನಡೆಯುತ್ತಿದ್ದರೆ ಇಲ್ಲಿ ಗೋಧಿಯ ಒಂದು ಕಾಳು ಕೂಡಾ ಉತ್ಪತ್ತಿಯಾಗಲಾರದು.

ವಿಶ್ವದ ಈ ಕ್ರಿಯಾಶೀಲತೆ ಮತ್ತು ಅದರಲ್ಲಿ ಅಗಣಿತ ವಸ್ತುಗಳ ಅಸ್ತಿತ್ವವು ಈ ವಿಶ್ವದ ಅಸಂಖ್ಯ ಶಕ್ತಿಗಳ ಮಧ್ಯೆ ಸಂಪೂರ್ಣ ಸಹಕಾರ, ಸಾಮರಸ್ಯ ಮತ್ತು ಶಿಸ್ತು ಇದೆ ಎಂಬುದನ್ನು ಸೂಚಿಸುತ್ತದೆ. ಇದು ಈ ಶಕ್ತಿಗಳನ್ನು ನಿಯಂತ್ರಿಸುವ ಓರ್ವ ಮಹಾನ್

ಶಕ್ತಿ ಮತ್ತು ಜ್ಞಾನ ವ್ಯವಸ್ಥಾಪಕನು ತನ್ನ ದೃಢ ನಿರ್ಧಾರ ಮತ್ತು ಉನ್ನತ ಮಟ್ಟದ ಜಾಣ್ಮೆಯಿಂದ ವಿಶ್ವದ ಎಲ್ಲಾ ಶಕ್ತಿಗಳೂ ಪರಸ್ಪರ ಕೂಡಿ ಕೆಲಸ ಮಾಡುವಂತೆ ಮಾಡಿದ್ದರಿಂದ ಮಾತ್ರ ಸಾಧ್ಯವಾಗಿದೆ.

ಪವಿತ್ರ ಕುರ್‌ಆನಿನಲ್ಲಿ ವಿಶ್ವದ ಈ ವ್ಯವಸ್ಥೆ ಮತ್ತು ಅದರ ವಿಭಿನ್ನ ಶಕ್ತಿಗಳ ಮಧ್ಯೆ ಸಹಕಾರ-ಸಾಮರಸ್ಯಗಳನ್ನು ಅಲ್ಲಲ್ಲಿ ಪ್ರಸ್ತಾಪಿಸಲಾಗಿದೆ. ಇದು ಈ ವಿಶ್ವಕ್ಕೆ ಏಕೈಕ ಪ್ರಭುವಿದ್ದಾಗ ಮತ್ತು ಅವನು ಸರ್ವಜ್ಞನೂ ಸರ್ವ ಸಮರ್ಥನೂ ಆದಾಗ ಮಾತ್ರ ಸಾಧ್ಯವೆಂದೂ ಅದು ಪ್ರತಿಪಾದಿಸುತ್ತದೆ. ವಿಭಿನ್ನ ದೇವರುಗಳ ಅಸ್ತಿತ್ವದಿಂದ ಈ ಲೋಕದ ವ್ಯವಸ್ಥೆಯು ದೃಢ ಮತ್ತು ಸುಸ್ಥಿರವಾಗುವುದಂತಿರಲಿ ಅದು ಅಡಿಮೇಲಾಗಿ ಹೋದೀತು ಎಂದು ಅದು ಸಾರುತ್ತದೆ.

"ಭೂಮಿ-ಆಕಾಶಗಳಲ್ಲಿ ಏಕೈಕ ಅಲ್ಲಾಹನ ಹೊರತು ಇತರ ದೇವರುಗಳೂ ಇರುತ್ತಿದ್ದರೆ (ಭೂಮಿ ಮತ್ತು ಆಕಾಶ) ಇವೆರಡರ ವ್ಯವಸ್ಥೆಯೂ ಕೆಟ್ಟು ಹೋಗುತ್ತಿತ್ತು."

(ಪವಿತ್ರ ಕುರ್‌ಆನ್, 21:22)

ಬಹುದೇವಾರಾಧನೆ-ದೇವಭಕ್ತಿಗೆ ವಿರುದ್ಧ

ಬಹುದೇವಾರಾಧನೆಯ ಒಂದು ಅಪಾಯಕಾರಿ ಅಂಶವೇನೆಂದರೆ ಅದು ದೇವಭಕ್ತಿಗೆ ತೀರಾ ವಿರುದ್ಧವಾಗಿದೆ. ಅದು ದೇವರಿಂದ ಮನುಷ್ಯನ ಸಂಬಂಧವನ್ನು ಕಡಿದು ಬಿಡುತ್ತದೆ. ಅವನನ್ನು ದೇವನ ದಾಸ್ಯದಿಂದ ಸೃಷ್ಟಿಯ ದಾಸ್ಯದೆಡೆಗೆ ಒಯ್ಯುತ್ತದೆ. ಬಹುದೇವಾರಾಧನೆಯ ಧರ್ಮಗಳನ್ನು ಸ್ವೀಕರಿಸಿಕೊಂಡ ಮುಗ್ಧ ಜನರು ತಮಗೆ ದೇವಸಾಕ್ಷಾತ್ಕಾರವಾಯಿತೆಂದು ಬಗೆಯುತ್ತಾರೆ. ಇದರಿಂದ ಅವರಿಗೆ ಒಂದು ರೀತಿಯ ಆಧ್ಯಾತ್ಮಿಕ ಆನಂದದ ಅನುಭವ ವಾಗುತ್ತದೆ. ವಾಸ್ತವದಲ್ಲಿ ಅವರು ತಮ್ಮಂತಹ ಮನುಷ್ಯರ ಪ್ರೇಮ ಮತ್ತು ಭಕ್ತಿಯಲ್ಲಿ ಸಿಲುಕಿ ದೇವರಿಗೆ ಹತ್ತಿರವಾಗುವ ಬದಲು ಅವನಿಂದ ದೂರವಾಗುತ್ತಾರೆ.

ದೇವರೊಂದಿಗೆ ಮನುಷ್ಯನ ಸಂಬಂಧದ ಒಂದು ರೂಪ ಯಾವುದೆಂದರೆ ದೇವರು ಇಷ್ಟಾರ್ಥಗಳನ್ನು ಸಿದ್ಧಿಸುವವನು ಮತ್ತು ಸಂಕಷ್ಟಗಳನ್ನು ನೀಗಿಸುವವನಾಗಿದ್ದಾನೆ. ಎಲ್ಲಾ ಸಂದಿಗ್ಧ ಪರಿಸ್ಥಿತಿಗಳಲ್ಲಿ ಆತನು ನೆರವಿಗೆ ಬರುತ್ತಾನೆ. ಲಾಭ-ನಷ್ಟ, ಮಾನ-ಅಪಮಾನ, ಆರೋಗ್ಯ-ಅನಾರೋಗ್ಯ, ಸಂತತಿ, ಜೀವನದ ಸಾಧನಾನುಕೂಲತೆಗಳು ಇತ್ಯಾದಿ ಎಲ್ಲಾ ಬೇಡಿಕೆಗಳೂ ಅವನ ಕೈಯಲ್ಲೇ ಇವೆ. ಆದ್ದರಿಂದ ಮನುಷ್ಯನು ದೇವರಿಗೆ ಶರಣಾಗು ವುದರಲ್ಲಿ, ಅವನ ಸಂಪ್ರೀತಿಯನ್ನು ಗಳಿಸುವುದರಲ್ಲಿ ಉಭಯ ಲೋಕಗಳ ಯಶಸ್ಸು ಅಡಗಿದೆ ಎಂದು ಅವನು ಭಾವಿಸುತ್ತಾನೆ. ಆದರೆ ಬಹುದೇವವಾದಿ ವ್ಯವಸ್ಥೆಯಲ್ಲಿ ದೇವರ ಸೃಷ್ಟಿಗಳೇ ಅವನ ಇಷ್ಟಾರ್ಥಗಳನ್ನು ಸಿದ್ಧಿಸುವವರಾಗಿದ್ದಾರೆ. ಆದ್ದರಿಂದ ಆತನು ಅವರನ್ನು ಮೆಚ್ಚಿಸಲು ಪ್ರಯತ್ನಿಸುತ್ತಿರುತ್ತಾನೆ. ಅವರ ನಿಕಟ ಸಂಬಂಧವು ಇಂತಹ ದೇವ ಸೃಷ್ಟಿಗಳೊಂದಿಗೆ ಇರುತ್ತದೆಯೇ ವಿನಾ ದೇವರೊಂದಿಗೆ ಅವರಿಗೆ ನೈಜ ಸಂಬಂಧ

ಉಳಿಯುವುದಿಲ್ಲ. ಅವರು ದೇವರನ್ನು ನಂಬುತ್ತಾರಾದರೂ ಅವರ ಬಳಿ ಆತನಿಗೆ ಯಾವುದೇ ಮಹತ್ವವಿರುವುದಿಲ್ಲ.

ದೇವರೊಂದಿಗೆ ಸಂಬಂಧವಿರಿಸಿರುವ ಮನುಷ್ಯನು ಅವನನ್ನೇ ಪೂಜಿಸುತ್ತಾನೆ. ಅವನಲ್ಲೇ ಪ್ರಾರ್ಥಿಸುತ್ತಾನೆ. ಅವನ ಮುಂದೆ ನಿರ್ಮಲ ಚಿತ್ತದೊಂದಿಗೆ ಪೂರ್ಣವಾಗಿ ಶರಣಾಗುತ್ತಾನೆ. ಆದರೆ ಬಹುದೇವಾರಾಧನೆಯ ವ್ಯವಸ್ಥೆಯಲ್ಲಿ ಈ ಪೂಜೆ ಪುರಸ್ಕಾರಗಳು ಎಲ್ಲ ರೀತಿಯ ಸೃಷ್ಟಿಗಳ ಮುಂದೆ ನಡೆಯುತ್ತದೆ. ಎಲ್ಲಿಯ ವರೆಗೆಂದರೆ ನೈಜ ಸೃಷ್ಟಿಕರ್ತನಿಗೆ ಯಾವುದೇ ಪೂಜೆ ಉಳಿದಿರುವುದಿಲ್ಲ. ಉಳಿದರೂ ಅದು ಯಾವುದೇ ಮಹತ್ವವನ್ನು ಹೊಂದಿರುವುದಿಲ್ಲ. ಮನುಷ್ಯನು ಮನಸಾರೆ ಒಬ್ಬನೇ ಒಡೆಯನ ನಿಷ್ಠಾವಂತ ನಾಗಬಲ್ಲ. ಒಬ್ಬನ ಮುಂದೆ ಮಾತ್ರ ಪೂರ್ಣವಾಗಿ ಶರಣಾಗಬಲ್ಲ. ಅವನು ಅನೇಕ ದೇವರನ್ನು ನಂಬುವವನಾಗಿದ್ದರೆ ಅವನ ಪೂಜೆ ಕೇವಲ ಒಂದು ಸಂಪ್ರದಾಯವಾಗಿರುತ್ತದೆ. ಅದರಲ್ಲಿ ಶರಣಾಗತಿ, ನಿಷ್ಠೆ, ದಾಸ್ಯವೇ ಮುಂತಾದ ಗುಣಗಳು ಇರಲಾರವು.

ದೇವರೊಂದಿಗೆ ಸಂಬಂಧವಿರಿಸಿರುವ ಮನುಷ್ಯನು ದೇವರನ್ನು ಅನುಸರಿಸುತ್ತಾನೆ. ಅವನ ನಿಯಮಗಳನ್ನು ಪಾಲಿಸುತ್ತಾನೆ. ಉಭಯ ಲೋಕಗಳ ಶ್ರೇಯಸ್ಸು ಅದರಲ್ಲೇ ಅಡಗಿದೆಯೆಂದು ನಂಬುತ್ತಾನೆ. ಆದರೆ ಬಹುದೇವಾರಾಧಕರ ಪಾಲಿಗೆ ಕೇವಲ ಕೆಲವು ಪೂಜಾ ವಿಧಿಗಳು, ಕೆಲವು ಉಪಾಸನೆ, ಅರ್ಚನೆ ಮತ್ತು ಹರಕೆ ಕಾಣಿಕೆಗಳು ಮನುಷ್ಯನ ಮುಕ್ತಿಗೆ ಸಾಕಾಗುವುದು. ಆದ್ದರಿಂದ ಅವರು ದೇವಾನುಸರಣೆ ಮತ್ತು ಅವನ ನಿಯಮ ಗಳನ್ನು ಪಾಲಿಸುವ ಗೋಜಿಗೆ ಹೋಗುವುದಿಲ್ಲ. ಧರ್ಮವು ಕೇವಲ ಕೆಲವು ಆಚಾರ-ಸಂಪ್ರದಾಯಗಳ ಹೆಸರಾಗಿ ಉಳಿಯುತ್ತದೆ.

ವಾಸ್ತವದಲ್ಲಿ ಬಹುದೇವವಿಶ್ವಾಸಕ್ಕೆ ಯಾವುದೇ ಆಧಾರ ಪ್ರಮಾಣ ಹಿಂದೆಯೂ ಇರಲಿಲ್ಲ. ಈಗಲೂ ಇಲ್ಲ. ಇಂದು ಮನುಷ್ಯನಲ್ಲಿ ಆಗಿರುವ ಜ್ಞಾನ ಮತ್ತು ವಿಚಾರಗಳ ವಿಕಾಸದಿಂದಾಗಿ ಬಹುದೇವವಿಶ್ವಾಸಕ್ಕೆ ಆಸ್ಪದವೇ ಉಳಿದಿಲ್ಲ. ಬಹುದೇವ ವಿಶ್ವಾಸವು ಉಳಿದಿರುವುದು ಧಾರ್ಮಿಕ ವಿಷಯಗಳಲ್ಲಿ ಬುದ್ಧಿಗೆ ಪ್ರವೇಶವಿಲ್ಲವೆಂಬ ಕಲ್ಪನೆಯ ಆಧಾರದಲ್ಲಾಗಿದೆ. ತಂದೆ-ತಾತಂದಿರಿಂದ ನಡೆದು ಬಂದ ಸಂಪ್ರದಾಯವನ್ನು ಕಣ್ಣುಮುಚ್ಚಿ ಅನುಸರಿಸುವುದು ರೂಢಿಯಾಗಿದೆ. ಅಥವಾ ಒಂದು ವಿಶಿಷ್ಟ ಸಂಸ್ಕೃತಿಯ ಉಳಿವು ಮತ್ತು ವಿಶಿಷ್ಟ ರಾಷ್ಟ್ರೀಯತೆಯ ಮುಂದುವರಿಕೆಗೆ ಅದನ್ನು ಅನಿವಾರ್ಯವೆಂದು ಬಗೆಯಲಾಗಿದೆ. ಆ ಬಹುದೇವ ವಿಶ್ವಾಸವು ಶಿಥಿಲವಾದರೆ ರಾಷ್ಟ್ರೀಯತೆಯ ಐಕ್ಯವು ಛಿದ್ರಗೊಳ್ಳುವುದೆಂದು ಅವರು ತಿಳಿದಿದ್ದಾರೆ. ಬೇರೆ ಮಾತಿನಲ್ಲಿ ಹೇಳುವುದಾರೆ ಬಹುದೇವಾರಾಧನೆಯನ್ನು ದೇವ ಭಕ್ತಿಯ ಆಧಾರದಲ್ಲಿ ಸಮರ್ಥಿಸುತ್ತಿರುವುದಲ್ಲ, ರಾಷ್ಟ್ರೀಯವಾದದ (Nationalism) ಆಧಾರದಲ್ಲಿ ಅದನ್ನು ಸಮರ್ಥಿಸಲಾಗುತ್ತಿದೆ. ಬಹುದೇವ ವಿಶ್ವಾಸಿಗಳ ಈ ವೈಚಾರಿಕ ದಿವಾಳಿಕೋರತನವನ್ನು ಪವಿತ್ರ ಕುರ್‌ಆನಿನಲ್ಲಿ ಹೀಗೆ ವಿವರಿಸಲಾಗಿದೆ;

"ಇವರಿಗೆ ಇದರ ವಾಸ್ತವಿಕತೆ ಸ್ವಲ್ಪವೂ ತಿಳಿದಿಲ್ಲ. ಇವರು ಕೇವಲ ಊಹಿಸುತ್ತಿದ್ದಾರಷ್ಟೇ" (ಪವಿತ್ರ ಕುರ್‌ಆನ್, 43:20)

ಬಹುದೇವಾರಾಧಕರು ತಮ್ಮ ಬಳಿ ಅದಕ್ಕೆ ಪುರಾವೆಗಳಿದ್ದರೆ ಪ್ರಸ್ತುತಪಡಿಸಲಿ ಎಂದು ಕುರ್‌ಆನ್ ಹೇಳುತ್ತದೆ,

"ಹೇಳಿರಿ- ನಿಮ್ಮ ಹತ್ತಿರ ನಮ್ಮ ಮುಂದಿರಿಸತಕ್ಕ ಜ್ಞಾನವೇನಾದರೂ ಇದೆಯೇ? ನೀವಂತು ಕೇವಲ ಗುಮಾನಿಯಂತೆ ನಡೆಯುತ್ತೀರಿ ಮತ್ತು ಬರೇ ಊಹಾಪೋಹೆ ಗಳನ್ನಿರಿಸುತ್ತೀರಿ." (ಪವಿತ್ರ ಕುರ್‌ಆನ್, 6:148)

ಕುರ್‌ಆನ್‌ನ ಪ್ರಕಾರ ಅವರ ಬಳಿ ಇರುವುದು ಕೇವಲ ಒಂದೇ ಪುರಾವೆ. ಅದು ಹೀಗಿದೆ,

"ನಮ್ಮ ಪೂರ್ವಜರು ಒಂದು ಪದ್ಧತಿಯಲ್ಲಿದ್ದುದಾಗಿ ನಾವು ಕಂಡಿದ್ದೇವೆ ಮತ್ತು ನಾವು ಅವರ ಹೆಜ್ಜೆ ಗುರುತುಗಳನ್ನೇ ಅನುಸರಿಸುತ್ತೇವೆ ಎಂದೇ ಹೇಳಿದ್ದರು."

(ಪವಿತ್ರ ಕುರ್‌ಆನ್, 43:23)

ಮಾನವಕುಲದ ಮೇಲೆ ಬಹುದೇವವಿಶ್ವಾಸದ ಪರಿಣಾಮಗಳು

ಒಂದು ಜನಾಂಗವು ಜೀವನದ ಮೂಲಭೂತ ವಿಷಯವಾದ ದೇವಾಸ್ತಿತ್ವದ ಕುರಿತು ಒಂದು ವಿಶ್ವಾಸವನ್ನು ಆಧಾರ-ಪ್ರಮಾಣಗಳಿಲ್ಲದೆ ಕಣ್ಣು ಮುಚ್ಚಿ ಒಪ್ಪಿಕೊಂಡು ಅದನ್ನು ಮನ-ಮಸ್ತಿಷ್ಕಗಳಲ್ಲಿ ಆಳವಾಗಿ ಇಳಿಸಿದರೆ ಕಣ್ಣು ಮುಚ್ಚಿ ನಂಬುವ ಈ ಅಭ್ಯಾಸವು ಅವನ ವೈಚಾರಿಕ ಒಲವನ್ನೇ ನಾಶಮಾಡಿ ಬಿಡುತ್ತದೆ. ಅವನ ಮಸ್ತಿಷ್ಕವು ಅವೈಚಾರಿಕತೆ ಮತ್ತು ಅವೈಜ್ಞಾನಿಕ ಪ್ರವೃತ್ತಿಗೆ ಪಕ್ಕಾಗಿ ಬಿಡುತ್ತದೆ. ಅವನು ಎಲ್ಲ ರೀತಿಯ ಮೂಢನಂಬಿಕೆ, ಭ್ರಮೆ ಮತ್ತು ಕಂದಾಚಾರಗಳಿಗೆ ಸುಲಭವಾಗಿ ಬಲಿಯಾಗುತ್ತಾನೆ. ಅಂಧಾನುಕರಣೆ ಅವನಲ್ಲಿ ವ್ಯಾಪಕವಾಗಿ ಅವನು ಭಾವನೆಗಳಿಗೆ ಬಲಿ ಬೀಳುತ್ತಾನೆ. ಇಂತಹ ಜನಾಂಗದ ನಾಯಕರು ಜ್ಞಾನದ ಬೆಳಕನ್ನು ಹರಡಲು ಬಿಡುವುದಿಲ್ಲ. ಜನರು ಪ್ರಜ್ಞಾವಂತರಾದರೆ ಅವರ ಧಾರ್ಮಿಕ ಅಂಧವಿಶ್ವಾಸಗಳ ಮಾಯಾಜಾಲವು ಮುರಿದು ಬೀಳುವುವೆಂದು ಅವರು ಭಯಪಡುತ್ತಾರೆ.

ಇದರಿಂದಾಗಿ ಧಾರ್ಮಿಕ ವಲಯದಿಂದ ಬುದ್ಧಿ-ವಿವೇಕಗಳನ್ನು ಹೊರಹಾಕಲಾಗುತ್ತದೆ. ಕೆಲವರು ವೈಯಕ್ತಿಕ ಮತ್ತು ರಾಷ್ಟ್ರೀಯ ಉದ್ದೇಶಗಳಿಗಾಗಿ ಈ ವಿಶ್ವಾಸವನ್ನು ಬಳಸುತ್ತಾರೆ. ಕೆಲವರು ಈ ಮೂಢನಂಬಿಕೆ ಮತ್ತು ಕಂದಾಚಾರಗಳ ವಿರುದ್ಧ ಬಂಡಾಯವೆದ್ದು ನಾಸ್ತಿಕತೆಯ ಹಾದಿ ಹಿಡಿಯುತ್ತಾರೆ. ಈ ರೀತಿ ಬಹುದೇವರಾಧನೆಯ ಅವೈಚಾರಿಕತೆಯು ನಾಸ್ತಿಕತೆಯ ಅವೈಚಾರಿಕತೆಗೆ ಜನ್ಮ ನೀಡುತ್ತದೆ. ಇಂದು ನಾಸ್ತಿಕತೆಯ ಮಹಾಪೂರವನ್ನು ಧರ್ಮದಿಂದ ತಡೆಯಲಿಕ್ಕಾಗದಿದ್ದರೆ ಅದಕ್ಕೆ ಕಾರಣ ಈ ಬಹುದೇವವಿಶ್ವಾಸವೇ ಆಗಿದೆ. ಇಂದಿನ ಸುಶಿಕ್ಷಿತ ವ್ಯಕ್ತಿಯೊಬ್ಬನು ಬಹುದೇವ ವಿಶ್ವಾಸದ ಅವೈಚಾರಿಕತೆ ಮತ್ತು ಪೌರಾಣಿಕತೆಯನ್ನು ಅಂಗೀಕರಿಸುವುದು ಅಸಾಧ್ಯ.

ಬಹುದೇವ ವಿಶ್ವಾಸಿಗಳಲ್ಲಿರುವ ಒಂದು ಸ್ವಾರಸ್ಯಕರ ಅಂಶವೇನೆಂದರೆ ಅವರು ತಮ್ಮನ್ನು ಮೂಲತಃ ಏಕದೇವ ವಿಶ್ವಾಸಿಗಳೆಂದೇ ಸಾರುತ್ತಾರೆ. ಜಗತ್ತಿನ ಎಲ್ಲ ಬಹುದೇವ ವಿಶ್ವಾಸಿ ಜನಾಂಗಗಳ ಕಥೆಯೂ ಇದುವೇ ಆಗಿದೆ.

ಆರ್ಯ ಸಮಾಜದ ಸಂಸ್ಥಾಪಕರಾದ ಸ್ವಾಮಿ ದಯಾನಂದ ಸರಸ್ವತಿಯವರ ಪ್ರಕಾರ ವೇದಗಳು ಏಕದೇವ ಸಿದ್ಧಾಂತ ಮತ್ತು ದೇವಭಕ್ತಿಯನ್ನು ಪ್ರತಿಪಾದಿಸುತ್ತವೆ ಮತ್ತು ಅವು ಬಹುದೇವ ವಿಶ್ವಾಸ ಮತ್ತು ಮೂರ್ತಿ ಪೂಜೆಯನ್ನು ಖಂಡಿಸುತ್ತವೆ.

'ಏಕಂ ಸದ್ ವಿಪ್ರಾ ಬಹುದಾ ವದಂತಿ'

'ದೇವನೊಬ್ಬನೇ ಋಷಿಗಳು ಅವನನ್ನು ವಿಭಿನ್ನ ಹೆಸರುಗಳಿಂದ ಕರೆಯುತ್ತಾರೆ' ಎಂಬ ಋಗ್ವೇದದ ಮಂತ್ರವು ಪ್ರಸಿದ್ಧವಿದೆ. ಇದರಿಂದ ತಿಳಿಯುವಂತೆ ಜಗತ್ತಿನ ಪ್ರಸಿದ್ಧ ಸಂಸ್ಕೃತಿಗಳ ಮೂಲವು ನಿಜವಾಗಿ ಏಕದೇವತ್ವವೇ ಆಗಿತ್ತು. ಆದರೆ ಪತನ ಕಾಲದಲ್ಲಿ ಈ ಸಂಸ್ಕೃತಿಯಲ್ಲಿ ಬಹುದೇವ ವಿಶ್ವಾಸವು ನುಸುಳಿ ಕೊಂಡಿತು.

ಏಸುಕ್ರಿಸ್ತ (ಈಸಾ[ಅ]) ಅವರ ಮೂಲ ಸಂದೇಶವು ಏಕದೇವತ್ವದ ಸಂದೇಶವಾಗಿತ್ತೆಂಬುದು ಒಂದು ನಿರ್ವಿವಾದ ವಿಷಯ. ಆದರೆ ತನ್ನ ಪತನ ಕಾಲದಲ್ಲಿ ಕ್ರೈಸ್ತ ಧರ್ಮವು ತ್ರಿಏಕತ್ವವನ್ನು ನೆಚ್ಚಿಕೊಂಡಿತು. ಬೈಬಲ್‌ನ ಹಳೆಯ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಗಳಿಲ್ಲದಿರುತ್ತಿದ್ದರೆ ಈ ವಾಸ್ತವಿಕತೆಯನ್ನು ಕಂಡುಕೊಳ್ಳುವುದು ಬಹಳ ಕಷ್ಟವಾಗುತ್ತಿತ್ತು.

ಇನ್ನು ಭಾರತೀಯ ಮುಸ್ಲಿಮರನ್ನೇ ತೆಗೆದುಕೊಳ್ಳಿ. ಪವಿತ್ರ ಕುರ್‌ಆನ್ ತನ್ನ ಮೂಲ ರೂಪದಲ್ಲಿ ಇಲ್ಲದಿರುತ್ತಿದ್ದರೆ, ಪ್ರವಾದಿ ವಚನಗಳ ಪ್ರಾಮಾಣಿಕ ಸಂಗ್ರಹಗಳು ನಮ್ಮ ಕೈಗಳಲ್ಲಿ ಇಲ್ಲದಿರುತ್ತಿದ್ದರೆ ಹಾಗೂ ಮುಸ್ಲಿಮರ ಅಧಿಕೃತ ಇತಿಹಾಸವು ಲಭ್ಯವಿಲ್ಲದಿರುತ್ತಿದ್ದರೆ ಮುಸ್ಲಿಮರಲ್ಲಿ ವ್ಯಾಪಕವಾಗಿರುವ ಬಹುದೇವಾರಾಧಕ ಕಂದಾಚಾರಗಳನ್ನು ಕಂಡು ಇಸ್ಲಾಮನ್ನು ಏಕದೇವತ್ವದ ಪ್ರತಿಪಾದಕ ಧರ್ಮವೆಂದು ಯಾರು ತಾನೇ ಪರಿಗಣಿಸುತ್ತಿದ್ದರು.

ಮಾನವಕುಲದ ಅವಹೇಳನ

ಬಹುದೇವ ವಿಶ್ವಾಸಿ ಕಲ್ಪನೆಯ ಪ್ರಕಾರ ಪ್ರತಿಯೊಂದು ಸೃಷ್ಟಿಯೂ ಆರಾಧ್ಯ ಆಗಬಹುದು. ಮನುಷ್ಯ ಅದರ ಮುಂದೆ ಮಂಡಿಯೂರಿ, ಕೈ ಮುಗಿದು, ಪ್ರಾರ್ಥನೆ ಸಲ್ಲಿಸಿದರೆ ಸಾಕು. ಇದರರ್ಥ ಜಗತ್ತಿನ ಎಲ್ಲ ಸೃಷ್ಟಿಯೂ ಮನುಷ್ಯನಿಗಿಂತ ಶ್ರೇಷ್ಠ ಎಂದಾಗಿದೆ. ಮನುಷ್ಯನು ಎಲ್ಲಕ್ಕಿಂತಲೂ ನಿಕೃಷ್ಟ. ಪ್ರತಿಯೊಂದು ವಸ್ತುವೂ ಮನುಷ್ಯನ ಯಜಮಾನ ಮತ್ತು ಆರಾಧ್ಯವಾಗಿದೆ. ಸತ್ತು ಹೋದ ಮಾನವರೂ ಮನುಷ್ಯನ ಆರಾಧ್ಯರಾಗಿ ಮಾರ್ಪಡುತ್ತಾರೆ.

ಸೃಷ್ಟಿ ಶ್ರೇಷ್ಠನಾದ ಮಾನವನಿಗೆ ಇದಕ್ಕಿಂತ ನಿಕೃಷ್ಟವಾದ ಒಂದು ಸ್ಥಾನವನ್ನು ಕಲ್ಪಿಸಿ ಕೊಳ್ಳುವುದು ಸಾಧ್ಯವೇ? ಮನುಷ್ಯನು ತನ್ನಂತಹ ಇತರ ಮನುಷ್ಯರನ್ನು ಮಾತ್ರವಲ್ಲ,

ಪ್ರಾಣಿಗಳು, ಕ್ರಿಮಿಕೀಟಗಳನ್ನು, ಹಾವು-ಚೇಳುಗಳು, ಮರ-ವೃಕ್ಷ, ಸಮುದ್ರ- ಪರ್ವತ, ಕಲ್ಲು, ನೆಲ-ಜಲ, ವಾಯು, ಅಗ್ನಿ, ಗುಪ್ತಾಂಗಗಳು ಇತ್ಯಾದಿಗಳೆಲ್ಲವೂ ದೇವರಾಗ ಬಲ್ಲುವು. ಮನುಷ್ಯ ಅವುಗಳೆಲ್ಲದರ ಮುಂದೆಯೂ ಶಿರಬಾಗಬೇಕು. ಇದಕ್ಕಿಂತ ನಿಂದ್ಯತೆ ಮತ್ತು ನಿಕೃಷ್ಟತೆಯ ಸ್ಥಿತಿಯನ್ನು ಊಹಿಸುವುದು ಕೂಡಾ ಅಸಾಧ್ಯ. ಮನುಷ್ಯನ ಸ್ಥಾನಮಾನಗಳನ್ನು ಬಲ್ಲವನಾರೂ ಈ ನಿಂದ್ಯತೆಯನ್ನು ಸ್ವೀಕರಿಸಿಕೊಳ್ಳಲಾರನು.

ಈ ನಿಂದ್ಯತೆ ಮತ್ತು ನಿಕೃಷ್ಟತೆಯನ್ನು ಪವಿತ್ರ ಕುರ್‌ಆನ್ ಅತ್ಯಂತ ಸಂಕ್ಷಿಪ್ತವಾಗಿಯೂ ಸಾರವತ್ತಾಗಿಯೂ ವಿವರಿಸಿದೆ;

"ಅಲ್ಲಾಹನೊಂದಿಗೆ ಸಹಭಾಗಿತ್ವ ಎಸಗುವವನು ಆಕಾಶದಿಂದ ಕೆಳಗೆ ಬಿದ್ದಂತೆ. ಆಗ ಅವನನ್ನು ಒಂದೋ ಪಕ್ಷಿಗಳು ಕಿತ್ತುಕೊಂಡು ಹೋಗುವುವು ಅಥವಾ ಗಾಳಿಯು ಅವನನ್ನು ಒಯ್ದು, ಅವನು ನುಚ್ಚುನೂರಾಗಿ ಬಿಡುವಂತಹ ಸ್ಥಳಕ್ಕೆ ಅಪ್ಪಳಿಸಿ ಬಿಡುವುದು."

(ಪವಿತ್ರ ಕುರ್‌ಆನ್, 22:31)

ಪವಿತ್ರ ಕುರ್‌ಆನ್ ಮಾನವನಿಗೆ ಅವನ ಉನ್ನತ ಸ್ಥಾನವನ್ನು ಈ ರೀತಿ ಪರಿಚಯಿಸುತ್ತದೆ-

"ನಾವು ಆದಮರ ಸಂತತಿಗೆ ಶ್ರೇಷ್ಠತೆಯನ್ನು ಪ್ರದಾನ ಮಾಡಿದ್ದುದೂ ಅವರಿಗೆ ನೆಲ, ಜಲಗಳಲ್ಲಿ ಯಾನಗಳನ್ನು ದಯ ಪಾಲಿಸಿದ್ದುದೂ ಅವರಿಗೆ ಶುದ್ಧ ವಸ್ತುಗಳಿಂದ ಜೀವನಾಧಾರ ನೀಡಿದ್ದುದೂ ನಮ್ಮ ಅನೇಕ ಸೃಷ್ಟಿಗಳ ಮೇಲೆ ಉತ್ಕೃಷ್ಟತೆ ಕೊಡ ಮಾಡಿದುದೂ ನಮ್ಮ ಅನುಗ್ರಹವಾಗಿದೆ." (ಪವಿತ್ರ ಕುರ್‌ಆನ್, 17:70)

ಮನುಷ್ಯನು ಭೂಮುಖದ ಮೇಲೆ ಅಲ್ಲಾಹನ ಪ್ರತಿನಿಧಿಯಾಗಿರುವನು,

"ನಿಮ್ಮ ಪ್ರಭುವು ಮಲಾಯಿಕಃ(ದೇವಚರ)ರೊಡನೆ, ನಾನು ಭೂಮಿಯಲ್ಲಿ ಒಬ್ಬ ಖಲೀಫಃನನ್ನು (ಪ್ರತಿನಿಧಿ) ನೇಮಿಸಲಿದ್ದೇನೆ ಎಂದು ಹೇಳಿದ ಸಂದರ್ಭವನ್ನು ಕೊಂಚ ಊಹಿಸಿರಿ." (ಪವಿತ್ರ ಕುರ್‌ಆನ್, 2:30)

ಇಂತಹ ಒಂದು ಸೃಷ್ಟಿಯು ಅಲ್ಲಾಹನ ಮುಂದೆ ಸಾಷ್ಟಾಂಗವೆರಗಬಹುದು- ಅವನ ಮುಂದೆ ಸಾಷ್ಟಾಂಗವೆರಗಲೇಬೇಕು ಏಕೆಂದರೆ ಅವನು ಆತನ ಮತ್ತು ಸಮಸ್ತ ವಿಶ್ವದ ಸೃಷ್ಟಿಕರ್ತ, ಒಡೆಯ, ಪರಿಪಾಲಕ ಮತ್ತು ಅಧಿಪತಿಯಾಗಿರುತ್ತಾನೆ. ಆತನ ಹೊರತು ಇತರ ಯಾರ ಮುಂದೆ ಸಾಷ್ಟಾಂಗವೆರಗಿದರೂ ಅದು ಅವನ ಸ್ಥಾನಮಾನಕ್ಕೆ ನಿಲುಕದ ಮತ್ತು ನಿಂದ್ಯತೆ ಹಾಗೂ ನಿಕೃಷ್ಟತೆಯ ಕೃತ್ಯವಾಗಿದೆ.

'ನಿನ್ನ ಅಗತ್ಯಗಳ ಪೂರೈಕೆ ಮತ್ತು ನಿನ್ನ ಶ್ರದ್ಧಾ ಭಕ್ತಿ ಭಾವಗಳ ಶಮನಕ್ಕೆ ಒಬ್ಬ ದೇವನು ಸಾಕಾಗದೇ' ಎಂದು ಪವಿತ್ರ ಕುರ್‌ಆನ್ ಮನುಷ್ಯನಲ್ಲಿ ಪ್ರಶ್ನಿಸುತ್ತದೆ:

'ಅಲ್ಲಾಹನು ತನ್ನ ದಾಸನಿಗೆ ಸಾಕಾಗಲಾರನೇ?' (ಪವಿತ್ರ ಕುರ್‌ಆನ್, 39:36)

ಅದು ಮನುಷ್ಯನನ್ನು ಚಿಂತನೆಗೆ ಹಚ್ಚುತ್ತದೆ. ಅದು ಅವನಲ್ಲಿ ಈ ರೀತಿ ಪ್ರಶ್ನಿಸುತ್ತದೆ: ಮನುಷ್ಯನಿಗೆ ಒಬ್ಬನೇ ಒಡೆಯ ಮತ್ತು ಅಧಿಪತಿಯಿದ್ದು ಅವನು

ಸರ್ವಸಮರ್ಥನಾಗಿರುವುದು ಹಾಗೂ ಅವನಿಗೆ ಆ ಒಬ್ಬ ಒಡೆಯನ ದಾಸ್ಯ ಮತ್ತು ಅನುಸರಣೆ ಮಾಡಬೇಕಾಗುವುದು ಉತ್ತಮವೇ ಅಥವಾ ಅವನಿಗೆ ಅನೇಕ ಒಡೆಯರು ಮತ್ತು ಅಧಿಪತಿಗಳಿದ್ದು ಅವರೆಲ್ಲರ ಮುಂದೆ ಮಂಡಿಯೂರುವ ಮತ್ತು ಎಲ್ಲರ ಸಂತೃಪ್ತಿಯನ್ನು ಬಯಸುವ ಪರಿಸ್ಥಿತಿ ಉತ್ತಮವೇ?

"ಅನೇಕ ಭಿನ್ನ ಭಿನ್ನ ಪ್ರಭುಗಳು ಲೇಸೋ ಅಥವಾ ಸರ್ವ ಸಮರ್ಥನಾದ ಏಕ ಅಲ್ಲಾಹನೋ? ಎಂದು ನೀವು ಸ್ವತಃ ಯೋಚಿಸಿರಿ." (ಪವಿತ್ರ ಕುರ್‌ಆನ್, 12:39)

ಆ ಏಕದೇವನನ್ನು ಬಿಟ್ಟು ಯಾರನ್ನೆಲ್ಲಾ-ಯಾವುದನ್ನೆಲ್ಲಾ ಮನುಷ್ಯರು ಪೂಜಿಸುತ್ತಾ ಬಂದಿರುವರೋ ಅವೆಲ್ಲವೂ ಕೇವಲ ಕಾಲ್ಪನಿಕ ಅಸ್ತಿತ್ವವಾಗಿದೆ.

"ಅವನನ್ನು ಬಿಟ್ಟು ನೀವು ಯಾರ ದಾಸ್ಯ-ಆರಾಧನೆ ಮಾಡುತ್ತಿ ರುವಿರೋ ಅವರೆಲ್ಲಾ ನೀವೂ ನಿಮ್ಮ ಪೂರ್ವಿಕರೂ ಇರಿಸಿಕೊಂಡಿರುವ ಕೆಲವು ಹೆಸರುಗಳ ವಿನಾ ಇನ್ನೇನೂ ಅಲ್ಲ. ಅಲ್ಲಾಹನು ಅವುಗಳ ಬಗ್ಗೆ ಯಾವ ಪ್ರಮಾಣವನ್ನೂ ಇಳಿಸಿರುವುದಿಲ್ಲ. ಆಜ್ಞಾಧಿಕಾರವು ಅಲ್ಲಾಹನಿಗೆ ಹೊರತು ಇನ್ನಾರಿಗೂ ಇಲ್ಲ." (ಪವಿತ್ರ ಕುರ್‌ಆನ್, 12:40)

ಸ್ವಾಭಿಮಾನವುಳ್ಳ ಯಾವ ವ್ಯಕ್ತಿಯೂ ಅನೇಕ ಕಾಲ್ಪನಿಕ ದೇವರುಗಳನ್ನು ಮಾಡಿಕೊಂಡು ಅವುಗಳ ಪಾದತಳದಲ್ಲಿ ತನ್ನ ಸ್ವಾಭಿಮಾನವನ್ನು ಅರ್ಪಿಸಲು ಖಂಡಿತ ಸಿದ್ಧವಾಗಲಾರ.

ಬಹುದೇವವಾದಿ ವ್ಯವಸ್ಥೆಯಲ್ಲಿ ಮಾನವ ಪ್ರಾಣಕ್ಕೆ ಯಾವ ಬೆಲೆಯೂ ಇರುವುದಿಲ್ಲ. ಅದನ್ನು ಅತ್ಯಂತ ಕ್ಷುಲ್ಲಕ ಭೌತಿಕ ಲಾಭಕ್ಕಾಗಿ ಬಲಿ ನೀಡಬಹುದಾಗಿದೆ. ಅದನ್ನು ದೇವತೆಗಳ ಆಸ್ಥಾನದಲ್ಲಿ ಬಲಿ ನೀಡಬಹುದಾಗಿದೆ. ಅದನ್ನು ರಾಜಕೀಯ ಯಜಮಾನರ ಸನ್ನೆಯಂತೆ ತ್ಯಾಗ ಮಾಡಬಹುದಾಗಿದೆ. ಮಾತ್ರವಲ್ಲ ಮೋಕ್ಷ ಗಳಿಸಲಿಕ್ಕಾಗಿಯೂ ಶರೀರವನ್ನು ನಿಗ್ರಹಿಸಿ-ದಂಡಿಸಿ ಕೊನೆಗೊಳಿಸಬಹುದಾಗಿದೆ. ಒಟ್ಟಿನಲ್ಲಿ ಮಾನವ ಜೀವನವು ಒಂದು ಕ್ಷುಲ್ಲಕ ವಸ್ತು. ಅದನ್ನು ಎಲ್ಲಿಬೇಕಾದರೂ ಎಸೆಯಬಹುದು. ಎಲ್ಲಿ ಬೇಕಾದರೂ ವ್ಯರ್ಥಗೊಳಿಸಬಹುದು. ಅದಕ್ಕೆ ಒಂದು ಪ್ರಾಣಿಯ ಜೀವದ ಕಿಮ್ಮತ್ತೂ ಇಲ್ಲ. ಅದನ್ನು ಹಳೆಯ ಬಟ್ಟೆಯನ್ನು ಕಳಚಿ ಹೊಸ ಬಟ್ಟೆಯನ್ನು ಧರಿಸುವಷ್ಟೇ ಸುಲಭವಾಗಿ ಕಳಚಿ ಬಿಡಬಹುದಾಗಿದೆ.

ಬಹುದೇವ ವಿಶ್ವಾಸದಲ್ಲಿ ಅಡಕವಾಗಿರುವ ಇನ್ನೊಂದು ಮಾನವ ವಿರೋಧಿ ಅಂಶವು ಉಚ್ಚ-ನೀಚತೆ ಮತ್ತು ವರ್ಣ ಮೇಲ್ಮೆಯ ಕಲ್ಪನೆಯಾಗಿದೆ. ಇದು ಎಲ್ಲ ಬಹುದೇವಾರಾಧಕ ಸಂಸ್ಕೃತಿಗಳಲ್ಲಿ ಸಾಮಾನ್ಯವಾಗಿರುವ ಒಂದು ಪಿಡುಗಾಗಿದೆ. ಧಾರ್ಮಿಕ ಪೌರೋಹಿತ್ಯ ಮತ್ತು ರಾಜಕೀಯ ನಾಯಕತ್ವಕ್ಕೂ ಈ ಕಲ್ಪನೆಯು ಕೆಲವರಿಗೆ ಮಾತ್ರ ದಾರಿ ಮಾಡಿಕೊಡುತ್ತದೆ. ತಮ್ಮನ್ನು ದೇವತೆಗಳ ಸಂತತಿಯೆಂದೋ ಅಥವಾ ದೇವರೆಂದೋ ಸಾಬೀತು ಪಡಿಸುವ ಮೂಲಕ ಆ ವರ್ಗಗಳು ಸಾರ್ವಜನಿಕರ ಮೇಲೆ ತಮ್ಮ ಮೇಲ್ಮೆಯನ್ನು ಸ್ಥಾಪಿಸುತ್ತವೆ. ಇರಾಕ್, ಈಜಿಪ್ಟ್, ಗ್ರೀಕ್ ಮತ್ತು ಭಾರತೀಯ ಸಂಸ್ಕೃತಿಯಲ್ಲಿ ಈ ಕಲ್ಪನೆಯು ಹಾಸು ಹೊಕ್ಕಾಗಿದೆ. ಈಜಿಪ್ಟ್‌ನ ರಾಜರು ತಮ್ಮನ್ನು ಸೂರ್ಯದೇವತೆಯ

ವಂಶಕ್ಕೆ ಸೇರಿದವರೆಂದು ಭಾವಿಸುತ್ತಿದ್ದರು. ಗ್ರೀಕ್ ತತ್ವಜ್ಞಾನಿಗಳು ಕೂಡಾ ತಮ್ಮ ರಾಜರನ್ನು ದೇವತೆಗಳ ಸಂತತಿಯೆಂದು ಪರಿಗಣಿಸುತ್ತಿದ್ದರು. ಭಾರತದಲ್ಲಿ ಬ್ರಾಹ್ಮಣರು ಅತ್ಯುನ್ನತರೆಂದು ಪರಿಗಣಿಸಲ್ಪಡುತ್ತಾರೆ. ಶೂದ್ರರು ಅತ್ಯಂತ ನಿಕೃಷ್ಟರಾಗಿದ್ದು ಕೇವಲ ಉನ್ನತ ಜಾತಿಯವರ ಸೇವೆಗಾಗಿ ಹುಟ್ಟಿದವರಾಗಿದ್ದಾರೆ. ಮನುಸ್ಮೃತಿಯ ಈ ಕೆಳಗಿನ ಉದ್ಧರಣೆಗಳನ್ನು ಗಮನಿಸಿರಿ:

ಭೂತಾನಾಂ ಪ್ರಾಣಿನಃ ಶ್ರೇಷ್ಠಾಃ ಪ್ರಾಣಿನಾಂ ಬುದ್ಧಿ ಜೀವನಃ|
ಬುದ್ಧಿ ಮತ್ತು ನರಾಃ ಶ್ರೇಷ್ಠಾ ನರೇಷು ಬ್ರಾಹ್ಮಣಾಃ ಸ್ಮೃತಾಃ||

(ಅಧ್ಯಾಯ-1, ಶ್ಲೋಕ-96)

'ವೃಕ್ಷಾದಿ ಸ್ಥಾವರಗಳಿಗಿಂತ ಕ್ರಿಮಿಕೀಟಾದಿ ಪ್ರಾಣಿಗಳು ಶ್ರೇಷ್ಠ- ಈ ಪ್ರಾಣಿಗಳಲ್ಲಿ ಬುದ್ಧಿಯಿಂದ ಬದುಕುವ ಪಶುಗಳು ಇನ್ನೂ ಶ್ರೇಷ್ಠ.

ಈ ಬುದ್ಧಿಯುಳ್ಳ ಜೀವಿಗಳಲ್ಲಿ ಮನುಷ್ಯರು ಶ್ರೇಷ್ಠ- ಹಾಗೂ ಈ ಮನುಷ್ಯರಲ್ಲಿ ಬ್ರಾಹ್ಮಣರು ಶ್ರೇಷ್ಠರು.'

ಉತ್ಪತ್ತಿರೇವ ವಿಪ್ರಸ್ಯ ಮೂರ್ತಿರ್ಧರ್ಮಸ್ಯ ಶಾಶ್ವತೀ|
ಸಹಿ ಧರ್ಮಾರ್ಥ ಮುತ್ಪನ್ನೋ ಬ್ರಹ್ಮಭೂಯಾಯ ಕಲ್ಪತೇ||

(ಅಧ್ಯಾಯ-1, ಶ್ಲೋಕ-98)

'ಬ್ರಾಹ್ಮಣನ ದೇಹವು ಮಾತ್ರ ಉತ್ಪತಿ ಹಾಗೂ ನಾಶವುಳ್ಳದ್ದು- ಆದರೆ ಅವನ ಧರ್ಮ ತೇಜಸ್ಸು ಶಾಶ್ವತವಾದದ್ದು.

ಅವನು ಧರ್ಮದ ಅನುಷ್ಠಾನಕ್ಕೆಂದೇ ಹುಟ್ಟಿದವನು- ಅವನು ಜ್ಞಾನದಿಂದ ಬ್ರಹ್ಮ ಪದವಿಯನ್ನು ಹೊಂದುತ್ತಾನೆ.'

ಬ್ರಾಹ್ಮಣೋ ಜಾಯಮಾನೋಹಿ ಪೃಥಿವ್ಯಾಮಧಿ ಜಾಯತೇ|
ಈಶ್ವರಃ ಸರ್ವಭೂತಾನಾಂ ಧರ್ಮ ಕೋಶಸ್ಯಗುಪ್ತಯೇ

(ಅಧ್ಯಾಯ-1, ಶ್ಲೋಕ-99)

'ಹುಟ್ಟುವಾಗಲೇ ಬ್ರಾಹ್ಮಣನು ಭೂಮಿಯಲ್ಲಿ ಆಧಿಪತ್ಯವನ್ನು ಪಡೆದುಕೊಂಡೇ ಹುಟ್ಟಿರುತ್ತಾನೆ. ಧರ್ಮ ಸಂಪತ್ತಿನ ರಕ್ಷಣೆಗಾಗಿ ಅವನು ಸರ್ವಜೀವಿಗಳ ಅಧಿಪತಿಯಾಗುತ್ತಾನೆ.'

ಸರ್ವಂ ಸ್ವಂ ಬ್ರಾಹ್ಮಣಸ್ಯೇದಂ ಯತ್ಕಿಂಚಿಜ್ಜಗತೀಗತಂ|
ಶ್ರೇಷ್ಠ್ಯೇನಾಭಿಜನೇನೇದಂ ಸರ್ವಂ ವೈ ಬ್ರಾಹ್ಮಣೋಽರ್ಹತಿ||

(ಅಧ್ಯಾಯ-1, ಶ್ಲೋಕ-100)

'ಈ ಭೂಮಿಯಲ್ಲಿರುವುದೆಲ್ಲವೂ ಬ್ರಾಹ್ಮಣನದ್ದಾಗಿದೆ. ಶ್ರೇಷ್ಠವಾದ ಜನ್ಮವನ್ನು ಪಡೆದದ್ದರಿಂದ ಇದೆಲ್ಲವನ್ನು ಹೊಂದಲು ಅವನು ಅರ್ಹನಾಗುತ್ತಾನೆ.'

ಏಕಮೇವತು ಶೂದ್ರಸ್ಯ ಪ್ರಭುಃ ಕರ್ಮ ಸಮಾದಿಶತ್|
ಏತೇಷಾಮೇವ ವರ್ಣಾನಾಂ ಶುಶ್ರೂಷಾ ಮನಸೂಯಯಾ||

(ಅಧ್ಯಾಯ-1, ಶ್ಲೋಕ-91)

'ಆ ಮಹಾ ಪ್ರಭುವಾದ ಬ್ರಹ್ಮನು, ಈ ಮೇಲಿನ ಮೂರೂ ವರ್ಣಗಳ ಜನರ

ನಿಸ್ವಾರ್ಥ ಸೇವೆ ಮಾಡಿಕೊಂಡಿರುವುದನ್ನೇ ಶೂದ್ರನಿಗೆ ಕರ್ತವ್ಯವೆಂದು ಆದೇಶಿಸಿದ್ದಾನೆ.'

ಹೀನಜಾತಿಸ್ತ್ರೀಯಂ ಮೋಹಾದುದ್ವಹಂತೋ ದ್ವಿಜಾತಯಃ|
ಕುಲಾನ್ಯೇವ ನಯಂತ್ಯಾಶು ಸಸಂತಾನಾನಿ ಶೂದ್ರತಾಂ||

(ಅಧ್ಯಾಯ-3, ಶ್ಲೋಕ-15)

'ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಜಾತಿಗಳವರು ಮೋಹದ ಆವೇಶದಲ್ಲಿ ಹೀನಜಾತಿಯ (ಶೂದ್ರ) ಸ್ತ್ರೀಯನ್ನು ಪ್ರಥಮ ಹೆಂಡತಿ ಎಂದು ಮದುವೆ ಮಾಡಿಕೊಂಡರೆ ತಮ್ಮ ಕುಲ, ಸಂತಾನಗಳೊಡನೆ ತಿರೋಹಿತರಾಗಿ ಶೂದ್ರತ್ವವನ್ನು ಹೊಂದುತ್ತಾರೆ.'

ಶೂದ್ರಾಂ ಶಯನಮಾರೋಪ್ಯ ಬ್ರಾಹ್ಮಣೋ ಯಾತ್ಯಧೋಗತಿಂ|
ಜನಯಿತ್ವಾ ಸುತಂ ತಸ್ಯಾಂ ಬ್ರಾಹ್ಮಣ್ಯಾದೇವ ಹೀಯತೇ

(ಅಧ್ಯಾಯ-3, ಶ್ಲೋಕ-17)

'ಶೂದ್ರಳಿಗೆ ಶಯನ ಸುಖವನ್ನಿತ್ತರೆ ಬ್ರಾಹ್ಮಣನು ಅಧೋಗತಿಯನ್ನು ಹೊಂದುತ್ತಾನೆ. ಅವಳಿಗೆ ಸಂತಾನವನ್ನು ನೀಡಿದರೆ ಬ್ರಾಹ್ಮಣ್ಯದಿಂದ ದೂರವಾಗುತ್ತಾನೆ(ಪತಿತನಾಗುತ್ತಾನೆ).'

ಇವು ಕೇವಲ ಕೆಲವು ಉದಾಹರಣೆಗಳು, ಇಂತಹ ಅನೇಕ ಶ್ಲೋಕಗಳು ಮನುಸ್ಮೃತಿಯಲ್ಲಿವೆ. ಆದ್ದರಿಂದಲೇ ಭಾರತದಲ್ಲಿ ಬ್ರಾಹ್ಮಣರ ಸ್ಥಾನ ಅತ್ಯುನ್ನತವಾಗಿದ್ದು ನಿರಂತರ ಸುಧಾರಣಾ ಪ್ರಯತ್ನ ಮತ್ತು ಅಸ್ಪೃಶ್ಯತೆಯ ವಿರುದ್ಧ ಕಠಿಣ ಕಾನೂನುಗಳ ಹೊರತಾಗಿಯೂ ಶೂದ್ರರ ಸ್ಥಿತಿಯು ಅತ್ಯಂತ ನಿಕೃಷ್ಟವಾಗಿದೆ.

ಏಕದೇವ ವಿಶ್ವಾಸವು ಏಕಮಾನವಕುಲದ ವಿಶ್ವಾಸವನ್ನೂ ಅನಿವಾರ್ಯವಾಗಿ ಹೊಂದಿದೆ. ಅದರ ಪ್ರಕಾರ ಎಲ್ಲಾ ಮನುಷ್ಯರು ಒಬ್ಬ ದೇವನ ಸೃಷ್ಟಿಯಾಗಿದ್ದಾರೆ. ಎಲ್ಲಾ ಮನುಷ್ಯರು ದೇವರ ಹುಟ್ಟು, ಪ್ರಜೆಗಳೂ ದಾಸರೂ ಆಗಿರುವರು. ಅವರೆಲ್ಲರೂ ಒಂದೇ ದಂಪತಿಗಳ ಸಂತಾನವಾಗಿದ್ದಾರೆ. ದೇವರಿಗೆ ಯಾವುದೇ ಜನಾಂಗ, ವಂಶ, ವರ್ಗಗಳೊಂದಿಗೆ ಯಾವುದೇ ವಿಶಿಷ್ಟ ಸಂಬಂಧವಿಲ್ಲ. ಅವನ ದೃಷ್ಟಿಯಲ್ಲಿ ಎಲ್ಲಾ ಮನುಷ್ಯರೂ ಸಮಾನರಾಗಿದ್ದಾರೆ. ಅವನ ಬಳಿ ಮಾನವರ ಮಧ್ಯೆ ಇರುವ ವ್ಯತ್ಯಾಸ ಒಳ್ಳೆಯವರು, ಕೆಟ್ಟವರು, ದೇವನಿಷ್ಠೆಯುಳ್ಳವರು-ದೇವನಿಷ್ಠೆಯಿಲ್ಲದವರು ಎಂಬುದು ಮಾತ್ರ. ಮನುಷ್ಯರ ಮಧ್ಯೆ ಇರುವ ಏಕೈಕ ವೈಚಾರಿಕ ಭಿನ್ನತೆ ಇದುವೇ ಆಗಿದೆ. ಆದರೆ ಈ ಭಿನ್ನತೆಯ ಹೊರತಾಗಿಯೂ ಎಲ್ಲಾ ಮನುಷ್ಯರ ಹಕ್ಕುಗಳು ಸಮಾನವಾಗಿವೆ. ಪವಿತ್ರ ಕುರ್‌ಆನ್ ಈ ರೀತಿ ಹೇಳುತ್ತದೆ:

"ಜನರೇ, ನಾವು ನಿಮ್ಮನ್ನು ಒಬ್ಬ ಪುರುಷ ಮತ್ತು ಒಬ್ಬ ಸ್ತ್ರೀಯಿಂದ ಉಂಟು ಮಾಡಿದೆವು. ತರುವಾಯ ನೀವು ಪರಸ್ಪರ ಪರಿಚಯಪಟ್ಟುಕೊಳ್ಳಲಿಕ್ಕಾಗಿ ನಿಮ್ಮ ಜನಾಂಗಗಳನ್ನೂ ಗೋತ್ರಗಳನ್ನೂ ಮಾಡಿದೆವು. ನಿಮ್ಮ ಪೈಕಿ ಅತ್ಯಧಿಕ ಧರ್ಮನಿಷ್ಠನೇ ವಾಸ್ತವದಲ್ಲಿ ಅಲ್ಲಾಹನ ಬಳಿ ಅತಿ ಹೆಚ್ಚು ಗೌರವಕ್ಕೆ ಪಾತ್ರನು."

(ಪವಿತ್ರ ಕುರ್‌ಆನ್, 49:13)

ಪ್ರವಾದಿ ಮುಹಮ್ಮದ್(ಸ) ಈ ರೀತಿ ಹೇಳಿರುವರು,

'ನಿಮ್ಮ ಪೈಕಿ ಯಾವ ಅರಬನಿಗೂ ಅರಬೇತರನ ಮೇಲೆ ಯಾವುದೇ ಶ್ರೇಷ್ಠತೆಯಿಲ್ಲ. ಅಂತೆಯೇ ಅರಬೇತರನಿಗೂ ಅರಬನ ಮೇಲೆ ಯಾವುದೇ ಶ್ರೇಷ್ಠತೆಯಿಲ್ಲ. ನೀವೆಲ್ಲರೂ ಆದಮನ ಸಂತಾನಗಳಾಗಿರುವಿರಿ.' (ಬುಖಾರಿ, ಮುಸ್ಲಿಮ್)

ನಿಮ್ಮ ನಾಯಕನ ಮಾತನ್ನು ಆಲಿಸಿರಿ, ಅನುಸರಿಸಿರಿ. ನಿಮ್ಮ ಮೇಲೆ ಸಣ್ಣ ತಲೆಯ ಓರ್ವ ಕರಿಯ ಗುಲಾಮನನ್ನು ನಿಮ್ಮ ನಾಯಕನಾಗಿ ನೇಮಿಸಲಾದರೂ ಸರಿಯೆ. (ಬುಖಾರಿ)

ಅಂಜಿಕೆ, ಕೀಳರಿಮೆ ಮತ್ತು ವೈಚಾರಿಕ ಗೊಂದಲ

ಈ ವಿಶ್ವಕ್ಕೆ ಯಾವನೇ ಸೃಷ್ಟಿಕರ್ತ ಮತ್ತು ವ್ಯವಸ್ಥಾಪಕನಿಲ್ಲ. ಇಲ್ಲಿನ ಘಟನೆಗಳ ಹಿಂದೆ ಯಾವುದೇ ಪ್ರಜ್ಞಾವಂತ ಅಸ್ತಿತ್ವವು ಕಾರ್ಯವೆಸಗುವುದಿಲ್ಲ. ಇಲ್ಲಿರುವುದು ಕೇವಲ ನಿಸರ್ಗ ನಿಯಮಗಳು. ಅಂಧ-ಕಿವುಡ ಭೌತಿಕ ಶಕ್ತಿಗಳು. ಅವೇ ಜಗತ್ತಿನ ಎಲ್ಲ ಸ್ಥಿತಿಗತಿಗಳನ್ನೂ ಚಲಾಯಿಸುತ್ತವೆ ಎಂಬುದು ನಾಸ್ತಿಕರ ದೃಷ್ಟಿಕೋನದ ತಿರುಳು.

ಅನೇಕ ಭೌತಿಕ, ಅಭೌತಿಕ, ಭಾವನಾತ್ಮಕ ಮತ್ತು ಕಾಲ್ಪನಿಕ ಶಕ್ತಿಗಳು ಸೇರಿ ಈ ವಿಶ್ವದ ಮೇಲೆ ಆಡಳಿತ ನಡೆಸುತ್ತಿವೆ. ಅವು ಮನುಷ್ಯ ಜೀವನದ ಮೇಲೆ ಪ್ರಭಾವ ಹೊಂದಿವೆ. ಅವನ ಅದೃಷ್ಟ ಮತ್ತು ಜೀವನ ನಿರ್ಮಾಣದಲ್ಲಿ ಮತ್ತು ಅದರ ಸಂಹಾರದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ. ಇದು ಬಹುದೇವ ವಿಶ್ವಾಸಿಗಳ ದೃಷ್ಟಿಕೋನ.

ಒಬ್ಬ ದೇವನು ಸಮಸ್ತ ವಿಶ್ವದ ಸೃಷ್ಟಿಕರ್ತ ಮತ್ತು ವ್ಯವಸ್ಥಾಪಕನಾಗಿರುವನು. ಅವನ ಇಚ್ಛೆಯೇ ವಿಶ್ವದ ಮೇಲೆ ಪ್ರಭುತ್ವ ನಡೆಸುತ್ತಿದೆ. ಜೀವನ-ಮರಣ, ಲಾಭ-ನಷ್ಟ, ಮಾನ-ಅವಮಾನ, ಅದೃಷ್ಟ-ದುರದೃಷ್ಟಗಳೆಲ್ಲವೂ ಅವನ ನಿಯಂತ್ರಣದಲ್ಲಿವೆ. ಅವನ ಹೊರತು ಯಾರಲ್ಲೂ ಯಾವುದೇ ಶಕ್ತಿ-ಸಾಮರ್ಥ್ಯವಿಲ್ಲ. ಯಾರಲ್ಲೂ ಮನುಷ್ಯನಿಗೆ ಲಾಭ-ನಷ್ಟ ಉಂಟು ಮಾಡುವ ಯಾವ ಅಧಿಕಾರವೂ ಇಲ್ಲ. ಎಲ್ಲವೂ ಆ ಏಕದೇವನ ಕೈಯಲ್ಲಿದೆ. ಇತರರ ಕೈಯಲ್ಲಿ ಏನೇನೂ ಇಲ್ಲ. ಇದು ಏಕದೇವ ವಿಶ್ವಾಸದ ದೃಷ್ಟಿಕೋನವಾಗಿದೆ.

ಈ ಮೂರು ವಿಭಿನ್ನ ಮತ್ತು ಪರಸ್ಪರ ವಿರೋಧಿ ದೃಷ್ಟಿಕೋನಗಳು ಮನುಷ್ಯನ ಮನ-ಮಸ್ತಿಷ್ಕಗಳ ಮೇಲೆ ಭಿನ್ನಭಿನ್ನ ಪ್ರಭಾವಗಳನ್ನು ಉಂಟುಮಾಡುತ್ತವೆ.

ನಾಸ್ತಿಕನು ಕಾಲ್ಪನಿಕ ಮತ್ತು ಊಹನಾತ್ಮಕ ವಸ್ತುಗಳಿಂದ ಅಂಜುವುದಿಲ್ಲ. ಅವನು ಕೇವಲ ಭೌತಿಕ ವಸ್ತುಗಳಿಗೆ ಮಹತ್ವ ನೀಡುತ್ತಾನೆ. ಅವನು ಭೌತಿಕ ಶಕ್ತಿಯ ಮುಂದೆ ಬಾಗುತ್ತಾನೆ. ಅದನ್ನು ಭಯಪಡುತ್ತಾನೆ. ಅವನು ಭೌತಿಕ ಸಂಪನ್ಮೂಲಗಳ ಮೇಲೆ ಭರವಸೆ ಇರಿಸುತ್ತಾನೆ. ಭೌತಿಕ ಉಪಾಯಗಳು ಮತ್ತು ಸಂಪನ್ಮೂಲಗಳು ಅವನಿಗೆ ಕೈಕೊಟ್ಟಾಗ ಅವನು ಕಂಗಾಲಾಗಿ ದಿಗ್ಭ್ರಾಂತನಾಗುತ್ತಾನೆ.

ಬಹುದೇವ ವಿಶ್ವಾಸಿಯು ಭೌತಿಕ ಶಕ್ತಿಗಳ ಜತೆ ಮತ್ತು ಅದಕ್ಕಿಂತಲೂ ಮಿಗಿಲಾಗಿ ಊಹನಾತ್ಮಕ ಮತ್ತು ಕಾಲ್ಪನಿಕ ಶಕ್ತಿಗಳ ಬಗ್ಗೆ ಭಯಭೀತನಾಗಿರುತ್ತಾನೆ. ಅವನ ಪಾಲಿಗೆ ಎಲ್ಲ ಪ್ರಾಣಿಗಳು, ಪಕ್ಷಿಗಳು, ವೃಕ್ಷಗಳು, ಕ್ರಿಮಿ-ಕೀಟಗಳು, ಕಲ್ಲು-ಮಣ್ಣು ದೇವರಾಗಿರುತ್ತವೆ.

ಎಲ್ಲ ದೇವರ ಕೈಯಲ್ಲೂ ಅವನ ಅದೃಷ್ಟವಿರುತ್ತದೆ. ಅವನ ಜೀವನ-ಮರಣಗಳೂ ಲಾಭ-ನಷ್ಟಗಳೂ ಅವುಗಳ ಕೈಯಲ್ಲಿರುತ್ತವೆ. ಇಂತಹ ಮನುಷ್ಯ ಹೇಡಿ, ಅಂಜು ಬುರುಕ, ಭ್ರಾಮಕನಾಗಿರುತ್ತಾನೆ.

ಏಕದೇವವಿಶ್ವಾಸಿಯು ಕೇವಲ ಅಲ್ಲಾಹನನ್ನು ಭಯಪಡುತ್ತಾನೆ. ಅವನು ಭ್ರಮೆ, ಭಯ, ಹೇಡಿತನಗಳಿಗೆ ಬಲಿಯಾಗುವುದಿಲ್ಲ. ಕಾಲ್ಪನಿಕ ವಸ್ತುಗಳಿಂದ ಅವನಿಗೆ ಯಾವ ಲಾಭವೂ ಇರುವುದಿಲ್ಲ. ಎಷ್ಟೇ ದೊಡ್ಡ ಭೌತಿಕ ಶಕ್ತಿಯನ್ನೂ ಅವನು ಲೆಕ್ಕಿಸುವುದಿಲ್ಲ. ಎಲ್ಲವೂ ಅಲ್ಲಾಹನ ಕೈಯಲ್ಲಿದೆಯೆಂದು ಅವನು ದೃಢವಾಗಿ ನಂಬಿರುತ್ತಾನೆ. ಅಲ್ಲಾಹನು ಬಯಸದೆ ಯಾರೂ ಅವನಿಗೆ ಯಾವ ಹಾನಿಯನ್ನೂ ಉಂಟು ಮಾಡಲಾರರು ಎಂದು ಅವನು ವಿಶ್ವಾಸವಿಟ್ಟಿರುತ್ತಾನೆ. ಅವನು ಮರಣವನ್ನು ಅಂಜುವುದಿಲ್ಲ. ಮರಣವು ಅವನ ಪಾಲಿಗೆ ತನ್ನ ನೈಜ ಒಡೆಯನ ಸನ್ನಿಧಾನಕ್ಕೆ ಹೋಗುವ ದ್ವಾರವಾಗಿದೆ. ಅವನ ದಾಸ್ಯ ಮತ್ತು ಸಂಪ್ರೀತಿಗಳಿಕೆಯ ಕಾರ್ಯಗಳಲ್ಲೇ ಅವನು ತನ್ನನ್ನು ತೊಡಗಿಸಿಕೊಂಡಿರುತ್ತಾನೆ. ಅವನ ನಿಷ್ಠೆ ಮತ್ತು ಸತ್ಕರ್ಮದ ಫಲವಾಗಿ ಒಂದು ಶಾಶ್ವತ ಜೀವನ ಅವನಿಗೆ ಸಿಗಲಿದೆ. ಅಳಿವಿಲ್ಲದ ಸ್ವರ್ಗದ ಅಗಣಿತ ಅನುಗ್ರಹಗಳು ಅವನಿಗೆ ಪ್ರಾಪ್ತವಾಗಲಿದೆ. ಈ ಭರವಸೆಯೊಂದಿಗೆ ಅವನು ಮರಣದೊಂದಿಗೆ ಮುಖಾಮುಖಿಯಾಗುತ್ತಾನೆ.

ಏಕದೇವವಿಶ್ವಾಸಿ ಭೌತಿಕ ಉಪಾಯಗಳನ್ನು ಹೂಡುವುದರಿಂದ ಮತ್ತು ಭೌತಿಕ ಸಂಪನ್ಮೂಲಗಳನ್ನು ಬಳಸುವುದರಿಂದ ಎಂದೂ ದೂರವಿರುವುದಿಲ್ಲ. ಆದರೆ ಅವನ ಭರವಸೆಯು ಅಲ್ಲಾಹನ ಮೇಲಿರುತ್ತದೆ. ಅವನು ಭೌತಿಕ ಸಂಪನ್ಮೂಲಗಳು ಇಲ್ಲದಾಗಲೂ ನಿರಾಶನಾಗುವುದಿಲ್ಲ. ಅತಿದೊಡ್ಡ ಭೌತಿಕ ಶಕ್ತಿಯನ್ನು ಅವನು ಭಯಪಡುವುದಿಲ್ಲ.

ಬಹುದೇವವಿಶ್ವಾಸವು ಮನುಷ್ಯನನ್ನು ಕೀಳರಿಮೆಗೆ ಗುರಿಪಡಿಸುತ್ತದೆ. ಈ ಕೀಳರಿಮೆಯು ಕೆಲವೊಮ್ಮೆ ಮಿಥ್ಯ ದೊಡ್ಡಸ್ತಿಕೆಗೆ ಜನ್ಮ ನೀಡುತ್ತದೆ. ಇದರಿಂದಾಗಿ ಅವನು ಆತ್ಮ ಪ್ರಶಂಸೆಯಲ್ಲಿ ನಿರತನಾಗಿ ಇತರರನ್ನು ಕೀಳಾಗಿ ಕಾಣಲಾರಂಭಿಸುತ್ತಾನೆ. ಜಗತ್ತಿನಲ್ಲಿರುವ ಎಲ್ಲ ಒಳಿತು, ಅಭಿವೃದ್ಧಿಯೂ ತನ್ನ ಸಂಸ್ಕೃತಿಯ ಕಾರಣದಿಂದಾಗಿದೆಯೆಂದೂ ತನ್ನ ಹಿರಿಯರ ಪಾಂಡಿತ್ಯದ ಕೊಡುಗೆಯೆಂದೂ ವಾದಿಸತೊಡಗುತ್ತಾನೆ. ತನ್ನ ಈ ಮೊಂಡು ವಾದದ ಸಮರ್ಥನೆಗೆ ಹಾಸ್ಯಾಸ್ಪದ ಕೃತ್ಯಗಳನ್ನೆಸಗುತ್ತಾನೆ. ಇತಿಹಾಸದ ನವೀಕರಣಕ್ಕೆ ಇಳಿಯುತ್ತಾನೆ. ಇತರೆಲ್ಲ ಜನಾಂಗಗಳಲ್ಲಿರುವ ಎಲ್ಲ ಒಳಿತುಗಳು ತನ್ನಲ್ಲಿವೆಯೆಂದೂ ತನ್ನೆಲ್ಲ ಕೆಡುಕುಗಳು ಇತರ ಜನಾಂಗಗಳಲ್ಲಿವೆಯೆಂದೂ ಸಾಬೀತುಪಡಿಸಲು ಹವಣಿಸುತ್ತಾನೆ. ಇತರ ಜನಾಂಗಗಳ ಇತಿಹಾಸವನ್ನು ಅತ್ಯಂತ ಭಯಾನಕ ಮತ್ತು ನಾಚಿಕೆಗೆಟ್ಟ ರೂಪದಲ್ಲಿ ಮುಂದಿಡುತ್ತಾನೆ. ತನ್ನ ಇತಿಹಾಸವನ್ನು ಅತಿರಂಜಿತ ವರ್ಣನೆಗಳಿಂದ ಅಲಂಕರಿಸುತ್ತಾನೆ. ಈ ಉದ್ದೇಶ ಸಾಧನೆಗೆ ಸುಳ್ಳಿನ ಕಂತೆಗಳನ್ನೇ ಬಿಚ್ಚುತ್ತಾನೆ. ಆದರೂ ಅವನ ಕೀಳರಿಮೆ ಹೋಗುವುದಿಲ್ಲ. ತನ್ನ ವಾದದ ಪೊಳ್ಳುತನವನ್ನು ಮುಚ್ಚಲು ಅಧಿಕಾರವನ್ನು ಬಳಸುತ್ತಾನೆ. ಅಧಿಕಾರ ಪೀಠಕ್ಕೆ ತಲುಪಿದ ಕೂಡಲೇ ತನ್ನ ಈ ದೌರ್ಬಲ್ಯವನ್ನು ಶಕ್ತಿಯ ಮೂಲಕ

ನಿವಾರಿಸಲು ಪ್ರಯತ್ನಿಸುತ್ತಾನೆ. ಎಲ್ಲ ರೀತಿಯ ಅಕ್ರಮ ದೌರ್ಜನ್ಯಗಳನ್ನೆಸಗುತ್ತಾನೆ. ಅವನ ಅಂಜುಬುರುಕತನವು ಅವನ ಮುಂದೆ ಹೊಸ ಹೊಸ ಶತ್ರುಗಳನ್ನು ತರುತ್ತದೆ.

ಏಕದೇವತ್ವವು ಕೇವಲ ಒಂದು ಧಾರ್ಮಿಕ ವಿಶ್ವಾಸವಲ್ಲ. ಅದು ಅಖಿಲ ಮಾನವ ಸಮಾಜವನ್ನು ವೈಚಾರಿಕ ಮತ್ತು ಕ್ರಿಯಾತ್ಮಕ ಏಕತೆಯಲ್ಲಿ ಪೋಣಿಸುವ ಐಕ್ಯಕ ಮಾಧ್ಯಮವಾಗಿದೆ. ಏಕದೇವವಿಶ್ವಾಸವನ್ನು ಅಳವಡಿಸಿಕೊಂಡ ಎಲ್ಲ ಮನುಷ್ಯರ ಶ್ರದ್ಧಾ-ಭಕ್ತಿ ಮತ್ತು ಪ್ರೀತಿಯ ಕೇಂದ್ರವು ಆ ಏಕದೇವನಾಗುತ್ತಾನೆ. ಈ ಪ್ರೀತಿಯು ಎಲ್ಲ ಮನುಷ್ಯರನ್ನು ಒಂದು ಬಲಿಷ್ಠ ಸಂಬಂಧದಲ್ಲಿ ಬಂಧಿಸುತ್ತದೆ. ಅವರು ಒಬ್ಬ ದೇವನ ದಾಸರು, ಅದೇ ದೇವನ ಧರ್ಮದ ಅನುಯಾಯಿಗಳು, ಒಂದೇ ಕಾನೂನಿನ ಪಾಲಕರು ಮತ್ತು ದೇವಸಂಪ್ರೀತಿಯೆಂಬ ಒಂದೇ ಧ್ಯೇಯದತ್ತ ಸಾಗುವವರಾಗುತ್ತಾರೆ. ನೈಸರ್ಗಿಕ ಭಿನ್ನತೆಗಳ ಹೊರತಾಗಿಯೂ ಅವರ ವೈಚಾರಿಕ ಬುನಾದಿಗಳು ಸಮಾನವಾಗಿರುತ್ತವೆ. ಸಮಾನ ನೈತಿಕತೆಯನ್ನು ಅವರು ಪಾಲಿಸುತ್ತಾರೆ. ಈ ದೇವ ಧರ್ಮವು ವಿಭಿನ್ನ ವ್ಯಕ್ತಿ, ವರ್ಣ, ವರ್ಗ ಮತ್ತು ಜನಾಂಗಗಳ ಒಂದು ವಿಶ್ವ ಭ್ರಾತೃತ್ವವಾಗಿ ಮಾರ್ಪಡುತ್ತದೆ.

ನಾಸ್ತಿಕತೆಯನ್ನು ಅಳವಡಿಸಿಕೊಂಡ ಬಳಿಕ ಮಾನವ ಸಮಾಜವು ಎಲ್ಲ ಧಾರ್ಮಿಕ-ನೈತಿಕ ಮೌಲ್ಯಗಳಿಂದ ಮುಕ್ತವಾಗುತ್ತದೆ. ದೇವರನ್ನು ನಿರಾಕರಿಸಿದ ಬಳಿಕ ಪ್ರತಿಯೊಬ್ಬ ಮನುಷ್ಯನ ಬುದ್ಧಿ ಸರಿ-ತಪ್ಪುಗಳ ಏಕೈಕ ಮಾನದಂಡವಾಗಿ ಮಾರ್ಪಡುತ್ತದೆ. ಪರಿಣಾಮವಾಗಿ ಯಾವುದೇ ಮೌಲ್ಯ, ತತ್ವ ಶಾಶ್ವತವೆನಿಸುವುದಿಲ್ಲ. ವೈಚಾರಿಕ ಗೊಂದಲ ತಾಂಡವವಾಡುತ್ತದೆ. ಮಾನವಕುಲ ಅನೇಕ ಭಿನ್ನ ಭಿನ್ನ ವಿಚಾರಗಳ ಗುಂಪುಗಳಾಗಿ ವಿಂಗಡಿಸಲ್ಪಡುತ್ತದೆ. ನೈತಿಕ ಮೌಲ್ಯಗಳ ಪತನದ ಬಳಿಕ ಸ್ವಾರ್ಥ, ಲಾಭ ಬಡುಕತನ ಹಾಗೂ ಅನ್ಯಾಯ ವ್ಯಾಪಕ ವಾಗುತ್ತದೆ. ಇದು ಒಡಕು, ಬಿಕ್ಕಟ್ಟು ಮತ್ತು ಸಂಘರ್ಷಕ್ಕೆ ನಾಂದಿಯಾಗುತ್ತದೆ. ಜನಾಂಗಗಳು, ವರ್ಗಗಳು, ವರ್ಣಗಳು ಪರಸ್ಪರ ಕಚ್ಚಾಟದಲ್ಲಿ ನಿರತವಾಗುತ್ತವೆ.

ಬಹುದೇವವಿಶ್ವಾಸವು ವೈಚಾರಿಕ ಗೊಂದಲ ಸೃಷ್ಟಿಸುವಲ್ಲಿ ನಾಸ್ತಿಕತೆಗಿಂತಲೂ ಮುಂದಿರುತ್ತದೆ. ವಿಭಿನ್ನ ಜನರು ಬೇರೆ ಬೇರೆ ದೇವರು ದಿಂಡರುಗಳ ಭಕ್ತರಾಗಿ ಛಿನ್ನಭಿನ್ನರಾಗುತ್ತಾರೆ. ದೇವರುಗಳ ಸಂಖ್ಯೆ ಹೆಚ್ಚಿದಷ್ಟೂ ಈ ಭಿನ್ನತೆ, ಸಂಘರ್ಷ ಮತ್ತು ಗೊಂದಲ ಹೆಚ್ಚುತ್ತವೆ. ನಾಸ್ತಿಕತೆಯಲ್ಲಿ ಸರಿ-ತಪ್ಪುಗಳ ಮಾನದಂಡ ಬುದ್ಧಿಯಾದರೆ ಬಹುದೇವವಿಶ್ವಾಸದಲ್ಲಿ ಆ ಸ್ಥಾನವು ಕಲ್ಪನೆ ಮತ್ತು ಭ್ರಮೆಗೆ ಸಿಗುತ್ತದೆ. ಇದು ಮನುಷ್ಯರನ್ನು ಒಡೆಯುತ್ತಲೇ ಸಾಗುತ್ತದೆ. ಅವರ ಮುಂದೆ ಸಮಾನ ಮೌಲ್ಯಗಳು ಉಳಿಯುವುದೇ ಇಲ್ಲ.

ಏಕದೇವತ್ವವೆಂದರೇನು?

ಮನುಷ್ಯನ ಅಸ್ತಿತ್ವವನ್ನು ವಿಶ್ಲೇಷಿಸಿದರೆ ಅದನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ಒಂದು ಆಧ್ಯಾತ್ಮಿಕ ಮತ್ತೊಂದು ಭೌತಿಕ. ಅದರ ಆಧ್ಯಾತ್ಮಿಕ ಅಸ್ತಿತ್ವದಲ್ಲಿ ಭಕ್ತಿ ಮತ್ತು ಆರಾಧನೆಯ ಭಾವವು ತುಂಬಿ ತುಳುಕುತ್ತದೆ. ಇದೊಂದು ನೈಸರ್ಗಿಕ

ಭಾವನೆ. ಅತ್ಯಂತ ಪ್ರಬಲವಾದ ಬಯಕೆ. ಮನುಷ್ಯನ ಶಿರವು ಯಾರ ಮುಂದೆಯಾದರೂ ಬಾಗಲೇ ಬೇಕು. ಅದು ಬಾಗುತ್ತದೆ. ಮನುಷ್ಯನ ಹಸಿವಿನಂತೆ ಇದು ಕೂಡಾ ಸ್ವಾಭಾವಿಕ. ಹಸಿವು ನೀಗಿಸಲು ಸರಿಯಾದ ಆಹಾರ ಸಿಗದಿರುವಾಗ ಮನುಷ್ಯ ಎಲೆಗಳನ್ನೂ ತೊಗಟೆಗಳನ್ನೂ ತಿಂದು ಹಸಿವು ಇಂಗಿಸಿಕೊಳ್ಳುತ್ತಾನೆ. ಅಂತೆಯೇ ಮನುಷ್ಯನ ಭಕ್ತಿಭಾವದ ಪ್ರಕಟನೆಗೆ ಸರಿಯಾದ ಸ್ಥಳ ಸಿಗದೇ ಹೋದಾಗ ಅವನು ತಪ್ಪು ಅಸ್ಥಾನಗಳಲ್ಲಿ ಅದನ್ನು ಪ್ರದರ್ಶಿಸುವನು. ಮನುಷ್ಯನು ತನ್ನ ಮನವೆಂಬ ಗುಡಿಯಲ್ಲಿ ಒಬ್ಬ ಆರಾಧ್ಯನನ್ನು ಇರಿಸಬಯಸುತ್ತಾನೆ. ಅದನ್ನು ಅವನು ಪ್ರೀತಿಸುತ್ತಾನೆ. ಅದರ ಮುಂದೆ ಅವನು ಬಾಗುತ್ತಾನೆ. ಅದಕ್ಕೆ ಅವನು ತನ್ನನ್ನು ಅರ್ಪಿಸಿಕೊಳ್ಳುತ್ತಾನೆ. ಈ ನೈಸರ್ಗಿಕ ಬಯಕೆಯ ಪರಿಣಾಮವಾಗಿಯೇ ಧರ್ಮವು ಅಸ್ತಿತ್ವಕ್ಕೆ ಬಂದಿದೆ. ಈ ಬಯಕೆ ಎಷ್ಟು ಬಲಿಷ್ಠವಾಗಿದೆ ಯೆಂದರೆ ಅದನ್ನೆಂದೂ ಮನುಷ್ಯನು ತನ್ನ ಮನದಿಂದ ಕಿತ್ತೆಸೆಯಲಾರನು. ಕಮ್ಯೂನಿಸ್ಟ್ ರಶ್ಯಾ ಈ ಮಾನವ ಸಹಜ ಬಯಕೆಯನ್ನು ತುಳಿಯಬಯಸಿತ್ತು. ತನ್ನ ಉಕ್ಕಿನ ಪಂಜ ದಿಂದ ಮತ್ತು ಮಸ್ತಿಷ್ಕ ಪ್ರಕ್ಷಾಲನದ ಎಲ್ಲ ಪ್ರಯತ್ನಗಳ ಹೊರತಾಗಿಯೂ ಆ ಬಯಕೆಯನ್ನು ಅಳಿಸಲು ಅದಕ್ಕೆ ಸಾಧ್ಯವಾಗಲಿಲ್ಲ. ನಾವು ದೇವರನ್ನು ನಮ್ಮ ಗಡಿಗಳಿಂದ ಹೊರ ಹಾಕಿರುವೆವು ಎಂದು ಹೇಳಿದ ಸೋವಿಯತ್ ಯೂನಿಯನ್ ಹಿಟ್ಲರ್‌ನ ದಾಳಿಯನ್ನು ನೋಡಿ ಎಲ್ಲ ಚರ್ಚ್‌ಗಳ ದ್ವಾರಗಳನ್ನೂ ತೆರೆಯಿತು. ಇಂದು ವಿಘಟಿತ ಸೋವಿಯತ್ ಯೂನಿಯನ್‌ನಲ್ಲಿ ಧರ್ಮ ಮತ್ತು ಏಕದೇವಸಿದ್ಧಾಂತವು ಜನಜೀವನದಲ್ಲಿ ಅತ್ಯಧಿಕ ಪ್ರಭಾವ ಶಾಲಿಯಾಗಿ ಹೊರ ಹೊಮ್ಮಿದೆ.

ಎಲ್ಲ ಧರ್ಮಗಳಲ್ಲಿ ಆರಾಧನೆ ಮತ್ತು ಭಕ್ತಿಯ ಕೆಲವು ರೂಪಗಳಿವೆ. ಇಸ್ಲಾಮ್ ಈ ಎಲ್ಲ ರೂಪಗಳನ್ನು ಕೆಲವು ಸೀಮೆಗಳಿಗೆ ಒಳಪಡಿಸಿತು. ಅದು ಮನುಷ್ಯನ ಭಕ್ತಿ ಭಾವಕ್ಕೆ ಒಂದೇ ದಿಕ್ಕನ್ನು ನಿಶ್ಚಯಿಸಿದೆ. ಮನುಷ್ಯ ಯಾರ ಮುಂದಾದರೂ ಬಾಗಬೇಕು, ಸಾಷ್ಟಾಂಗವೆರಗಬೇಕೆಂದು ಬಯಸುತ್ತಾನೆ. ಇಸ್ಲಾಮ್ ಹೇಳುತ್ತದೆ- 'ನಿನ್ನ ಈ ಬಯಕೆ ಸಹಜವಾದದ್ದು. ಆದರೆ ನಿನ್ನ ಶಿರವು ನಿನಗಿಂತ ಉನ್ನತನಾದವನ ಮುಂದೆ ಮಾತ್ರ ಬಾಗಬೇಕು. ನೀನು ಸೃಷ್ಟಿಗಳಲ್ಲಿಯೇ ಶ್ರೇಷ್ಠನಾದವನು. ಭೂಮಿಯಿಂದ ಆಕಾಶಗಳ ತನಕ ಪ್ರತಿಯೊಂದು ವಸ್ತುವೂ ನಿನಗಿಂತ ನಿಕೃಷ್ಟವಾದುದಾಗಿದೆ. ಅವೆಲ್ಲವೂ ನಿನ್ನ ಸೇವೆಗಾಗಿಯೇ ಸೃಷ್ಟಿಸಲ್ಪಟ್ಟಿವೆ. ನಿನ್ನ ಅಧೀನಕ್ಕೆ ನೀಡಲ್ಪಟ್ಟಿವೆ. ಆದ್ದರಿಂದ ನಿನ್ನ ಗೌರವಾನ್ವಿತ ಶಿರವು ಕೇವಲ ಅಲ್ಲಾಹನ ಮುಂದೆ ಬಾಗಬೇಕು. ಅವನೇ ನಿನ್ನ ಸೃಷ್ಟಿಕರ್ತ, ಅವನೇ ನಿನ್ನ ಪರಿಪಾಲಕ.'

ಕೆಲವು ಸಂದರ್ಭಗಳಲ್ಲಿ ಕಾರ್ಯ-ಕಾರಣಗಳ ಎಲ್ಲ ಸಂಬಂಧವೂ ಕಡಿದುಹೋದಾಗ ನೀವು ಯಾರ ಮುಂದಾದರೂ ಕೈಚಾಚುತ್ತೀರಿ. ನೀವು ಚಾಚುವುದಲ್ಲ- ಅದು ತಾನಾಗಿಯೇ ಚಾಚಿಕೊಳ್ಳುತ್ತದೆ. ಇದು ನಿಮ್ಮ ಪ್ರಕೃತಿಯ ಸಹಜ ಬೇಡಿಕೆಯಾಗಿದೆ ಎಂದು ಇಸ್ಲಾಮ್ ನಿಮಗೆ ತಿಳಿಸುತ್ತದೆ. ಆದರೆ ನೀವು ಕೈಚಾಚುವುದು ಯಾರ ಮುಂದೆ? ನಿಮ್ಮಂತಹ ಶಕ್ತಿಶಾಲಿ

ಅಸ್ತಿತ್ವಕ್ಕೆ ಸಹಾಯ ಮಾಡುವ ಶಕ್ತಿ ಯಾರಲ್ಲಿದೆ? ನಿಮ್ಮ ಬಯಕೆಗಳನ್ನು ಈಡೇರಿಸಲು ಅವರ ಬಳಿ ಇರುವುದಾದರೂ ಏನು? 'ನನ್ನ ಹೊರತು ನೀವು ಯಾರ ಮುಂದೆ ಕೈ ಚಾಚಿದರೂ ಅದು ಪರಿಣಾಮದ ದೃಷ್ಟಿಯಿಂದ ನಿರರ್ಥಕವಾಗಿದೆ. ಏಕೆಂದರೆ ಯಾರ ಬಳಿಯೂ ನಿಮಗೆ ನೀಡಲು ಏನೇನೂ ಇಲ್ಲ. ಎಲ್ಲರೂ ನಿಮ್ಮಂತಹ ಬಯಕೆ ಬೇಡಿಕೆ ಉಳ್ಳವರೇ ಆಗಿರುವರು' ಎಂದು ನಿಮ್ಮ ಸೃಷ್ಟಿಕರ್ತನು ಹೇಳುತ್ತಾನೆ.

ನಿಮ್ಮ ಅಂತಃಕರಣದ ಭಾವನೆಯು ನಿಮಗಿಂತ ಹಿರಿಯ ಯಾವುದಾದರೂ ಶಕ್ತಿಗಾಗಿ ಬಲಿದಾನ ನೀಡಬೇಕೆಂದು ಬಯಸುತ್ತದೆ. ನಿಮ್ಮ ಮೇಲೆ ಅನುಗ್ರಹಗಳನ್ನು ಮಾಡಿದವನಿಗಾಗಿ ಉಪವಾಸವಿರಿಸಬೇಕೆಂದು ಬಯಸುತ್ತದೆ. ನಿಮ್ಮ ಅಂತಃಕರಣದ ಈ ಬೇಡಿಕೆಯು ಸಹಜವಾದುದೇ ಆದರೆ ನಿಮ್ಮ ಬಲಿದಾನ ಮತ್ತು ಕೃತಜ್ಞತೆಯು ಕೇವಲ ಅಲ್ಲಾಹನಿಗೆ ಸಲ್ಲಬೇಕು. ನಿಮ್ಮ ಮನದಲ್ಲಿ ಯಾರಿಗಾದರೂ ತನ್ನನ್ನು ಅರ್ಪಿಸಿಕೊಳ್ಳುವ ಭಾವನೆಗಳಿದ್ದರೆ ಅವನ ಮುಂದೆ ನೀವು ಸುತ್ತು ಬರುತ್ತೀರಿ, ಪ್ರದಕ್ಷಿಣೆ ಮಾಡುತ್ತೀರಿ. ಆದರೆ ಇಸ್ಲಾಮ್ ಹೇಳುತ್ತದೆ- ನೀವು ನಿಮ್ಮನ್ನು ಅರ್ಪಿಸಿಕೊಳ್ಳತಕ್ಕಂಥ ನಿಮಗಿಂತ ದೊಡ್ಡವರು ಈ ಲೋಕದಲ್ಲಿ ಯಾರೂ ಇಲ್ಲ. ಅದಕ್ಕೆ ಅರ್ಹವಾದವನು ಅಲ್ಲಾಹನು ಮಾತ್ರ. 'ನೀವು ನನ್ನನ್ನು ನೋಡಲಾರಿರಿ. ಆದರೆ ನಾನು ಒಂದು ಸ್ಥಳವನ್ನು ನನ್ನ ದಿವ್ಯ ಪ್ರಕಾಶಗಳ ಕೇಂದ್ರವಾಗಿಸಿದ್ದೇನೆ. ನೀವು ಅದಕ್ಕೆ ಪ್ರದಕ್ಷಿಣೆ ಮಾಡಿ ನಿಮ್ಮ ಅರ್ಪಣಾಭಾವವನ್ನು ಶಮನಿಸಿ. ನಿಮ್ಮಲ್ಲಿರುವ ನೈಸರ್ಗಿಕ ಸಭ್ಯತೆ-ಸಜ್ಜನಿಕೆಯು ಯಾರಿಗಾಗಿಯಾದರೂ ನಿಮ್ಮ ತನು-ಧನಗಳನ್ನು ಅರ್ಪಿಸಬೇಕೆಂದು ಬಯಸುತ್ತದೆ. ಇದು ಬಹಳ ಉದಾತ್ತವಾದ ಭಾವನೆ. ಆದರೆ ಇದು ನಿಮ್ಮ ಸೃಷ್ಟಿಕರ್ತ, ಪ್ರಭುವಾದ ನಿಮ್ಮ ಅತಿದೊಡ್ಡ ಉಪಕಾರಿಗೇ ಸಲ್ಲಬೇಕು. ನೀವು ನಿಮ್ಮ ತನು-ಧನಗಳಿಂದ ಅವನ ದಾಸ್ಯ-ಆರಾಧನೆ-ಅನುಸರಣೆ ಮಾಡಬೇಕು.'

ಲೋಕದ ಪ್ರತಿಯೊಂದು ಧರ್ಮದಲ್ಲಿ ದೇವರ ಕಲ್ಪನೆಯಿದೆ. ಆರಾಧನೆಗಳ ಕಲ್ಪನೆಯಿದೆ. ಆತ್ಮೋನ್ನತಿಯ ಕೆಲವು ಸಮಾನ ರೂಪಗಳು ಎಲ್ಲ ಧರ್ಮಗಳಲ್ಲಿ ಕಾಣಸಿಗುತ್ತವೆ. ಪ್ರತಿಯೊಂದು ಧರ್ಮವು ತಾನು ನಂಬುವ ಆರಾಧ್ಯರ ಮುಂದೆ ಬಾಗುವ, ಸಾಷ್ಟಾಂಗವೆಗುವ, ಹರಕೆ-ಕಾಣಿಕೆಗಳನ್ನರ್ಪಿಸುವ ಪದ್ಧತಿಯನ್ನು ಹೊಂದಿದೆ. ಇಸ್ಲಾಮ್ ಈ ಎಲ್ಲ ರೂಪಗಳನ್ನು ಏಕದೇವನಿಗೆ ಮೀಸಲಿಡುತ್ತದೆ. ಈ ಪರ್ವತ, ಸಮುದ್ರ, ಸೂರ್ಯ-ಚಂದ್ರ, ನಕ್ಷತ್ರಾದಿಗಳು, ಪಶು-ಪಕ್ಷಿಗಳು, ಸರ್ಪಗಳೆಲ್ಲವೂ ನಿನಗಿಂತ ನಿಕೃಷ್ಟವಾಗಿದೆಯೆಂದು ಅದು ಹೇಳುತ್ತದೆ. ಅವುಗಳನ್ನು ನಿಮ್ಮ ಸೇವೆಗಾಗಿ ಸೃಷ್ಟಿಸಲಾಗಿದೆ. ಅವುಗಳ ಮುಂದೆ ಕೈಚಾಚುವುದು, ಶಿರಬಾಗುವುದು ನಿಮ್ಮ ಪಾಲಿಗೆ ನಾಚಿಕೆಗೇಡು, ಅವಮಾನ, ಕೃತಘ್ನತೆ, ನೀಚತನ ಮತ್ತು ದೇವಸಹಭಾಗಿತ್ವವಾಗಿದೆ. ನಿಮ್ಮ ಮುಂದೆ ದೇವಚರರು ಸಾಷ್ಟಾಂಗವೆರಗಿದ್ದರು. ಆದ್ದರಿಂದ ನಿಮ್ಮ ಶಿರ ಸೃಷ್ಟಿಕರ್ತನ ಹೊರತು ಇನ್ನಾರ ಮುಂದೆಯೂ ಬಾಗಬಾರದು. ಆಗ ಮಾತ್ರ ನೀವು ನಿಮ್ಮ ನೈಜ ಘನತೆ

ಗೌರವಗಳನ್ನು ಉಳಿಸಬಲ್ಲಿರಿ.

ಮನುಷ್ಯನು ತಾನೇ ಒಂದು ಸಣ್ಣ ವಿಶ್ವವಾಗಿದ್ದಾನೆ. ಅವನಲ್ಲಿ ಅಸಂಖ್ಯ ಸಾಮರ್ಥ್ಯಗಳಿವೆ. ಅವನಿನ್ನೂ ತನ್ನೆಲ್ಲ ಶಕ್ತಿ-ಸಾಮರ್ಥ್ಯಗಳನ್ನು ಅರಿತಿಲ್ಲ. ಮನುಷ್ಯನು ವಿಶ್ವದ ಅನೇಕ ರಹಸ್ಯಗಳನ್ನು ದಿನನಿತ್ಯ ಭೇದಿಸುತ್ತಿರುತ್ತಾನೆ. ಆದ್ದರಿಂದ ಅಂತಹ ಮನುಷ್ಯನ ಮೇಲೆ ಅವನಿಗಿಂತ ಜ್ಞಾನ-ಜಾಣ್ಮೆಗಳಲ್ಲಿ ಉನ್ನತನಾದ, ಸರ್ವಜ್ಞನೂ ಯುಕ್ತಿವಂತನೂ ನಿಷ್ಪಕ್ಷಪಾತಿಯೂ ಆಗಿರುವ ಸರ್ವಲೋಕದ ಒಡೆಯನ ಕಾನೂನು ಮಾತ್ರ ಜಾರಿಯಾಗಬೇಕು. ಅವನು ಯಾವುದೇ ವಂಶ, ವರ್ಗ, ವರ್ಣ, ಜನಾಂಗಕ್ಕೆ ಸೇರಿದವನಾಗಿರ ಬಾರದು. ಎಲ್ಲ ದೌರ್ಬಲ್ಯಗಳಿಂದ ಅವನು ಮುಕ್ತನಾಗಿರಬೇಕು. ಅವನು ಬಯಸಿದ್ದನ್ನೆಲ್ಲಾ ಮಾಡುವಷ್ಟು ಸಾಮರ್ಥ್ಯ ಉಳ್ಳವನಾಗಿರಬೇಕು. ತನ್ನ ಯಾವುದೇ ಕೃತ್ಯಕ್ಕೆ ಯಾರ ಮುಂದೆಯೂ ಅವನು ಜವಾಬ್ದಾರನಾಗಿರಬಾರದು. ಅಂತಹ ಸರ್ವಶಕ್ತ ದೇವನು ಮಾತ್ರ ಮನುಷ್ಯನ ಆರಾಧನೆ, ಅನುಸರಣೆ ಮತ್ತು ದಾಸ್ಯಕ್ಕೆ ಅರ್ಹನಾಗಬಲ್ಲನು.

ಅಲ್ಲಾಹನೇ ಸೃಷ್ಟಿಕರ್ತನು

ಈ ವಿಶ್ವವು ಅನಾದಿಯೂ ಅಲ್ಲ. ಅನಂತವೂ ಅಲ್ಲ. ಅದು ಸೃಷ್ಟಿಯಾಗಿದೆ. ಆದ್ದರಿಂದ ಅದಕ್ಕೆ ಒಬ್ಬ ಸೃಷ್ಟಿಕರ್ತನು ಇರಲೇಬೇಕು. ಈ ವಿಶ್ವವು ಸೃಷ್ಟಿಯಾಗಿದೆ ಎಂದು ಒಪ್ಪುವವರೆಲ್ಲಾ ಇದನ್ನು ಅಂಗೀಕರಿಸುತ್ತಾರೆ. ಇಸ್ಲಾಮಿನ ಪ್ರಕಾರ ಅಲ್ಲಾಹನೇ ಪ್ರತಿಯೊಂದು ವಸ್ತುವಿನ ಸೃಷ್ಟಿಕರ್ತನಾಗಿದ್ದಾನೆ.

"ಅವನು ಸರ್ವವನ್ನೂ ಸೃಷ್ಟಿಸಿದನು." (ಪವಿತ್ರ ಕುರ್‌ಆನ್, 6:101)

"ಆತನು ಭೂಮಿ-ಆಕಾಶಗಳ ನಿರ್ಮಾತೃ. ಅವನು ಯಾವುದಾದರೊಂದು ಕಾರ್ಯದ ನಿರ್ಧಾರ ಮಾಡಿಕೊಂಡೊಡನೆ 'ಸಂಭವಿಸು' ಎಂದು ಆಜ್ಞಾಪಿಸುತ್ತಾನೆ. ಆಗಲೇ ಅದು ಸಂಭವಿಸುತ್ತದೆ." (ಪವಿತ್ರ ಕುರ್‌ಆನ್, 2:117)

ಭೂಮಿ-ಆಕಾಶಗಳ ನಿರ್ಮಾತೃ ಆದ ಅಲ್ಲಾಹನು ಅವುಗಳನ್ನು ಯಾವುದೇ ಮೋಡೆಲ್ ಅಥವಾ ಮಾದರಿ ಇಲ್ಲದೆಯೇ ಸೃಷ್ಟಿಸಿರುವನು. ಅವುಗಳನ್ನು ಯಾವುದೇ ಉಪಕರಣ ಪರಿಕರಗಳಿಲ್ಲದೆಯೇ ಸೃಷ್ಟಿಸಿರುವನು ಎಂಬುದು ಮೇಲಿನ ಕುರ್‌ಆನ್ ವಾಕ್ಯದಿಂದ ವ್ಯಕ್ತವಾಗುತ್ತದೆ. ಆ ಏಕೈಕ ಸೃಷ್ಟಿಕರ್ತನನ್ನು ಬಿಟ್ಟು ಈ ವಿಶ್ವದಲ್ಲಿ ಯಾರನ್ನೆಲ್ಲ ಕರೆದು ಪ್ರಾರ್ಥಿಸಲಾಗುತ್ತದೋ ಅವು ಯಾವುದನ್ನೂ ಸೃಷ್ಟಿಸಿಲ್ಲ ಮಾತ್ರವಲ್ಲ ಅವು ಸ್ವಯಂ ಸೃಷ್ಟಿಗಳಾಗಿವೆ.

"ಇವರು ಅಲ್ಲಾಹನನ್ನು ಬಿಟ್ಟು ಇತರ ಯಾರನ್ನು ಕೂಗಿ ಪ್ರಾರ್ಥಿಸುತ್ತಿರುವರೋ ಅವರು ಯಾವುದೇ ವಸ್ತುವಿನ ಸೃಷ್ಟಿ ಕರ್ತರಲ್ಲ. ನಿಜವಾಗಿ ಅವರು ಸ್ವತಃ ಸೃಷ್ಟಿಗಳು." (ಪವಿತ್ರ ಕುರ್‌ಆನ್, 16:20)

ಅರ್ಥಾತ್ ಜನರು ಯಾರನ್ನು ದೇವರಾಗಿ ಮಾಡಿಕೊಂಡಿರುವರೋ ಅವರ ಪೈಕಿ

ಯಾರೂ ಸೃಷ್ಟಿಕರ್ತರಲ್ಲ. ಎಲ್ಲರೂ ಸೃಷ್ಟಿಗಳಾಗಿದ್ದಾರೆ. ವಿಶ್ವವ್ಯವಸ್ಥೆಯಲ್ಲಿರುವ ಅತ್ಯುನ್ನತ ಮಟ್ಟದ ತಂತ್ರಜ್ಞಾನ, ಅಸಾಮಾನ್ಯ ಜಾಣ್ಮೆ, ಸಮಗ್ರ ಯೋಜನೆ ಮತ್ತು ಶಿಸ್ತು ಒಬ್ಬನೇ ಸರ್ವಶಕ್ತ ಸೃಷ್ಟಿಕರ್ತನು ಇದನ್ನು ಸೃಷ್ಟಿಸಿ ಪರಿಪಾಲಿಸುತ್ತಿರುವನೆಂಬುದನ್ನು ಸೂಚಿಸುತ್ತದೆ.

ಅಲ್ಲಾಹನೇ ಒಡೆಯನು

ವಿಶ್ವ ಮತ್ತು ಅದರಲ್ಲಿರುವ ಪ್ರತಿಯೊಂದು ವಸ್ತು ಅಲ್ಲಾಹನ ಸೃಷ್ಟಿಯಾಗಿದೆ. ಆದ್ದರಿಂದ ಅವನೇ ಅವೆಲ್ಲವುಗಳ ಒಡೆಯನಾಗಿದ್ದಾನೆ. ಯಾವ ವಸ್ತುವೂ ಇತರರ ಸೃಷ್ಟಿ ಅಲ್ಲ ಮತ್ತು ಇತರ ಯಾರೂ ವಿಶ್ವ ಅಥವಾ ಅದರ ಯಾವುದೇ ವಸ್ತುವಿನ ಒಡೆಯರೂ ಅಲ್ಲ.

"ಅಲ್ಲಾಹನಿಗೇ ಸರ್ವಸ್ತುತಿ ಅವನು ಸಕಲ ವಿಶ್ವದ ಪ್ರಭು."

(ಪವಿತ್ರ ಕುರ್‌ಆನ್, 1:2)

"ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವುದೆಲ್ಲವೂ ಅಲ್ಲಾಹನದು."

(ಪವಿತ್ರ ಕುರ್‌ಆನ್, 2:284)

ಬಹುದೇವವಿಶ್ವಾಸಿಗಳು ಯಾವೆಲ್ಲಾ ವ್ಯಕ್ತಿಗಳನ್ನೂ ಶಕ್ತಿಗಳನ್ನೂ ವಸ್ತುಗಳನ್ನೂ ಪೂಜಿಸುತ್ತಿರುವರೋ ಅವುಗಳ ಪೈಕಿ ಯಾರೂ ಯಾವುದೂ ಯಾವುದೇ ವಸ್ತುವಿನ ಒಡೆಯರಲ್ಲ.

"ಹೇಳಿರಿ, ನೀವು ಅಲ್ಲಾಹನ ಹೊರತಾಗಿ ನಿಮ್ಮ ಆರಾಧ್ಯರೆಂದು ಭಾವಿಸಿ ಕೊಂಡಿರುವವುಗಳನ್ನು ಪ್ರಾರ್ಥಿಸಿ ನೋಡಿರಿ. ಆಕಾಶಗಳಲ್ಲಾಗಲಿ, ಭೂಮಿಯಲ್ಲಾಗಲಿ ಅವರು ಅಣುಗಾತ್ರದ ವಸ್ತುವಿಗೂ ಒಡೆಯರಲ್ಲ." (ಪವಿತ್ರ ಕುರ್‌ಆನ್, 34:22)

ಬಹುದೇವವಿಶ್ವಾಸಿ ಧರ್ಮಗಳಲ್ಲಿ ಅಲ್ಲಾಹನನ್ನು ಸಹಭಾಗಿಗಳಿಲ್ಲದ ಒಡೆಯನೆಂದು ಪರಿಗಣಿಸಲಾಗುವುದಿಲ್ಲ. ಅವರ ಪುರಾಣದಂತೆ ಭೂಮಿಯ ದೇವರು ಬೇರೆ, ಆಕಾಶದ ದೇವರು ಬೇರೆ, ಸೂರ್ಯನ ದೇವರು ಬೇರೆ, ಮಳೆಯ ದೇವರು ಬೇರೆ ಇತ್ಯಾದಿ. ಇದು ಎಲ್ಲ ಬಹುದೇವವಿಶ್ವಾಸಿ ಧರ್ಮಗಳ ಸಮಾನ ನಂಬಿಕೆಯಾಗಿದೆ. ಆದರೆ ಪ್ರತಿಯೊಂದು ಧರ್ಮದಲ್ಲಿ ಬೇರೆ ಬೇರೆ ದೇವರುಗಳಿರುತ್ತಾರೆ.

ಸ್ವಾಮಿ ಶ್ರದ್ಧಾನಂದರು ವೈದಿಕ ದೇವತೆಗಳ ಕುರಿತು ಹೇಳಿರುವುದನ್ನು ಗಮನಿಸಿರಿ-

'ಈ ಮೂರು ಲೋಕಗಳಲ್ಲಿ ಮೂರು ನಾಯಕ ದೇವತೆಗಳಿವೆ. ಸಾವಿತ್ರಿ ಅಥವಾ ಸೂರ್ಯ ದೈವಿಕ ಲೋಕದ ದೇವರು. ಇಂದ್ರ ಅಥವಾ ವಾಯು ಮಧ್ಯಮ ಲೋಕದ ದೇವರು. ಅಗ್ನಿಯು ಪಾತಾಳ ಲೋಕದ ದೇವರು. ಈ ಮೂರು ದೇವರುಗಳು ವರ್ಧಿಸಿ ಮೂವತ್ತಮೂರು ಆಗುತ್ತಾರೆ. ಪ್ರತಿಯೊಂದು ಲೋಕದಲ್ಲಿ ಹನ್ನೊಂದು ದೇವರು. ಈ ಮೂವತ್ತಮೂರು ದೇವರು ವೃದ್ಧಿಯಾಗಿ ಮೂರು ಸಾವಿರದ ಮುನ್ನೂರ ಮೂವತ್ತೊಂಭತ್ತು ದೇವರಾಗುತ್ತಾರೆ... ಅನಂತರ ಈ ಸಂಖ್ಯೆಯು ಬೆಳೆದು ಮೂವತ್ತಮೂರು ಕೋಟಿಯಾಗುತ್ತದೆ.'

(Cultural Heritage of India)

ಈ ದೇವರುಗಳ ಒಡೆತನದ ಕುರಿತು ನೀವು ಪುರಾವೆಗಳನ್ನು ಕೇಳಿದರೆ ಅದು ನಿಮಗೆ ಸಿಗಲಾರದು... ಮಾತ್ರವಲ್ಲ ಅವುಗಳ ಅಸ್ತಿತ್ವದ ಬಗೆಗೂ ಯಾವುದೇ ಆಧಾರ ನಿಮಗೆ ಸಿಗಲಾರದು.

ಅಲ್ಲಾಹನೇ ಅಧಿಪತಿ

ಅಲ್ಲಾಹನೇ ಜಗತ್ತಿನ ಸೃಷ್ಟಿಕರ್ತನೂ ಒಡೆಯನೂ ಆಗಿರುವಾಗ ಅವನೇ ಸಮಸ್ತ ವಿಶ್ವದ ನೈಜ ಅಧಿಪತಿಯಾಗಿರಲೇಬೇಕು. ಈ ಅದ್ಭುತ, ಅಸೀಮ ವಿಶ್ವವನ್ನು ಸೃಷ್ಟಿಸಿದವನೇ ಇದರ ವ್ಯವಸ್ಥೆ ನಡೆಸುವಷ್ಟು ಸಮರ್ಥನಾಗಿರುವುದು ಸಾಧ್ಯ. ಓರ್ವ ಅತ್ಯಂತ ಯುಕ್ತಿವಂತ, ಸರ್ವಜ್ಞ ಮತ್ತು ಸರ್ವಶಕ್ತ ದೇವನು ಮಾತ್ರ ಈ ವಿಶ್ವದ ವ್ಯವಸ್ಥೆ, ಯೋಜನೆ ಮತ್ತು ಆಧಿಪತ್ಯದ ಹೊಣೆ ನಿರ್ವಹಿಸಬಲ್ಲ.

"ವಾಸ್ತವದಲ್ಲಿ ನಿಮ್ಮ ಪ್ರಭು ಅಲ್ಲಾಹನೇ ಆಗಿರುತ್ತಾನೆ. ಅವನು ಭೂಮಿ-ಆಕಾಶಗಳನ್ನು ಆರು ದಿನಗಳಲ್ಲಿ ಸೃಷ್ಟಿಸಿದನು. ತರುವಾಯ ತನ್ನ 'ವಿಶ್ವ ಸಾಮ್ರಾಜ್ಯ ಪೀಠ'ದಲ್ಲಿ (ಅರ್ಶ್) ವಿರಾಜಮಾನನಾದನು. ಅವನು ಇರುಳನ್ನು ಹಗಲಿನ ಮೇಲೆ ಹರಡುತ್ತಾನೆ ಮತ್ತು ರಾತ್ರಿಯನ್ನು ಹಗಲು ಹಿಂಬಾಲಿಸಿಕೊಂಡು ಓಡಿ ಬರುತ್ತದೆ. ಅವನು ಸೂರ್ಯನನ್ನೂ ಚಂದ್ರನನ್ನೂ ನಕ್ಷತ್ರಗಳನ್ನೂ ಸೃಷ್ಟಿಸಿದನು. ಎಲ್ಲವೂ ಅವನ ಆಜ್ಞಾಧೀನವಾಗಿವೆ. ಎಚ್ಚರಿಕೆ! ಅವನದೇ ಸೃಷ್ಟಿ. ಅವನದೇ ಅಪ್ಪಣೆ. ಸರ್ವಲೋಕಗಳ ಒಡೆಯನೂ ಪ್ರಭುವೂ ಆಗಿರುವ ಅಲ್ಲಾಹನು ಮಹಾ ಸಮೃದ್ಧನು." (ಪವಿತ್ರ ಕುರ್‌ಆನ್, 7:54)

ವಿಶ್ವ ಸಾಮ್ರಾಜ್ಯ ಪೀಠದಲ್ಲಿ ವಿರಾಜಮಾನನಾಗುವುದೆಂದರೆ ಅಲ್ಲಾಹನು ವಿಶ್ವವನ್ನು ಸೃಷ್ಟಿಸಿ ಒಂದು ಮೂಲೆಯಲ್ಲಿ ಹೋಗಿ ಕುಳಿತಿಲ್ಲ. ಅದನ್ನು ಇತರರಿಗೆ ವಹಿಸಿಕೊಡಲೂ ಇಲ್ಲ. ಅವನು ಆಧಿಪತ್ಯದ ಚುಕ್ಕಾಣಿಯನ್ನು ತನ್ನ ಕೈಯಲ್ಲಿರಿಸಿ ವಿಶ್ವದ ವ್ಯವಸ್ಥೆಯನ್ನು ವಹಿಸಿಕೊಂಡಿರುವನು. 'ಎಚ್ಚರಿಕೆ! ಅವನದೇ ಸೃಷ್ಟಿ. ಅವನದೇ ಅಪ್ಪಣೆ'- ಎಂದರೆ ಸೃಷ್ಟಿಕರ್ತನು ಅವನಾಗಿರುವುದರಿಂದ ಆಧಿಪತ್ಯವೂ ಅವನಿಗೆ ಭೂಷಣವಾಗಿದೆ.

ಇನ್ನೊಂದೆಡೆ ಹೀಗಿದೆ-

"ಅವನು ಆಕಾಶದಿಂದ ಭೂಮಿಯವರೆಗೂ ಲೋಕಾಡಳಿತ ವ್ಯವಸ್ಥೆ ನಡೆಸುತ್ತಾನೆ."

(ಪವಿತ್ರ ಕುರ್‌ಆನ್, 32:5)

ಅರ್ಥಾತ್ ವಿಶ್ವದ ಅಧಿಪತಿ ಕೇವಲ ಅಲ್ಲಾಹನಾಗಿದ್ದಾನೆ, ಅವನ ಹೊರತು ಇಲ್ಲಿ ಯಾರ ಆಜ್ಞೆಯೂ ನಡೆಯುವುದಿಲ್ಲ.

"ಅವನ ಪ್ರಭುತ್ವದಲ್ಲಿ ಯಾರೂ ಸಹಭಾಗಿಯಿಲ್ಲ. ಅವನಿಗೊಬ್ಬ ರಕ್ಷಕ ಮಿತ್ರನಿದ್ದಾನೆನ್ನಲು ಅವನೇನೂ ವಿವಶನಲ್ಲ." (ಪವಿತ್ರ ಕುರ್‌ಆನ್, 17:111)

ಅಥವಾ ಇತರರ ಸಹಾಯ ಪಡೆಯಲು ತನ್ನ ಅಧಿಕಾರದಲ್ಲಿ ಇತರರನ್ನು ಸಹಭಾಗಿಗಳಾಗಿ ಮಾಡಲು ಅವನು ದುರ್ಬಲನಲ್ಲ.

ಅಲ್ಲಾಹನು ಕೇವಲ ವಿಶ್ವದ ಅಧಿಪತಿಯಲ್ಲ. ಮಾನವಕುಲದ ನೈಜ ಅಧಿಪತಿಯೂ ಅವನೇ ಆಗಿದ್ದಾನೆ.

"ಹೇಳಿರಿ- ನಾನು ಅಭಯ ಯಾಚಿಸುತ್ತೇನೆ- ಮಾನವರ ಪ್ರಭುವಿನ- ಮಾನವರ ಸಾಮ್ರಾಟನ- ಮಾನವರ ನೈಜ ಆರಾಧ್ಯನ-" (ಪವಿತ್ರ ಕುರ್‌ಆನ್, 114:1-3)

"ಆಜ್ಞಾಧಿಕಾರವು ಅಲ್ಲಾಹನಿಗೆ ಹೊರತು ಇನ್ನಾರಿಗೂ ಇಲ್ಲ."

(ಪವಿತ್ರ ಕುರ್‌ಆನ್, 12:40)

ರಾಜಕೀಯ ಶಾಸ್ತ್ರದ ಪ್ರಕಾರ ಸಾರ್ವಭೌಮ- ಅಧಿಪತಿ(Sovereign)ಯಲ್ಲಿರ ಬೇಕಾದ ಎಲ್ಲ ಗುಣಗಳೂ ಅಲ್ಲಾಹನಲ್ಲಿವೆ. ಅಲ್ಲಾಹನ ಅಧಿಕಾರವು ವ್ಯಕ್ತಿಗತವಾಗಿದೆ. ಅಸೀಮವಾಗಿದೆ. ವರ್ಗಾವಣೆ ಮಾಡಲು ಸಾಧ್ಯವಿಲ್ಲದ್ದಾಗಿದೆ. ಅವನ ಬುದ್ಧಿಯು ತಪ್ಪಿಲ್ಲದ್ದಾಗಿದೆ. ಅವನ ಜ್ಞಾನವು ಪರಿಪೂರ್ಣವಾಗಿದೆ. ಇವು ಅಲ್ಲಾಹನ ಗುಣಗಳಾಗಿದ್ದು ಈ ಪೈಕಿ ಯಾವ ಗುಣವೂ ಅಲ್ಲಾಹನ ಹೊರತು ಇತರ ಯಾವ ವ್ಯಕ್ತಿಯಲ್ಲಾಗಲೀ ವ್ಯಕ್ತಿಗಳ ಸಮೂಹದಲ್ಲಾಗಲೀ ಇಲ್ಲ. ಈ ಗುಣಗಳ ಹೊರತು ಸಾರ್ವಭೌಮ- ಅಧಿಪತ್ಯದ (Sovereignity) ಕುರಿತು ಊಹಿಸಲಿಕ್ಕೂ ಸಾಧ್ಯವಿಲ್ಲ.

ಯಾವ ವ್ಯಕ್ತಿಗಳಿಗೆ ಈ ಲೋಕದಲ್ಲಿ ಆಡಳಿತ ನಡೆಸುವ ಅವಕಾಶ ಲಭಿಸುತ್ತದೋ ಅದು ಅಲ್ಲಾಹು ನೀಡುವುದರಿಂದ ಲಭಿಸುತ್ತದೆ. ಅವನು ಬಯಸಿದಾಗ ಅವರನ್ನು ಆಡಳಿತ ಪೀಠದಿಂದ ಇಳಿಸಿ ಬಿಡುತ್ತಾನೆ.

"ಹೇಳಿರಿ- ಓ ಅಲ್ಲಾಹ್, ಸಕಲ ವಿಶ್ವಾಧಿಪತ್ಯದ ಒಡೆಯನೇ, ನೀನು ನಿನಗಿಷ್ಟ ಬಂದವರಿಗೆ ರಾಜ್ಯಾಧಿಕಾರ ನೀಡುವೆ ಮತ್ತು ನಿನಗಿಷ್ಟ ಬಂದವರಿಂದ ಕಸಿದುಕೊಳ್ಳುವೆ."

(ಪವಿತ್ರ ಕುರ್‌ಆನ್, 3:26)

ಮನುಷ್ಯನು ಭೂಮಿಯ ಒಡೆಯನೋ ಅಧಿಪತಿಯೋ ಅಲ್ಲ. ಅವನು ಅಲ್ಲಾಹನ ಪ್ರತಿನಿಧಿಯಾಗಿದ್ದಾನೆ. ಅಲ್ಲಾಹನು ಅವನಿಗೆ ತನ್ನ ಪ್ರಾತಿನಿಧ್ಯವನ್ನು ನೀಡಿ ಅವನನ್ನು ಪರೀಕ್ಷಿಸುತ್ತಿರುವನು.

"ಅವನೇ ನಿಮ್ಮನ್ನು ಭೂಮಿಯ ಪ್ರತಿನಿಧಿಗಳನ್ನಾಗಿ ಮಾಡಿದನು ಮತ್ತು ನಿಮಗೆ ಕೊಟ್ಟಿರುವುದರಲ್ಲಿ ನಿಮ್ಮನ್ನು ಪರೀಕ್ಷಿಸಲಿಕ್ಕಾಗಿ ನಿಮ್ಮಲ್ಲಿ ಕೆಲವರಿಗೆ ಕೆಲವರಿಗಿಂತ ಉನ್ನತ ಪದವಿಗಳನ್ನು ನೀಡಿದನು. ನಿಶ್ಚಯವಾಗಿಯೂ ನಿಮ್ಮ ಪ್ರಭು ಶಿಕ್ಷೆ ಕೊಡುವುದರಲ್ಲಿ ಅತಿ ಶೀಘ್ರನು ಮತ್ತು ಅತ್ಯಂತ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ."

(ಪವಿತ್ರ ಕುರ್‌ಆನ್, 6:165)

ಬಹುದೇವಾರಾಧಕ ಧರ್ಮಗಳಲ್ಲೂ ದೇವನನ್ನು ಜಗತ್ತಿನ ಅಧಿಪತಿಯೆಂದು ಒಪ್ಪುತ್ತಾರೆ. ಆದರೆ ಆತ ಸಹಭಾಗಿಗಳಿಲ್ಲದ ಅಧಿಪತಿಯಲ್ಲ. ಭೂಮಿ-ಆಕಾಶಗಳಿಗೆ

ಅನೇಕಾರು ದೇವರುಗಳಿದ್ದು ವಿಶ್ವದ ಬೇರೆ ಬೇರೆ ಭಾಗಗಳಲ್ಲಿ ಅವರ ಆಧಿಪತ್ಯವಿರುತ್ತದೆ. ಈ ದೇವರುಗಳ ಆಧಿಪತ್ಯದಿಂದ ನೈಜ ದೇವನಿಗೆ ಏನೂ ಉಳಿಯುವುದಿಲ್ಲ.

ಡಾ| ಯಾದವ್‌ನಾಥ್ ಸಿನ್ಹಾ ಅವರು ಹೀಗೆ ಹೇಳಿರುವರು:

"ವೇದಗಳು ಧಾರ್ಮಿಕ ಚಿಂತನೆಯ ವಿಭಿನ್ನ ರೂಪಗಳನ್ನು ಪ್ರತಿನಿಧಿಸುತ್ತವೆ... ಪ್ರಕೃತಿಯ ಮಹಾನ್, ಉನ್ನತ, ಸುಂದರ ಮತ್ತು ಲಾಭದಾಯಕ ಅಂಶಗಳಿಗೆ ವೈಯಕ್ತಿಕ ಮತ್ತು ಮೂರ್ತರೂಪ ನೀಡಿ ಅವುಗಳನ್ನು ದೇವರೆಂದು ಸಾರಲಾಗಿದೆ... ಈ ದೇವರುಗಳು ಪ್ರಕೃತಿಯ ವಿಭಿನ್ನ ರೂಪಗಳ ಮೇಲೆ ಆಧಿಪತ್ಯ ನಡೆಸುತ್ತಾರೆ. ಇದು ಕೇವಲ ಪ್ರಕೃತಿಯ ಪ್ರಕಟನೆಯಲ್ಲ, ಇವು ಪ್ರಕೃತಿಗೆ ಅತೀತವಾದ ಶಕ್ತಿಗಳಾಗಿದ್ದು ಪ್ರಕೃತಿಯ ಮೇಲೆ ಇವುಗಳ ಆಧಿಪತ್ಯವೇ ನಡೆಯುತ್ತದೆ." **(A history of Indian Philosophy Vol. 7-1)**

ಅಲ್ಲಾಹನೇ ಪರಿಪಾಲಕನು

ಅಲ್ಲಾಹನೇ ವಿಶ್ವವನ್ನು ಸೃಷ್ಟಿಸಿರುವನು. ಅವನೇ ಎಲ್ಲ ವಸ್ತುಗಳ ಒಡೆಯನಾಗಿರುವನು. ಅವನೇ ವಿಶ್ವದ ವ್ಯವಸ್ಥಾಪಕ ಮತ್ತು ಅಧಿಪತಿಯಾಗಿರುವನು. ಇದು ನಿಜವೆಂದಾದರೆ ಅಲ್ಲಾಹನೇ ಈ ಎಲ್ಲ ವಸ್ತುಗಳನ್ನೂ ಪರಿಪಾಲಿಸುತ್ತಿದ್ದಾನೆಂಬುದೂ ಅಷ್ಟೇ ಸರಿಯಾಗಿದೆ. ಅವನ ಹೊರತು ಯಾರೂ ಪರಿಪಾಲಕರೂ ಅನ್ನದಾತರೂ ಇಲ್ಲ.

"ಆದುದರಿಂದ ಸರ್ವ ಪ್ರಶಂಸೆಯೂ ಭೂಮಿ-ಆಕಾಶಗಳ ಒಡೆಯ ನಾಗಿರುವ ಮತ್ತು ಸಕಲ ಲೋಕವಾಸಿಗಳ ಪಾಲಕಪ್ರಭುವಾಗಿರುವ ಅಲ್ಲಾಹನಿಗೇ ಮೀಸಲು."

(ಪವಿತ್ರ ಕುರ್‌ಆನ್, 45:36)

ಲೋಕದಲ್ಲಿರುವುದೆಲ್ಲವೂ ಅಲ್ಲಾಹನ ಸೃಷ್ಟಿಯಾಗಿದ್ದು ಅವನ ಒಡೆತನಕ್ಕೆ ಸೇರಿದೆ. ಆದ್ದರಿಂದ ಯಾರಿಗೆ ಏನು ಸಿಗುವುದಿದ್ದರೂ ಅವನು ಕೊಡುವುದರಿಂದಲೇ ಸಿಗುತ್ತದೆ.

"ಹೇ ಜನರೇ, ನಿಮ್ಮನ್ನೂ ನಿಮ್ಮ ಪೂರ್ವಿಕರನ್ನೂ ಸೃಷ್ಟಿಸಿದ ನಿಮ್ಮ ಪ್ರಭುವಿನ ದಾಸ್ಯ-ಆರಾಧನೆ ಮಾಡಿರಿ. (ಹೀಗೆ ಮಾಡಿದರೆ) ನೀವು ರಕ್ಷಣೆ ಹೊಂದಬಹುದು. ಅವನೇ ಭೂಮಿಯನ್ನು ನಿಮಗೆ ಹಾಸನ್ನಾಗಿ ಹಾಸಿದನು; ಆಕಾಶದ ಮೇಲ್ಛಾವಣಿ ಮಾಡಿದನು; ಮೇಲ್ಭಾಗದಿಂದ ಮಳೆ ಸುರಿಸಿದನು. ಅದರ ಮೂಲಕ ತರತರದ ಬೆಳೆಗಳನ್ನು ಉತ್ಪಾದಿಸಿ ನಿಮಗೆ ಆಹಾರ ಒದಗಿಸಿದನು. ಇದನ್ನು ನೀವು ಅರಿತಿರುತ್ತಾ ಇತರರನ್ನು ಅಲ್ಲಾಹನಿಗೆ ಪ್ರತಿಸ್ಪರ್ಧಿಗಳನ್ನಾಗಿ ಮಾಡದಿರಿ." **(ಪವಿತ್ರ ಕುರ್‌ಆನ್, 2:21-22)**

ಅಲ್ಲಾಹನೇ ಇಷ್ಟಾರ್ಥ ಸಿದ್ಧಿಸುವವನು

ಅಲ್ಲಾಹನೇ ಸೃಷ್ಟಿಕರ್ತ, ಒಡೆಯ, ಅಧಿಪತಿ ಮತ್ತು ಪರಿಪಾಲಕನಾಗಿದ್ದು ಎಲ್ಲವೂ ಅವನಲ್ಲಿಯೇ ಇದೆ. ಆದ್ದರಿಂದ ಮನುಷ್ಯರ ಇಷ್ಟಾರ್ಥ ಸಿದ್ಧಿಸುವವನು ಮತ್ತು ಸಂಕಷ್ಟ ಪರಿಹರಿಸುವವನು ಕೂಡಾ ಅವನೇ ಆಗಿರಲು ಸಾಧ್ಯ.

ಕಳವಳಗೊಂಡವನು ಅವನನ್ನು ಪ್ರಾರ್ಥಿಸಿದಾಗ ಅವನ ಪ್ರಾರ್ಥನೆಯನ್ನು ಆಲಿಸುವವನಾರು? ಅವನ ಸಂಕಷ್ಟಗಳನ್ನು ನಿವಾರಿಸುವವನಾರು? ನಿಮ್ಮನ್ನು ಭೂಮಿಯ ಪ್ರತಿನಿಧಿಯಾಗಿ ಮಾಡುವವನಾರು? ಅಲ್ಲಾಹನೊಂದಿಗೆ ಇತರ ದೇವರುಗಳೂ (ಈ ಕಾರ್ಯವೆಸಗಲು) ಇರುವರೇ?

ಅಲ್ಲಾಹನ ಹೊರತು ಇತರೆಲ್ಲರೂ ಅವನ ದಾಸರಾಗಿದ್ದು ಅವನ ಆಶ್ರಿತರಾಗಿದ್ದಾರೆ. ಆದ್ದರಿಂದ ಅವರ ಇಷ್ಟಾರ್ಥಗಳನ್ನು ಸಿದ್ಧಿಸಬಲ್ಲವನು ಅಲ್ಲಾಹನು ಮಾತ್ರವಾಗಿದ್ದಾನೆ.

"ನೀವು ಅಲ್ಲಾಹನನ್ನು ಬಿಟ್ಟು ಯಾರನ್ನು ಕೂಗಿ ಕರೆಯುತ್ತೀರೋ ಅವರೂ ನಿಮ್ಮಂತಿರುವ ದಾಸರೇ. ಅವರ ಬಗ್ಗೆ ನಿಮ್ಮ ವಿಚಾರಗಳು ಸರಿಯಾಗಿದ್ದರೆ ನೀವು ಅವರನ್ನೊಮ್ಮೆ ಪ್ರಾರ್ಥಿಸಿ, ನಿಮ್ಮ ಪ್ರಾರ್ಥನೆಗೆ ಉತ್ತರ ಕೊಡುತ್ತಾರೋ ನೋಡಿರಿ."

(ಪವಿತ್ರ ಕುರ್‌ಆನ್, 7:194)

ಸೃಷ್ಟಿಗಳು ತಮ್ಮ ಜೀವನಕ್ಕೇ ಅಲ್ಲಾಹನನ್ನು ಆಶ್ರಯಿಸಿಕೊಂಡಿವೆ. ಆದ್ದರಿಂದ ಅವು ತಮಗೇ ಸಹಾಯವನ್ನು ಮಾಡಲಾರವು. ಹಾಗಿರುವಾಗ ಅವು ನಿಮಗೆ ನೆರವಾಗುವ ಪ್ರಶ್ನೆಯೇ ಇಲ್ಲ.

"ಯಾವುದನ್ನೂ ಸೃಷ್ಟಿಸಲಾಗದೆ ಸ್ವತಃ ಸೃಷ್ಟಿಸಲ್ಪಟ್ಟವುಗಳನ್ನು ಅಲ್ಲಾಹನ ಸಹಭಾಗಿಗಳಾಗಿ ಮಾಡುವವರು ಎಂತಹ ತಿಳಿಗೇಡಿಗಳು? ಅವು ಇವರಿಗೆ ಸಹಾಯ ಮಾಡಲಾರವು. ಸ್ವತಃ ತಮ್ಮ ಸಹಾಯ ಮಾಡಿಕೊಳ್ಳಲೂ ಅಶಕ್ತವಾಗಿವೆ."

(ಪವಿತ್ರ ಕುರ್‌ಆನ್, 7:191-192)

ಅಲ್ಲಾಹನಿಗೆ ತನ್ನ ಸ್ವರವನ್ನು ತಲುಪಿಸಲು ಮನುಷ್ಯನಿಗೆ ಯಾವನೇ ಮಧ್ಯವರ್ತಿ ಅಥವಾ ಶಿಫಾರಸುದಾರನ ಅಗತ್ಯವಿಲ್ಲ. ಅವನು ಪ್ರತಿಯೊಬ್ಬ ವ್ಯಕ್ತಿಗೂ ನಿಕಟನಾಗಿದ್ದು, ಪ್ರತಿಯೊಬ್ಬನ ಪ್ರಾರ್ಥನೆಯನ್ನು ಆಲಿಸುತ್ತಾನೆ ಮತ್ತು ತಾನೇ ಎಲ್ಲರ ಇಷ್ಟಾರ್ಥಗಳನ್ನು ಸಿದ್ಧಿಸುತ್ತಾನೆ.

"ಓ ಪೈಗಂಬರರೇ, ನನ್ನ ದಾಸರು ನಿಮ್ಮೊಡನೆ ನನ್ನ ಬಗ್ಗೆ ಕೇಳಿದರೆ, ನಾನು ಅವರಿಗೆ ನಿಕಟನಾಗಿದ್ದೇನೆಂದೂ, ಪ್ರಾರ್ಥಿಸು ವವನು ನನ್ನನ್ನು ಪ್ರಾರ್ಥಿಸಿದಾಗ ಅವನ ಪ್ರಾರ್ಥನೆಯನ್ನು ಆಲಿಸುತ್ತೇನೆಂದೂ ಅದಕ್ಕೆ ಉತ್ತರಿಸುತ್ತೇನೆಂದೂ ಅವರಿಗೆ ಹೇಳಿರಿ."

(ಪವಿತ್ರ ಕುರ್‌ಆನ್, 2:186)

ಇದಕ್ಕೆ ತದ್ವಿರುದ್ಧವಾಗಿ, ಕೃತಕ ದೇವರುಗಳಿಗೆ, ಯಾರು ತಮ್ಮನ್ನು ಕರೆದು ಪ್ರಾರ್ಥಿಸುತ್ತಾರೆಂಬುದರ ಅರಿವೇ ಇರುವುದಿಲ್ಲ.

"ಅಲ್ಲಾಹನನ್ನು ಬಿಟ್ಟು, ಪುನರುತ್ಥಾನ ದಿನದವರೆಗೂ ಅವನಿಗೆ ಉತ್ತರ ಕೊಡಲಾಗದಂತಹವರನ್ನು ಪ್ರಾರ್ಥಿಸುವವನಿಗಿಂತಲೂ ಹೆಚ್ಚು ದಾರಿಗೆಟ್ಟವನು ಇನ್ನಾರಿರಬಹುದು? ಮಾತ್ರವಲ್ಲ, ಅವರಿಗಂತೂ ಪ್ರಾರ್ಥಿಸುವವರು ತಮ್ಮನ್ನು ಪ್ರಾರ್ಥಿಸುತ್ತಿದ್ದಾರೆಂಬ ಅರಿವು ಕೂಡಾ ಇಲ್ಲ." **(ಪವಿತ್ರ ಕುರ್‌ಆನ್, 46:5)**

ಅಲ್ಲಾಹನೇ ದೇವನು

ದೇವ ಅಥವಾ ಆರಾಧ್ಯನಾಗ ಬೇಕಾದರೆ ಅವನು-

- ಪ್ರಕೃತಿಗೆ ಅತೀತವಾದ ಶಕ್ತಿಯನ್ನು ಹೊಂದಿರಬೇಕು.
- ವಿಶ್ವದ ವ್ಯವಸ್ಥೆಯು ಅವನ ವಶದಲ್ಲಿರಬೇಕು.
- ಅವನು ಇಷ್ಟಾರ್ಥಗಳನ್ನು ಸಿದ್ಧಿಸುವವನು ಮತ್ತು ಸಂಕಷ್ಟಗಳನ್ನು ನಿವಾರಿಸುವವನಾಗಿರಬೇಕು.
- ಅವನಲ್ಲಿ ಪ್ರಾರ್ಥಿಸಲ್ಪಡಬೇಕು.
- ಪೂಜೆ, ಮತ್ತು ದಾಸ್ಯಕ್ಕೆ ಅರ್ಹನಾಗಿರಬೇಕು.

ಆರಾಧ್ಯ ಅಥವಾ ದೇವ ಕಲ್ಪನೆಯ ಈ ಎಲ್ಲ ಅನಿವಾರ್ಯ ಗುಣಗಳ ಆಧಾರದಲ್ಲಿ ಅಲ್ಲಾಹನು ಮಾತ್ರ ದೇವನಾಗಿರುವನು.

ಅಲ್ಲಾಹನೊಬ್ಬನೇ ಸೃಷ್ಟಿಕರ್ತನಾಗಿದ್ದು ಉಳಿದೆಲ್ಲವೂ ಸೃಷ್ಟಿಯಾಗಿದೆ. ಸೃಷ್ಟಿಯೂ ಇತರರ ಅವಲಂಬಿಯೂ ಆದ ಯಾವುದೇ ವಸ್ತು ದೇವನಾಗುವುದು ಸಾಧ್ಯವಿಲ್ಲ.

"ಇವರು ಮಾಡಿಕೊಂಡಿರುವ ಸಹಭಾಗಿಗಳೂ ಅಲ್ಲಾಹನ ಹಾಗೆಯೇ ಏನನ್ನಾದರೂ ಸೃಷ್ಟಿಸಿದ್ದುಂಟೇ? ಆ ಕಾರಣದಿಂದ ಸೃಷ್ಟಿಯ ವಿಷಯವು ಅವರಿಗೆ ಅಸ್ಪಷ್ಟವಾಗಿಬಿಟ್ಟಿತೇ? ಹೇಳಿರಿ- ಸಕಲ ವಸ್ತುಗಳ ಸೃಷ್ಟಿಕರ್ತನು ಅಲ್ಲಾಹನು ಮಾತ್ರ ಮತ್ತು ಅವನು ಏಕೈಕನೂ ಅಜೇಯನೂ ಆಗಿರುತ್ತಾನೆ." (ಪವಿತ್ರ ಕುರ್‌ಆನ್, 13:16)

ಪ್ರತಿಯೊಂದು ವಸ್ತುವೂ ಅಲ್ಲಾಹನ ಒಡೆತನಕ್ಕೆ ಸೇರಿದ್ದು ಅವನಿಗೆ ವಿಧೇಯವಾಗಿದೆ.

"ಆಕಾಶಗಳಲ್ಲೂ ಭೂಮಿಯಲ್ಲೂ ಇರುವ ಎಲ್ಲರೂ ಅವನ ದಾಸರು. ಎಲ್ಲರೂ ಅವನ ಆಜ್ಞಾಧೀನರೇ ಆಗಿರುತ್ತಾರೆ." (ಪವಿತ್ರ ಕುರ್‌ಆನ್, 30:26)

ಯಾವನೇ ದಾಸ ಮತ್ತು ಆಳು ಎಂದೂ ದೇವನಾಗಲಾರ.

"ಅವನು ನಿಮಗೆ ನಿಮ್ಮಿಂದಲೇ ಒಂದು ಉಪಮೆ ಕೊಡುತ್ತಾನೆ. ನಿಮ್ಮ ಸ್ವಾಧೀನವಿರುವ ನಿಮ್ಮ ಗುಲಾಮರಲ್ಲಿ ಕೆಲವರು ನಾವು ನಿಮಗೆ ನೀಡಿರುವ ಸಂಪತ್ತಿನಲ್ಲಿ ನಿಮ್ಮೊಂದಿಗೆ ಸರಿಸಮಾನ ಪಾಲುದಾರರಾಗಿದ್ದಾರೆಯೇ ಮತ್ತು ನೀವು ನಿಮ್ಮ ಸರಿಸಾಟಿಯಾಗಿರುವವರನ್ನು ಹೆದರುವಂತೆಯೇ ಅವರನ್ನೂ ಹೆದರುತ್ತೀರಾ?" (ಪವಿತ್ರ ಕುರ್‌ಆನ್, 30:28)

ಅಲ್ಲಾಹನೇ ಈ ವಿಶ್ವದ ಅಧಿಪತಿ ಅವನ ಹೊರತು ವಿಶ್ವದ ವ್ಯವಸ್ಥಾಪನೆಯಲ್ಲಿ ಯಾರಿಗೂ ಯಾವುದೇ ಹಸ್ತಕ್ಷೇಪ ನಡೆಸುವ ಅಧಿಕಾರವಿಲ್ಲ.

"ಭೂಮಿ-ಆಕಾಶಗಳ ಪ್ರಭುತ್ವಕ್ಕೆ ಅವನೇ ಒಡೆಯನಾಗಿರುತ್ತಾನೆ."

(ಪವಿತ್ರ ಕುರ್‌ಆನ್, 39:44)

ಭೂಮಿ-ಆಕಾಶಗಳ ಎಲ್ಲ ಭಂಡಾರಗಳು ಅಲ್ಲಾಹನ ವಶದಲ್ಲೇ ಇವೆ. ಆದ್ದರಿಂದ ಅವನೇ ಎಲ್ಲರ ಇಷ್ಟಾರ್ಥಗಳನ್ನು ಸಿದ್ಧಿಸುವವನೂ ಬೇಡಿಕೆಗಳನ್ನು ಪೂರೈಸುವವನೂ ಆಗಿರುವನು.

ಭೂಮಿ-ಆಕಾಶಗಳ ಭಂಡಾರಗಳ ಕೀಲಿಕೈ ಅವನ ವಶದಲ್ಲೇ ಇವೆ.

ವ್ಯಕ್ತಿಗತವಾದ ಅಸ್ತಿತ್ವವಿರುವುದು ಅವನಿಗೆ ಮಾತ್ರ, 'ಇತರ ಎಲ್ಲರ ಜೀವನ ಮತ್ತು ಅಸ್ತಿತ್ವವು ಅವನನ್ನೇ ಆಶ್ರಯಿಸಿಕೊಂಡಿದೆ. ಆದ್ದರಿಂದ ಅವನು ಮಾತ್ರ ದೇವನಾಗಬಲ್ಲನು.'

"ಅಲ್ಲಾಹನು ಚಿರಂತನು, ಸ್ವಯಂಜೀವಂತನು. ಅಖಿಲ ಪ್ರಪಂಚದ ನಿಯಂತ್ರಕನಾದ ಆತನ ಹೊರತು ಆರಾಧ್ಯನಾರೂ ಇಲ್ಲ." (ಪವಿತ್ರ ಕುರ್‌ಆನ್, 2:255)

ಆಕಾಶವಾಗಲೀ ಭೂಮಿಯಾಗಲೀ ಎಲ್ಲಿಡೆಯೂ ಒಬ್ಬನೇ ದೇವನಿದ್ದಾನೆ. ಅವನ ಹೊರತು ಅನ್ಯ ದೇವರಿಲ್ಲ.

"ಅವನೊಬ್ಬನೇ ಆಕಾಶದಲ್ಲೂ ಆರಾಧ್ಯನು ಮತ್ತು ಭೂಮಿಯಲ್ಲೂ ಆರಾಧ್ಯನು. ಅವನೇ ಯುಕ್ತಿಪೂರ್ಣನೂ ಸರ್ವಜ್ಞನೂ ಆಗಿರುತ್ತಾನೆ." (ಪವಿತ್ರ ಕುರ್‌ಆನ್, 43:84)

ಜನರು ಅಲ್ಲಾಹನ ಹೊರತು ದೇವರೆಂದು ಪಟ್ಟಿ ಮಾಡಿರುವ ಎಲ್ಲರೂ ಕೇವಲ ಕಾಲ್ಪನಿಕ ಅಸ್ತಿತ್ವಗಳಾಗಿವೆ. ಅವು ಯಾವುದೂ ವಾಸ್ತವಿಕ ಅಸ್ತಿತ್ವಗಳಲ್ಲ. ಒಂದು ವೇಳೆ ವಾಸ್ತವಿಕ ಅಸ್ತಿತ್ವಗಳಾಗಿದ್ದರೂ ಅವು ದೇವರಲ್ಲ.

"ಅವನನ್ನು ಬಿಟ್ಟು ನೀವು ಯಾರ ದಾಸ್ಯ-ಆರಾಧನೆ ಮಾಡುತ್ತಿ ರುವಿರೋ ಅವರೆಲ್ಲಾ ನೀವೂ ನಿಮ್ಮ ಪೂರ್ವಿಕರೂ ಇರಿಸಿಕೊಂಡಿರುವ ಕೆಲವು ಹೆಸರುಗಳ ವಿನಾ ಇನ್ನೇನೂ ಅಲ್ಲ. ಅಲ್ಲಾಹನು ಅವುಗಳ ಬಗ್ಗೆ ಯಾವ ಪ್ರಮಾಣವನ್ನೂ ಇಳಿಸಿರುವುದಿಲ್ಲ."

(ಪವಿತ್ರ ಕುರ್‌ಆನ್, 12:40)

ಮನುಷ್ಯನನ್ನು ಅಲ್ಲಾಹನು ತನ್ನ ಸೃಷ್ಟಿಗಳಲ್ಲಿಯೇ ಅತ್ಯಂತ ಶ್ರೇಷ್ಠನಾಗಿ ಮಾಡಿದ್ದಾನೆ. ಅವನ ಶಿರವು ಈ ವಿಶ್ವದ ಸೃಷ್ಟಿಕರ್ತ, ಒಡೆಯ ಮತ್ತು ಅಧಿಪತಿಯಾದ ಅಲ್ಲಾಹನ ಹೊರತು ಇನ್ನಾರ ಮುಂದೆಯೂ ಬಾಗಬಾರದು. ಏಕೆಂದರೆ ಮನುಷ್ಯನ ಸಾಷ್ಟಾಂಗಕ್ಕೆ ಅರ್ಹನು ಸೃಷ್ಟಿಕರ್ತನೇ ಹೊರತು ಸೃಷ್ಟಿಗಳಲ್ಲ.

"ಸೂರ್ಯ-ಚಂದ್ರರಿಗೆ ಸಾಷ್ಟಾಂಗವೆರಗ ಬೇಡಿರಿ; ಅವುಗಳನ್ನು ಸೃಷ್ಟಿಸಿದ ಅಲ್ಲಾಹನಿಗೆ ಸಾಷ್ಟಾಂಗವೆರಗಿರಿ." (ಪವಿತ್ರ ಕುರ್‌ಆನ್, 41:37)

ಬಹುದೇವವಿಶ್ವಾಸಿ ಧರ್ಮಗಳಲ್ಲಿ ಭೂಮಿ-ಆಕಾಶಗಳಲ್ಲಿರುವ ಎಲ್ಲ ವಸ್ತುಗಳೂ ದೇವರಾಗಿರುತ್ತದೆ. ಬಹುದೇವವಿಶ್ವಾಸಿಯಾದ ವ್ಯಕ್ತಿಯು ಅವುಗಳ ಮುಂದೆ ನಿಸ್ಸಂಕೋಚವಾಗಿ ಶಿರ ಬಾಗುತ್ತಾನೆ. ಎಲ್ಲಿಯವರೆಗೆಂದರೆ ಸ್ವತಃ ತಾನೇ ನಿರ್ಮಿಸಿದ ಮೂರ್ತಿಗಳ ಮುಂದೆಯೂ ಬಾಗುತ್ತಾನೆ. ಅವನು ಅನೇಕ ಕಾಲ್ಪನಿಕ ದೇವರುಗಳನ್ನು ರಚಿಸಿಕೊಂಡಿದ್ದಾನೆ. ಅವುಗಳ ಹೆಸರು, ಶಕ್ತಿ ಸಾಮರ್ಥ್ಯಗಳು, ಪವಾಡಗಳು, ಜೀವನ ವೃತ್ತಾಂತ, ಅವುಗಳ ರೂಪ-ವಿನ್ಯಾಸ ಎಲ್ಲವನ್ನು ಸ್ವಯಂಕಲ್ಪಿಸಿಕೊಂಡು ಪೂರ್ಣ ಸಂತೃಪ್ತಿಯೊಂದಿಗೆ ಅವುಗಳನ್ನು ಪೂಜಿಸ ತೊಡಗುತ್ತಾನೆ. ಅತ್ಯಂತ ನಿಕೃಷ್ಟ ಮತ್ತು ಕ್ಷುಲ್ಲಕ ವಸ್ತುಗಳನ್ನು ದೇವರೆಂದು ಬಗೆಯುತ್ತಾನೆ. ಸ್ತ್ರೀ-ಪುರುಷರ ಜನನೇಂದ್ರೀಯಗಳನ್ನೂ ಅವನು ಪೂಜಿಸದೆ ಬಿಟ್ಟಿಲ್ಲ. ನಿಜವಾಗಿ ಮನುಷ್ಯನು ಬಹುದೇವವಿಶ್ವಾಸಿಯಾದಾಗ ಅಜ್ಞಾನ, ಮೂಢನಂಬಿಕೆ ಮತ್ತು ನೀಚತೆಯ ಪಾತಾಳಕ್ಕೆ ಇಳಿದುಬಿಡುತ್ತಾನೆ.

"ಅಲ್ಲಾಹನೊಂದಿಗೆ ಸಹಭಾಗಿತ್ವ ಎಸಗುವವನು ಆಕಾಶದಿಂದ ಕೆಳಗೆ ಬಿದ್ದಂತೆ. ಆಗ ಅವನನ್ನು ಒಂದೋ ಪಕ್ಷಿಗಳು ಕಿತ್ತುಕೊಂಡು ಹೋಗುವುವು ಅಥವಾ ಗಾಳಿಯು ಅವನನ್ನು ಒಯ್ದು, ಅವನು ನುಚ್ಚುನೂರಾಗಿ ಬಿಡು ವಂತಹ ಸ್ಥಳಕ್ಕೆ ಅಪ್ಪಳಿಸಿ ಬಿಡುವುದು." (ಪವಿತ್ರ ಕುರ್‌ಆನ್, 22:31)

ಕಾನೂನು ರಚನೆಯ ಅಧಿಕಾರ ಅಲ್ಲಾಹನಿಗೆ ಮಾತ್ರ

ಅಲ್ಲಾಹನೇ ವಿಶ್ವದ ಮತ್ತು ಮನುಷ್ಯನ ಒಡೆಯ ಮತ್ತು ಅಧಿಪತಿಯಾಗಿದ್ದಾನೆ. ಆದ್ದರಿಂದ ಮನುಷ್ಯನಿಗೆ ಆಜ್ಞಾಪಿಸುವ ಮತ್ತು ಅವನಿಗೆ ವಿಧಿ-ನಿಷೇಧಗಳನ್ನು ನಿರ್ಣಯಿಸುವ ಅಧಿಕಾರ ಅಲ್ಲಾಹನಿಗೆ ಮಾತ್ರವಿದೆ. ಅವನ ಹೊರತು ಇನ್ನಾರಿಗೂ ಈ ಅಧಿಕಾರವಿಲ್ಲ.

"ಆಜ್ಞಾಧಿಕಾರವು ಅಲ್ಲಾಹನಿಗೆ ಹೊರತು ಇನ್ನಾರಿಗೂ ಇಲ್ಲ. ಅವನ ಹೊರತು ನೀವು ಯಾರ ದಾಸ್ಯ-ಆರಾಧನೆಯನ್ನೂ ಮಾಡಬಾರದೆಂದು ಅವನ ಕಟ್ಟಪ್ಪಣೆ ಇದೆ." (ಪವಿತ್ರ ಕುರ್‌ಆನ್, 12:40)

ಆರಾಧನೆ ಅಥವಾ ದಾಸ್ಯದ ಕಲ್ಪನೆಯಲ್ಲಿ ಪೂಜೆ ಮತ್ತು ಅನುಸರಣೆ ಎರಡೂ ಸೇರಿದೆ. ಮನುಷ್ಯನು ಅಲ್ಲಾಹನಿಗೇ ಪೂಜೆ ಸಲ್ಲಿಸಬೇಕು ಮತ್ತು ಅವನ ದಾಸ್ಯಾನುಸರಣೆಯನ್ನೇ ಕೈಗೊಳ್ಳಬೇಕು. ದಾಸನಾದವನು ಒಡೆಯನ ಇಚ್ಛೆಯಂತೆ ವರ್ತಿಸಬೇಕು. ಅವನದೇ ಆಜ್ಞೆಯನ್ನು ಅನುಸರಿಸಬೇಕು. ಅದಕ್ಕೆ ವಿರುದ್ಧವಾದ ಯಾರ ಆಜ್ಞೆಯನ್ನೂ ಅನುಸರಿಸ ಬಾರದು. ಅಲ್ಲಾಹನ ಆರಾಧನೆಯ ಅರ್ಥವ್ಯಾಪ್ತಿಯಲ್ಲೇ ಇದೂ ಸೇರಿಕೊಂಡಿದೆ. ಅಲ್ಲಾಹನ ಕಾನೂನಿಗೆ ವಿರುದ್ಧವಾದ ಎಲ್ಲ ಕಾನೂನುಗಳನ್ನೂ ಅವನು ತಪ್ಪೆಂದು ಭಾವಿಸಬೇಕು.

"ಹೇ ಜನರೇ, ನಿಮ್ಮ ಪ್ರಭುವಿನ ಕಡೆಯಿಂದ ಅವತೀರ್ಣಗೊಳಿಸಲ್ಪಟ್ಟಿರುವುದನ್ನೆಲ್ಲ ಅನುಸರಿಸಿರಿ ಮತ್ತು ನಿಮ್ಮ ಪಾಲಕ ಪ್ರಭುವನ್ನು ಬಿಟ್ಟು ಇತರ ಸಂರಕ್ಷಕರನ್ನು ಅನುಸರಿಸ ಬೇಡಿರಿ." (ಪವಿತ್ರ ಕುರ್‌ಆನ್, 7:3)

ಅಲ್ಲಾಹನ ಅನುಸರಣೆಗೆ ವಿರುದ್ಧವಾಗಿ ಇತರ ಕಾನೂನುಗಳನ್ನು ಸರಿಯೆಂದು ಪರಿಗಣಿಸುವುದು ಮತ್ತು ಅವುಗಳನ್ನು ಅನುಸರಿಸುವುದು ದೇವ ಸಹಭಾಗಿತ್ವವಾಗಿದೆ.

"ಇವರ ಬಳಿ, ಇವರಿಗಾಗಿ ಧರ್ಮದ ಸ್ವರೂಪದಲ್ಲಿರುವ ಮತ್ತು ಅಲ್ಲಾಹನು ಅನುಮತಿಸಿಲ್ಲದ ಜೀವನ ವಿಧಾನವೊಂದನ್ನು ನಿಶ್ಚಯಿಸಿಕೊಟ್ಟಂತಹ ದೇವಸಹಭಾಗಿಗಳು ಇದ್ದಾರೆಯೇ?" (ಪವಿತ್ರ ಕುರ್‌ಆನ್, 42:21)

ಭೂಮಿಯ ಎಲ್ಲ ಅನುಗ್ರಹಗಳೂ ಅಲ್ಲಾಹನವು. ಅವುಗಳನ್ನು ಅಲ್ಲಾಹನು ಮನುಷ್ಯನಿಗಾಗಿ ಸೃಷ್ಟಿಸಿದ್ದಾನೆ. ಆ ಅನುಗ್ರಹಗಳ ಬಳಕೆಗೆ ನಿಯಂತ್ರಣ ಹೇರುವ ಅಧಿಕಾರ ಅಲ್ಲಾಹನಿಗೆ ಮಾತ್ರವಿದೆ. ಅವುಗಳಲ್ಲಿ ಯಾವುದು ಮನುಷ್ಯನಿಗೆ ಧರ್ಮಸಮ್ಮತ?, ಯಾವುದು ನಿಷಿದ್ಧ? ಎಂದು ವಿಧಿಸುವ ಅಧಿಕಾರ ಅಲ್ಲಾಹನಿಗೆ ಮಾತ್ರವಿದೆ. ಅವನ

ಹೊರತು ಇತರ ಯಾರಿಗೂ ಅವನ ಮೇಲೆ ಅವುಗಳ ಉಪಯೋಗದ ಬಗ್ಗೆ ನಿಯಂತ್ರಣ ಹೇರುವ ಅಧಿಕಾರವಿಲ್ಲ.

"ಓ ಪೈಗಂಬರರೇ, ಅವರೊಡನೆ ಕೇಳಿರಿ,- ಅಲ್ಲಾಹನು ತನ್ನ ದಾಸರಿಗಾಗಿ, ಹೊರತೆಗೆದಿರುವ ವಸ್ತ್ರ ಭೂಷಣಗಳನ್ನೂ ಶುದ್ಧ ಆಹಾರ ಸಾಮಗ್ರಿಗಳನ್ನೂ ನಿಷಿದ್ಧಗೊಳಿಸಿದವನಾರು?" (ಪವಿತ್ರ ಕುರ್‌ಆನ್, 7:32)

ಸಾವು ಬದುಕುಗಳು ಅಲ್ಲಾಹನ ಕೈಯಲ್ಲಿ

ಅಲ್ಲಾಹನೇ ಸೃಷ್ಟಿಕರ್ತ, ಒಡೆಯ, ಪರಿಪಾಲಕ, ಅಧಿಪತಿ ಮತ್ತು ಆರಾಧ್ಯನಾಗಿದ್ದಾನೆ. ಈ ಗುಣಗಳಲ್ಲಿ ಅವನಿಗೆ ಯಾರೂ ಭಾಗೀದಾರರಿಲ್ಲ. ಆದ್ದರಿಂದ ಸಹಜವಾಗಿಯೇ ಸಾವು ಬದುಕುಗಳೂ ಅವನ ವಶದಲ್ಲೇ ಇರಬೇಕು.

"ಮುಹಮ್ಮದರೇ, ಹೇಳಿರಿ: ಭೂಮಿ ಆಕಾಶಗಳ ಸಾರ್ವಭೌಮನಾಗಿರುವ ಅಲ್ಲಾಹನ ಸಂದೇಶವಾಹಕನಾಗಿರುತ್ತೇನೆ. ಅವನ ಹೊರತು ಆರಾಧ್ಯನಿಲ್ಲ. ಅವನೇ ಜೀವನ ನೀಡುವವನು. ಅವನೇ ಮರಣ ಕೊಡುವವನು." (ಪವಿತ್ರ ಕುರ್‌ಆನ್, 7:158)

ಮರಣದ ಸಮಯವು ನಿಶ್ಚಿತವಿದೆ. ಅದು ಅವನ ಆಜ್ಞೆಯ ಹೊರತು ಬರಲಾರದು.

"ಯಾವ ಜೀವಿಯೂ ಅಲ್ಲಾಹನ ಅನುಮತಿ ಹೊಂದದೆ ಸಾಯಲಾರದು. ಮರಣದ ಸಮಯವಂತು ಬರೆದಿಡಲ್ಪಟ್ಟಿದೆ." (ಪವಿತ್ರ ಕುರ್‌ಆನ್, 3:145)

ಮನುಷ್ಯನು ಅಲ್ಲಾಹನಿಗೆ ವಿದ್ರೋಹವೆಸಗುತ್ತಾನೆ. ವಸ್ತುತಃ ಅವನ ಸಾವು ಬದುಕು ಎರಡೂ ಅವನ ಕೈಯಲ್ಲಿದೆ.

"ನೀವು ಅಲ್ಲಾಹನನ್ನು ಹೇಗೆ ನಿರಾಕರಿಸುತ್ತೀರಿ? ನೀವಾದರೋ ನಿರ್ಜೀವಿಗಳಾಗಿದ್ದಿರಿ. ಅವನು ನಿಮಗೆ ಜೀವವಿತ್ತನು. ಇನ್ನು ಅವನೇ ನಿಮ್ಮ ಪ್ರಾಣ ತೆಗೆಯುವನು ಮತ್ತು ಅವನೇ ನಿಮಗೆ ಪುನರ್ಜೀವನ ನೀಡುವನು. ತರುವಾಯ ನಿಮಗೆ ಆತನೆಡೆಗೇ ಮರಳಿ ಹೋಗಬೇಕಾಗಿದೆ." (ಪವಿತ್ರ ಕುರ್‌ಆನ್, 2:28)

ಏಕದೇವತ್ವದ ಈ ಕಲ್ಪನೆಯು ಮನಸ್ಸಿನಲ್ಲಿ ಬೇರೂರಿದರೆ ಮನುಷ್ಯನ ಶಕ್ತಿಯು ಅಜೇಯವಾಗುತ್ತದೆ. ಅವನು ಕೇವಲ ಅಲ್ಲಾಹನನ್ನು ಭಯಪಡುತ್ತಾನೆ. ಅವನ ಹೊರತು ಇತರ ಯಾರನ್ನೂ ಭಯಪಡುವುದಿಲ್ಲ.

"ನಿಮ್ಮ ವಿರುದ್ಧ ದೊಡ್ಡ ಸೈನ್ಯವೊಂದು ಜಮೆಯಾಗಿದೆ, ಅದನ್ನು ಭಯಪಡಿರಿ ಎಂದು ಜನರು ಅವರೊಡನೆ ಹೇಳಿದರು. ಇದನ್ನು ಕೇಳಿದಾಗ ಅವರ ಸತ್ಯವಿಶ್ವಾಸ ಇನ್ನಷ್ಟು ವರ್ಧಿಸಿತು. ನಮಗೆ ಅಲ್ಲಾಹ್ ಸಾಕು ಮತ್ತು ಅವನೇ ಅತ್ಯುತ್ತಮ ಕಾರ್ಯಸಾಧಕನು ಎಂದು ಅವರು ಉತ್ತರವಿತ್ತರು." (ಪವಿತ್ರ ಕುರ್‌ಆನ್, 3:173)

ತದ್ವಿರುದ್ಧವಾಗಿ ಬಹುದೇವವಿಶ್ವಾಸವು ಮನುಷ್ಯನನ್ನು ಹೇಡಿಯಾಗಿ ಮಾಡುತ್ತದೆ. ಬಹುದೇವ ವಿಶ್ವಾಸಿಯು ಲೋಕದ ಎಲ್ಲ ಚಿಕ್ಕ, ದೊಡ್ಡ ಕಾಲ್ಪನಿಕ ಮತ್ತು ಭ್ರಾಮಕ ವಸ್ತುಗಳನ್ನೂ ಹೆದರುತ್ತಾನೆ. ಎಲ್ಲೆಡೆ ಅವನಿಗೆ ಮರಣವು ನರ್ತಿಸುತ್ತಿರುವಂತೆ ಕಾಣುತ್ತದೆ.

"ನಾವು ಸತ್ಯನಿಷೇಧಿಗಳ ಹೃದಯಗಳಲ್ಲಿ ಶೀಘ್ರದಲ್ಲೇ ಭೀತಿ ಹುಟ್ಟಿಸಲಿರುವೆವು. ಏಕೆಂದರೆ ತನ್ನ ಭಾಗೀದಾರರೆಂಬ ಬಗ್ಗೆ ಅಲ್ಲಾಹನೇನೂ ಸಾಕ್ಷ್ಯಾಧಾರ ನೀಡಿರದಂತಹವರನ್ನು ಅವರು ಆತನ ದೇವತ್ವದಲ್ಲಿ ಭಾಗೀದಾರರಾಗಿ ಮಾಡಿದ್ದಾರೆ."

(ಪವಿತ್ರ ಕುರ್‌ಆನ್, 3:151)

ಲಾಭನಷ್ಟಗಳು ಅಲ್ಲಾಹನ ಕೈಯಲ್ಲಿ

ಅಲ್ಲಾಹನೇ ಸೃಷ್ಟಿಕರ್ತನೂ ಒಡೆಯನೂ ಅಧಿಪತಿಯೂ ಆರಾಧ್ಯನೂ ಆಗಿರುವುದರಿಂದ ಮನುಷ್ಯನ ಲಾಭ-ನಷ್ಟಗಳೆಲ್ಲವೂ ಅವನ ಕೈಯಲ್ಲೇ ಇರಬೇಕಾದುದು ಅನಿವಾರ್ಯ.

"ಇವರೊಡನೆ ಹೇಳಿರಿ- ನೀವು ಅಲ್ಲಾಹನನ್ನು ಬಿಟ್ಟು ನಿಮಗೆ ನಷ್ಟವನ್ನುಂಟು ಮಾಡಲಿಕ್ಕೂ ಲಾಭವನ್ನುಂಟು ಮಾಡಲಿಕ್ಕೂ ಅಧಿಕಾರವಿಲ್ಲದವರನ್ನು ಆರಾಧಿಸುತ್ತೀರಾ?"

(ಪವಿತ್ರ ಕುರ್‌ಆನ್, 5:76)

ಈ ಮಿಥ್ಯ ಆರಾಧಕರಿಗೆ ತಮಗೇ ಲಾಭ-ನಷ್ಟಗಳನ್ನುಂಟು ಮಾಡುವ ಸಾಮರ್ಥ್ಯವೂ ಇಲ್ಲ.

"ಜನರು ಅವನನ್ನು ಬಿಟ್ಟು, ಯಾವ ವಸ್ತುವನ್ನೂ ಸೃಷ್ಟಿಸದ ಮತ್ತು ಸ್ವತಃ ಸೃಷ್ಟಿಸಲ್ಪಟ್ಟಂತಹ ವಸ್ತುಗಳನ್ನು ಆರಾಧ್ಯರನ್ನಾಗಿ ಮಾಡಿಕೊಂಡರು. ಅವು ಸ್ವತಃ ತಮಗೂ ಯಾವುದೇ ಲಾಭ ಅಥವಾ ಹಾನಿಯನ್ನುಂಟು ಮಾಡುವ ಅಧಿಕಾರ ಹೊಂದಿಲ್ಲ. ಅವು ಕೊಲ್ಲಲಾರವು, ಜೀವಂತಗೊಳಿಸಲಾರವು ಮತ್ತು ಸತ್ತವನನ್ನು ಪುನಃ ಎಬ್ಬಿಸಲಾರವು."

(ಪವಿತ್ರ ಕುರ್‌ಆನ್, 25:3)

ಪ್ರವಾದಿಗಳಿಗಿಂತ ಅಲ್ಲಾಹನ ಸಾಮಿಪ್ಯ ಗಳಿಸಿದವರು ಇನ್ನಾರಿರಬಹುದು? ಆದರೆ ಅವರು ಕೂಡಾ ಯಾರಿಗೂ ಲಾಭ-ನಷ್ಟಗಳನ್ನುಂಟು ಮಾಡಲು ಶಕ್ತರಲ್ಲ. ಪ್ರವಾದಿಗಳ ನಾಯಕರಾದ ಹ.ಮುಹಮ್ಮದ್(ಸ) ಅವರ ಬಾಯಿಯಿಂದ ಅಲ್ಲಾಹನು ಹೀಗೆ ಹೇಳಿಸಿರುವನು-

"ಹೇಳಿರಿ- ನಿಮಗೆ ಯಾವುದೇ ಹಾನಿ ಮಾಡಲಿಕ್ಕಾಗಲಿ, ಯಾವುದೇ ಲಾಭವನ್ನುಂಟು ಮಾಡಲಿಕ್ಕಾಗಲಿ ನನಗೆ ಅಧಿಕಾರವಿಲ್ಲ." (ಪವಿತ್ರ ಕುರ್‌ಆನ್, 72:21)

ಸ್ವತಃ ತಮ್ಮ ಲಾಭ-ನಷ್ಟಗಳೂ ಅವರ ಕೈಯಲ್ಲಿಲ್ಲ.

"ಓ ಪೈಗಂಬರರೇ, ಇವರೊಡನೆ ಹೀಗೆ ಹೇಳಿರಿ: ನನ್ನ ಸ್ವಂತ ಹಿತಾಹಿತಗಳ ಅಧಿಕಾರ ನನಗಿಲ್ಲ. ಅಲ್ಲಾಹನು ಯಾವುದನ್ನು ಇಚ್ಛಿಸುತ್ತಾನೋ ಅದು ಆಗುತ್ತದೆ."

(ಪವಿತ್ರ ಕುರ್‌ಆನ್, 7:188)

ಅಲ್ಲಾಹನು ಸಂಕಷ್ಟ ನೀಡಿದರೆ ಇತರ ಯಾರೂ ಅದನ್ನು ನೀಗಿಸಲಾರರು. ಅಲ್ಲಾಹನು ಯಾವುದಾದರೂ ಅನುಗ್ರಹ ದಯಪಾಲಿಸಿದರೆ ಯಾರೂ ಅದನ್ನು ತಡೆಯಲಾರರು.

"ಅಲ್ಲಾಹನು ನಿಮ್ಮನ್ನು ಯಾವುದಾದರೂ ಕಷ್ಟಕ್ಕೆ ಗುರಿಪಡಿಸಿದರೆ, ಸ್ವತಃ ಅವನ ಹೊರತು ಆ ಕಷ್ಟವನ್ನು ದೂರೀಕರಿಸುವವನು ಇನ್ನಾರೂ ಇಲ್ಲ ಮತ್ತು ಅವನು ನಿಮಗೆ ಹಿತವನ್ನು ಬಯಸಿದರೆ ಅವನ ಅನುಗ್ರಹವನ್ನು ತಡೆಯುವವನೂ ಯಾರೂ ಇಲ್ಲ."

(ಪವಿತ್ರ ಕುರ್‌ಆನ್, 10:107)

ಅಲ್ಲಾಹನ ಹಿಡಿತದಿಂದ ರಕ್ಷಿಸಬಲ್ಲವರು ಯಾರೂ ಇಲ್ಲ. ಅಂತಿಮ ಪ್ರವಾದಿ ಮುಹಮ್ಮದ್(ಸ) ಅವರಿಂದ ಹೀಗೆ ಹೇಳಿಸಲಾಗಿದೆ-

"ಹೇಳಿರಿ- ನನ್ನನ್ನು ಅಲ್ಲಾಹನ ಹಿಡಿತದಿಂದ ಯಾರೂ ರಕ್ಷಿಸಲಾರರು ಮತ್ತು ನನಗೆ ಅವನ ಸನ್ನಿಧಿಯ ಹೊರತು ಬೇರೆಲ್ಲೂ ಅಭಯಾ ಶ್ರಯವೂ ಸಿಗಲಾರದು."

(ಪವಿತ್ರ ಕುರ್‌ಆನ್, 72:22)

ಪ್ರವಾದಿ(ಸ) ಹೀಗೆ ಹೇಳಿರುವುದಾಗಿ ತಿರ್ಮಿದಿ ಹದೀಸ್ ಗ್ರಂಥವು ವರದಿ ಮಾಡಿದೆ:

"ಬೇಡುವಾಗ ಅಲ್ಲಾಹನಲ್ಲಿ ಬೇಡಿರಿ. ಸಹಾಯ ಯಾಚಿಸುವಾಗ ಅಲ್ಲಾಹನಲ್ಲಿ ಯಾಚಿಸಿರಿ. ಎಲ್ಲರೂ ಸೇರಿ ನಿಮಗೇನಾದರೂ ಲಾಭ ಉಂಟು ಮಾಡ ಬಯಸಿದರೆ ಅಲ್ಲಾಹನು ನಿಮಗಾಗಿ ನಿರ್ಣಯಿಸಿದ ಲಾಭಕ್ಕಿಂತ ಹೆಚ್ಚಿನದನ್ನು ಉಂಟು ಮಾಡಲಾರರು. ಎಲ್ಲರೂ ಸೇರಿ ನಿಮಗೇನಾದರೂ ಹಾನಿ ಮಾಡಬಯಸಿದರೆ ಅಲ್ಲಾಹನು ನಿಮಗಾಗಿ ನಿರ್ಣಯಿಸಿದ ಹಾನಿಯ ಹೊರತು ಹೆಚ್ಚಿನದನ್ನು ಉಂಟು ಮಾಡಲಾರರು."

ಆದ್ದರಿಂದ ಸತ್ಯವಿಶ್ವಾಸಿಯು ಕೇವಲ ಅಲ್ಲಾಹನನ್ನು ಭಯ ಪಡಬೇಕು. ಅವನ ಹೊರತು ಇತರ ಯಾರನ್ನೂ ಭಯಪಡಬಾರದು.

"ಸುಮ್ಮನೆ ತನ್ನ ಮಿತ್ರರ ಬಗ್ಗೆ ಹೆದರಿಸುತ್ತಿದ್ದವನು ಶೈತಾನನಲ್ಲದೆ ಬೇರಾರೂ ಅಲ್ಲವೆಂದು ನಿಮಗೀಗ ತಿಳಿಯಿತು. ಆದುದರಿಂದ ಇನ್ನು ಮುಂದೆ ನೀವು ಮಾನವರನ್ನು ಭಯಪಡಬಾರದು. ನೀವು ವಾಸ್ತವದಲ್ಲಿ ಸತ್ಯವಿಶ್ವಾಸಿಗಳಾಗಿದ್ದರೆ ನನ್ನನ್ನೇ ಭಯಪಡಬೇಕು."

(ಪವಿತ್ರ ಕುರ್‌ಆನ್, 3:175)

ಅರ್ಥಾತ್ ಸತ್ಯವಿಶ್ವಾಸಿಯು ಅಲ್ಲಾಹನನ್ನು ಭಯಪಡುತ್ತಾನೆ. ಮತ್ತಾರನ್ನೂ ಭಯಪಡುವುದಿಲ್ಲ. ಆದರೆ ಶೈತಾನನ ಬಲೆಗೆ ಬಿದ್ದು ಬಹುದೇವವಿಶ್ವಾಸವನ್ನು ಕೈಗೊಂಡವನು ಪ್ರತಿಯೊಂದು ವಸ್ತುವನ್ನೂ ಭಯಪಡುತ್ತಾನೆ. ಸದಾ ಭಯಗ್ರಸ್ತನಾಗಿರುತ್ತಾರೆ.

ಅಲ್ಲಾಹನು ಮಾತ್ರ ಸರ್ವಜ್ಞ

ಅಲ್ಲಾಹನೇ ಜಗತ್ತಿನ ಎಲ್ಲ ವಸ್ತುಗಳನ್ನು ಸೃಷ್ಟಿಸಿರುವನು. ಆದ್ದರಿಂದ ಅವನು ಪ್ರತಿಯೊಂದು ವಸ್ತುವನ್ನೂ ಬಲ್ಲವನಾಗಿದ್ದಾನೆ.

"ನೀವು ಮೆಲುದನಿಯಿಂದ ಮಾತನಾಡಿದರೂ ಏರಿದ ಧ್ವನಿಯಲ್ಲಿ ಮಾತನಾಡಿದರೂ (ಅಲ್ಲಾಹನ ಮಟ್ಟಿಗೆ ಅದೆಲ್ಲವೂ ಸಮಾನವಾಗಿದೆ) ಅವನಂತು ಹೃದ್ಗತಗಳನ್ನು ಸಹ ಬಲ್ಲವನಾಗಿರುತ್ತಾನೆ. ಸೃಷ್ಟಿಸಿದವನು ಅರಿಯದಿರುವನೇ? ವಸ್ತುತಃ ಅವನು ಅತ್ಯಂತ ಸೂಕ್ಷ್ಮಜ್ಞನೂ ವಿವರಪೂರ್ಣನೂ ಆಗಿರುತ್ತಾನೆ." (ಪವಿತ್ರ ಕುರ್‌ಆನ್, 67:13-14)

ವಿಶ್ವದ ಪ್ರತಿಯೊಂದು ವಸ್ತುವಿನ ಮೇಲೆ ಅಲ್ಲಾಹನ ಆಧಿಪತ್ಯವಿದೆ. ಆದ್ದರಿಂದ ಯಾವ ವಸ್ತುವೂ ಅವನ ಜ್ಞಾನದಿಂದ ಹೊರತಾಗಿಲ್ಲ. ಅವನ ಪಾಲಿಗೆ ಯಾವುದೂ ರಹಸ್ಯವಲ್ಲ. ಅವನು ನಿದ್ರೆ ಹೋಗುವುದಿಲ್ಲ. ಅವನು ದಣಿಯುವುದಿಲ್ಲ. ಆದ್ದರಿಂದ ಅವನ ಆಡಳಿತ ವ್ಯವಸ್ಥೆಯಲ್ಲಿ ಯಾವ ಕುಂದೂ ಉಂಟಾಗುವುದಿಲ್ಲ ಮತ್ತು ಯಾವ ವಸ್ತುವೂ ಅವನ ದೃಷ್ಟಿಯಿಂದ ಮರೆಯಾಗಿರುವುದಿಲ್ಲ.

"ಅಲ್ಲಾಹನು ಚಿರಂತನು, ಸ್ವಯಂಜೀವಂತನು. ಅಖಿಲ ಪ್ರಪಂಚದ ನಿಯಂತ್ರಕನಾದ ಆತನ ಹೊರತು ಆರಾಧ್ಯನಾರೂ ಇಲ್ಲ. ಅವನಿಗೆ ತೂಕಡಿಕೆಯಾಗಲೀ ನಿದ್ರೆಯಾಗಲೀ ಬಾಧಿಸುವುದಿಲ್ಲ. ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿ ಇರುವುದೆಲ್ಲವೂ ಆತನದೇ. ಆತನ ಸನ್ನಿಧಿಯಲ್ಲಿ ಆತನ ಅಪ್ಪಣೆಯಿಲ್ಲದೆ ಶಿಫಾರಸು ಮಾಡತಕ್ಕವನಾರಿದ್ದಾನೆ? ದಾಸರ ಮುಂದಿರುವುದನ್ನೂ ಆತನು ಬಲ್ಲನು. ಅವರಿಂದ ಮರೆಯಾಗಿರುವುದನ್ನೂ ಆತನು ಬಲ್ಲನು. ಆತನು ಸ್ವತಃ ತಿಳಿಯಗೊಡಿಸುವ ಹೊರತು ಆತನ ಜ್ಞಾನ ಭಂಡಾರದಿಂದ ಯಾವ ವಿಷಯವನ್ನೂ ಅವರು ತಿಳಿಯಲಾರರು. ಅವನ ಅಧಿಕಾರವು ಆಕಾಶಗಳನ್ನೂ ಭೂಮಿಯನ್ನೂ ವ್ಯಾಪಿಸಿದೆ. ಅವುಗಳ ಸಂರಕ್ಷಣೆಯು ಆತನಿಗೆ ದಣಿಸುವಂಥ ಕಾರ್ಯವಲ್ಲ. ಅವನು ಏಕೈಕ ಮಹೋನ್ನತನೂ ಸರ್ವ ಶ್ರೇಷ್ಠನೂ ಆಗಿರುತ್ತಾನೆ." (ಪವಿತ್ರ ಕುರ್‌ಆನ್, 2:255)

ಅಲ್ಲಾಹನೇ ಎಲ್ಲರ ಪಾಲನೆ-ಪೋಷಣೆಯನ್ನು ಮಾಡುತ್ತಿದ್ದಾನೆ. ಎಲ್ಲರ ಎಲ್ಲ ಬೇಡಿಕೆಗಳನ್ನು ಅವನೇ ಪೂರೈಸುತ್ತಾನೆ. ಆದ್ದರಿಂದ ಅವನು ಎಲ್ಲವನ್ನೂ ಬಲ್ಲವನಾಗಿದ್ದಾನೆ.

"ಭೂಮಿಯಲ್ಲಿ ಚಲಿಸುವ ಯಾವ ಸಜೀವಿಯ ಜೀವನಾಧಾರವೂ ಅಲ್ಲಾಹನ ಹೊಣೆಯಲ್ಲಿಲ್ಲದೆ ಇಲ್ಲ. ಅದು ಎಲ್ಲಿ ವಾಸಿಸುತ್ತದೆ ಮತ್ತು ಎಲ್ಲಿ ಒಪ್ಪಿಸಲ್ಪಡುತ್ತದೆ ಎಂಬುದು ಅವನಿಗೆ ತಿಳಿಯದೆ ಇಲ್ಲ. ಎಲ್ಲವೂ ಒಂದು ಸುಸ್ಪಷ್ಟ ಗ್ರಂಥದಲ್ಲಿ ಲಿಖಿತಗೊಂಡಿದೆ." (ಪವಿತ್ರ ಕುರ್‌ಆನ್, 11:6)

ಮನುಷ್ಯನ ಮತ್ತು ಇತರೆಲ್ಲ ಜೀವಿಗಳ ಜ್ಞಾನವು ಬಹಳ ಸೀಮಿತವಾಗಿದೆ. ವಿಶ್ವದ ಅಸಂಖ್ಯ ವಸ್ತುಗಳು ಅವರ ಇಂದ್ರಿಯ ಮತ್ತು ಜ್ಞಾನದ ಪರಿಧಿಯಿಂದ ಹೊರತಾಗಿವೆ. ಇದೆಲ್ಲ ಅವರ ಪಾಲಿಗೆ ಪರೋಕ್ಷ ಅಥವಾ ಅದೃಶ್ಯ ವಸ್ತುಗಳಾಗಿವೆ. ಅವುಗಳನ್ನು ಬಲ್ಲವನು ಕೇವಲ ಅಲ್ಲಾಹನಾಗಿದ್ದಾನೆ.

"ಪರೋಕ್ಷದ ಬೀಗದ ಕೈಗಳು ಅವನ ವಶದಲ್ಲೇ ಇವೆ. ಅವುಗಳನ್ನು ಅವನ ಹೊರತು ಇನ್ನಾರೂ ಅರಿಯರು. ನೆಲ ಜಲಗಳಲ್ಲಿರುವುದೆಲ್ಲವನ್ನೂ ಅವನು ತಿಳಿದಿರುತ್ತಾನೆ. ಮರದಿಂದ ಉದುರುವ ಒಂದು ಎಲೆಯ ಕುರಿತೂ ಭೂಮಿಯ ಅಂಧಕಾರಗಳಲ್ಲಿ ಹುದುಗಿರುವ ಒಂದು ಧಾನ್ಯದ ಬಗೆಗೂ ಅವನಿಗೆ ತಿಳಿಯದೆ ಇಲ್ಲ. ಒಣ-ಹಸಿಗಳೆಲ್ಲವೂ ಒಂದು ತೆರೆದ ಗ್ರಂಥದಲ್ಲಿ ಲಿಖಿತಗೊಂಡಿದೆ." (ಪವಿತ್ರ ಕುರ್‌ಆನ್, 6:59)

ಮನುಷ್ಯರ ಪೈಕಿ ಅಲ್ಲಾಹನ ಅತ್ಯಂತ ಆಪ್ತ ಮತ್ತು ಶ್ರೇಷ್ಠ ದಾಸರಾದ ಪ್ರವಾದಿಗಳಿಗೂ ಪರೋಕ್ಷಜ್ಞಾನವಿಲ್ಲ. ಪ್ರವಾದಿಗಳ ನಾಯಕರಾದ ಮುಹಮ್ಮದ್(ಸ) ಅವರ ಬಾಯಿಯಿಂದ ಅಲ್ಲಾಹನು ಈ ರೀತಿ ಹೇಳಿಸಿರುವನು;

"ಓ ಪೈಗಂಬರರೇ, ಇವರೊಡನೆ ಹೇಳಿರಿ- ನನ್ನಲ್ಲಿ ಅಲ್ಲಾಹನ ಖಜಾನೆಗಳಿವೆ ಯೆಂದು ನಾನು ನಿಮ್ಮೊಡನೆ ಹೇಳುವುದಿಲ್ಲ. ನಾನು ಪರೋಕ್ಷಜ್ಞಾನಿಯೂ ಅಲ್ಲ. ನಾನು ದೇವಚರನೆಂದೂ ಹೇಳುವುದಿಲ್ಲ." (ಪವಿತ್ರ ಕುರ್‌ಆನ್, 6:50)

"ನನಗೆ 'ಪರೋಕ್ಷಜ್ಞಾನ'ವಿರುತ್ತಿದ್ದರೆ ನಾನು ಅನೇಕ ಲಾಭಗಳನ್ನು ನನಗಾಗಿ ಒದಗಿಸಿಕೊಳ್ಳುತ್ತಿದ್ದೆ ಮತ್ತು ನನಗೆಂದೂ ಹಾನಿ ತಟ್ಟುತ್ತಿರಲಿಲ್ಲ."

(ಪವಿತ್ರ ಕುರ್‌ಆನ್, 7:188)

ಪರೋಕ್ಷ ಜ್ಞಾನಕ್ಕೆ ಸಂಬಂಧಪಟ್ಟ ಕೆಲವು ಮುಖ್ಯ ವಿಷಯಗಳನ್ನು ಪವಿತ್ರ ಕುರ್‌ಆನಿನಲ್ಲಿ ಈ ರೀತಿ ಪ್ರಸ್ತಾಪಿಸಲಾಗಿದೆ-

"ಆ ಘಳಿಗೆಯ ಜ್ಞಾನ ಅಲ್ಲಾಹನ ಬಳಿಯಲ್ಲೇ ಇದೆ. ಅವನೇ ಮಳೆ ಸುರಿಸುತ್ತಾನೆ. ತಾಯಂದಿರ ಗರ್ಭಗಳಲ್ಲಿ ಬೆಳೆಯುತ್ತಿರುವುದೇನೆಂಬುದನ್ನು ಅವನೇ ಬಲ್ಲನು. ಯಾವ ಜೀವಿಯೂ ತಾನು ನಾಳೆ ಏನನ್ನು ಗಳಿಸುವೆನು ಎಂಬುದನ್ನು ತಿಳಿದಿರುವುದಿಲ್ಲ. ತನಗೆ ಯಾವ ಭೂಭಾಗದಲ್ಲಿ ಮರಣ ಬರುವುದೆಂಬ ಅರಿವೂ ಯಾರಿಗೂ ಇಲ್ಲ. ನಿಶ್ಚಯವಾಗಿಯೂ ಅಲ್ಲಾಹನೇ ಸರ್ವಜ್ಞನೂ ವಿವರ ಪೂರ್ಣನೂ ಆಗಿರುತ್ತಾನೆ."

(ಪವಿತ್ರ ಕುರ್‌ಆನ್, 31:34)

ಬುಖಾರಿಯೆಂಬ ಅತ್ಯಂತ ಅಧಿಕೃತ ಹದೀಸ್ (ಪ್ರವಾದಿ ವಚನ) ಗ್ರಂಥದಲ್ಲಿ ಪ್ರವಾದಿ ಮುಹಮ್ಮದ್(ಸ) ಹೀಗೆ ಹೇಳಿರುವುದಾಗಿ ಉಲ್ಲೇಖಿಸಲ್ಪಟ್ಟಿದೆ-

'ಅಲ್ಲಾಹನಾಣೆ! ನನಗೆ ತಿಳಿದಿಲ್ಲ. ಅಲ್ಲಾಹನಾಣೆ! ನನಗೆ ತಿಳಿದಿಲ್ಲ. ನಾನು ಅಲ್ಲಾಹನ ಸಂದೇಶವಾಹಕನಾಗಿರುತ್ತಾ ನನ್ನ ಮತ್ತು ನಿಮ್ಮ ಜತೆ ಯಾವ ರೀತಿ ವ್ಯವಹರಿಸ ಲಾಗುವುದೆಂದು.'

ಬಹುದೇವವಿಶ್ವಾಸಿ ಮೂಢನಂಬಿಕೆಯ ಜನರು ತಮ್ಮ ಅದೃಷ್ಟ ಮತ್ತು ಭವಿಷ್ಯ ಅಥವಾ ಬೇರೆ ಮಾತುಗಳಲ್ಲಿ ಅದೃಶ್ಯದ ಜ್ಞಾನ ಜ್ಯೋತಿಷಿಗಳಿಗೆ, ಸಾಧು-ಸಂತರಿಗೆ, ಪೀರ್-ಫಕೀರ್‌ಗಳಿಗೆ ಇದೆಯೆಂಬ ಭ್ರಮೆಯಲ್ಲಿರುತ್ತಾರೆ. ವಾಸ್ತವದಲ್ಲಿ ಅದೃಶ್ಯದ ಜ್ಞಾನವು ಕೇವಲ ಅಲ್ಲಾಹನಿಗಿದೆ. ಆದರೆ ಅವನು ತನ್ನ ಜ್ಞಾನ ಭಂಡಾರದಿಂದ ಎಷ್ಟು ಬೇಕೋ ಅಷ್ಟನ್ನು ತನ್ನ ಪ್ರವಾದಿಗಳಿಗೆ ದಯಪಾಲಿಸುತ್ತಾನೆ.

"ಅವನು ಅದೃಶ್ಯಜ್ಞಾನಿಯಾಗಿದ್ದಾನೆ. ತನ್ನ ಅದೃಶ್ಯ ಜ್ಞಾನವನ್ನು ಅವನು ಯಾರಿಗೂ ತಿಳಿಯಪಡಿಸುವುದಿಲ್ಲ- (ಅದೃಶ್ಯಜ್ಞಾನವನ್ನು ನೀಡಲಿಕ್ಕಾಗಿ) ತಾನು ಮೆಚ್ಚಿಕೊಂಡ, ತನ್ನ ಸಂದೇಶವಾಹಕನ ಹೊರತು." (ಪವಿತ್ರ ಕುರ್‌ಆನ್, 72:26-27)

ಆದರೆ ಅದೃಶ್ಯದ ಸಂಪೂರ್ಣ ಜ್ಞಾನವು ಅಲ್ಲಾಹನ ಹೊರತು ಯಾರಿಗೂ ಸಿಕ್ಕಿಲ್ಲ.

"ಇವರೊಡನೆ ಹೇಳಿರಿ: ಭೂಮಿ-ಆಕಾಶಗಳಲ್ಲಿ, ಪರೋಕ್ಷದ ಜ್ಞಾನವುಳ್ಳವರು ಅಲ್ಲಾಹನ ಹೊರತು ಯಾರೂ ಇಲ್ಲ ಮತ್ತು ಅವರಿಗಂತೂ (ಆ ನಿಮ್ಮ ಆರಾಧ್ಯರಿಗಂತೂ) ಅವರು ಯಾವಾಗ ಎಬ್ಬಿಸಲ್ಪಡುವರೆಂಬುದೂ ತಿಳಿದಿಲ್ಲ." (ಪವಿತ್ರ ಕುರ್‌ಆನ್, 27:65)

ಅಲ್ಲಾಹನಿಗೆ ಸರಿ ಸಮಾನರು ಯಾರೂ ಇಲ್ಲ

ಅಲ್ಲಾಹನು ಮಾತ್ರ ಸೃಷ್ಟಿಕರ್ತನಾಗಿದ್ದಾನೆ. ಉಳಿದೆಲ್ಲವೂ ಅವನ ಸೃಷ್ಟಿಗಳಾಗಿವೆ. ಅಲ್ಲಾಹನು ಮಾತ್ರ ಒಡೆಯನಾಗಿದ್ದಾನೆ. ಉಳಿದೆಲ್ಲವೂ ಅವನ ಒಡೆತನಕ್ಕೆ ಸೇರಿದುದಾಗಿದೆ. ಅಲ್ಲಾಹನು ಮಾತ್ರ ಪರಿಪಾಲಕನಾಗಿದ್ದಾನೆ. ಉಳಿದೆಲ್ಲರೂ ಅವನ ಪೋಷಿತರಾಗಿದ್ದಾರೆ. ಅಲ್ಲಾಹನು ಮಾತ್ರ ಬೇಡಿಕೆಗಳನ್ನು ಈಡೇರಿಸುವವನಾಗಿದ್ದಾನೆ. ಉಳಿದೆಲ್ಲರೂ ಅವನ ಅಪೇಕ್ಷಿತರಾಗಿದ್ದಾರೆ. ಅಲ್ಲಾಹನು ಮಾತ್ರ ಎಲ್ಲರ ದೇವನಾಗಿದ್ದಾನೆ. ಎಲ್ಲರೂ ಅವನ ದಾಸರಾಗಿದ್ದಾರೆ. ಅಲ್ಲಾಹನು ಮಾತ್ರ ಸರ್ವಜ್ಞಾನಿಯಾಗಿದ್ದಾನೆ. ಇತರರ ಜ್ಞಾನವು ಬಹಳ ಸೀಮಿತವಾಗಿದೆ. ಆದ್ದರಿಂದ ಈ ವಿಶ್ವದಲ್ಲಿ ಯಾರೂ ಅಲ್ಲಾಹನಿಗೆ ಸರಿಸಮಾನರಾಗುವುದು ಸಾಧ್ಯವಲ್ಲ.

"ಮತ್ತು ಅವನಿಗೆ ಸರಿಸಮಾನರು ಯಾರೂ ಇಲ್ಲ." **(ಪವಿತ್ರ ಕುರ್‌ಆನ್, 112:4)**

ಅಲ್ಲಾಹನಂತೆ ಯಾರೂ ಇಲ್ಲ. ಅವನು ತನ್ನ ಮಹಿಮೆಯಲ್ಲಿ ಅಪ್ರತಿಮನಾಗಿರುವನು.

"ವಿಶ್ವದ ಯಾವ ವಸ್ತುವೂ ಅವನನ್ನು ಹೋಲುವುದಿಲ್ಲ."

(ಪವಿತ್ರ ಕುರ್‌ಆನ್, 42:11)

"ಹೇಳಿರಿ! ಅವನು ಅಲ್ಲಾಹನು ಏಕೈಕನು." **(ಪವಿತ್ರ ಕುರ್‌ಆನ್, 112:1)**

ಬಹುದೇವ ವಿಶ್ವಾಸದ ಮೂಲಭೂತ ದೌರ್ಬಲ್ಯ ಏನೆಂದರೆ ಅದು ದೇವನನ್ನು ಸೃಷ್ಟಿಗಳಂತೆ ಮತ್ತು ಸೃಷ್ಟಿಗಳನ್ನು ದೇವನಂತೆ ಭಾವಿಸುತ್ತದೆ. ಇದರ ಪರಿಣಾಮದಿಂದ ಸೃಷ್ಟಿಗಳಲ್ಲಿ ದೇವನ ಗುಣಗಳನ್ನು ಮತ್ತು ದೇವನಲ್ಲಿ ಸೃಷ್ಟಿಗಳ ಗುಣವನ್ನು ಆರೋಪಿಸಲಾಗುತ್ತದೆ. ಸೃಷ್ಟಿಗಳಂತೆ ದೇವರಿಗೂ ಕೈಕಾಲು, ಕಣ್ಣು, ಕಿವಿ, ಮೂಗು, ಬಾಯಿ, ತಲೆ, ಹೊಟ್ಟೆ ಮತ್ತು ಲಿಂಗ ಎಲ್ಲವನ್ನು ಕಲ್ಪಿಸಲಾಗುತ್ತದೆ. ಕೆಲವೊಮ್ಮೆ ಅವರಿಗೆ ಅನೇಕ ಕೈಕಾಲು, ತಲೆ ಇತ್ಯಾದಿಗಳಿರುತ್ತವೆ. ಅವರ ಲೈಂಗಿಕ ಆಸಕ್ತಿಯು ಮನುಷ್ಯರಿಗಿಂತ ಬಹಳ ಹೆಚ್ಚಾಗಿರುತ್ತದೆ. ಅವರೂ ಮನುಷ್ಯರಂತೆ ದ್ವೇಷ, ಅಸೂಯೆ, ಕ್ರೋಧಗಳನ್ನು ಹೊಂದಿರುತ್ತಾರೆ. ಪರಸ್ಪರ ಜಗಳಾಡುತ್ತಾರೆ. ಪರಸ್ಪರರನ್ನು ವಂಚಿಸುತ್ತಾರೆ. ಜಯಿಸುತ್ತಾರೆ ಮತ್ತು ಸೋಲುತ್ತಾರೆ. ಅವರಿಗೆ ಮದ್ಯಪಾನದ ಒಲವೂ ಇರುತ್ತದೆ. ಕುಡಿದು ಸ್ತಿಮಿತವನ್ನು ಕಳಕೊಳ್ಳುತ್ತಾರೆ.

ಇದೇ ರೀತಿ ಮನುಷ್ಯರಲ್ಲಿ ದೈವಿಕ ಶಕ್ತಿ ಸಾಮರ್ಥ್ಯ, ದೈವಿಕ ಜ್ಞಾನ ಮತ್ತು ದೈವಿಕ ಗುಣಗಳನ್ನು ಕಲ್ಪಿಸಲಾಗುತ್ತದೆ. ವಸ್ತುತಃ ದೇವನು ಸೃಷ್ಟಿಕರ್ತನೂ ಇತರೆಲ್ಲರೂ ಸೃಷ್ಟಿಗಳೂ ಆಗಿರುವರು. ಸೃಷ್ಟಿಕರ್ತನನ್ನು ಸೃಷ್ಟಿಗಳಿಗೆ ಮತ್ತು ಸೃಷ್ಟಿಗಳನ್ನು ಸೃಷ್ಟಿಕರ್ತನಿಗೆ ಎಂದೂ ಹೋಲಿಸಲಾಗದು.

"ಹೀಗಿರುವಾಗ ಸೃಷ್ಟಿಸುವಾತನೂ, ಏನನ್ನೂ ಸೃಷ್ಟಿಸದವರೂ ಸಮಾನರೇ? ನೀವೇನು ವಿವೇಚಿಸುವುದಿಲ್ಲವೇ?" **(ಪವಿತ್ರ ಕುರ್‌ಆನ್, 16:17)**

"ಆದುದರಿಂದ ಅಲ್ಲಾಹನಿಗೆ ಹೋಲಿಕೆಗಳನ್ನು ಕಲ್ಪಿಸಬೇಡಿರಿ."

(ಪವಿತ್ರ ಕುರ್‌ಆನ್, 16:74)

ಅಲ್ಲಾಹನಿಗೆ ಪತ್ನಿಯಿಲ್ಲ

ಪತಿ-ಪತ್ನಿಯ ಸಂಬಂಧ ಕನಿಷ್ಠ ಮೂರು ವಿಷಯಗಳಿರುವಲ್ಲಿ ಮಾತ್ರ ಏರ್ಪಡುತ್ತದೆ.

1. ಒಬ್ಬರು ಇನ್ನೊಬ್ಬರನ್ನು ಅವಲಂಬಿಸಿರಬೇಕು.
2. ಲೈಂಗಿಕ ಬಯಕೆಯು ದಾಂಪತ್ಯ ಸಂಬಂಧವನ್ನು ಅನಿವಾರ್ಯಗೊಳಿಸಿರಬೇಕು.
3. ಪತಿ-ಪತ್ನಿಯರಿಬ್ಬರೂ ಒಂದೇ ವರ್ಗಕ್ಕೆ ಸೇರಿದವರಾಗಿರಬೇಕು.

ಅಲ್ಲಾಹನಲ್ಲಿ ಈ ಪೈಕಿ ಯಾವ ವಿಷಯವೂ ಕಂಡು ಬರುವುದಿಲ್ಲ. ಅಲ್ಲಾಹನು ಯಾರನ್ನೂ ಅವಲಂಬಿಸಿಲ್ಲ. ಅವಲಂಬನೆ ಅವನ ಮಹಿಮೆಗೆ ನಿಲುಕುವಂತಹದಲ್ಲ. ಸೃಷ್ಟಿಕರ್ತನೆಂದೂ ಸೃಷ್ಟಿಯ ಅವಲಂಬಿತನಾಗಿರುವುದಿಲ್ಲ.

"ಅಲ್ಲಾಹನಂತೂ ನಿರಪೇಕ್ಷನು. ನೀವೇ ಅವನ ಅವಲಂಬಿತರು."

(ಪವಿತ್ರ ಕುರ್‌ಆನ್, 47:38)

ಅಲ್ಲಾಹನಿಗೆ ವಿಷಯಾಸಕ್ತಿಯಿಲ್ಲ. ಅವನು ಎಲ್ಲ ಬಯಕೆಗಳಿಂದ ಮುಕ್ತನು. ವಿಷಯಾಸಕ್ತಿಯು ಒಂದು ದೊಡ್ಡ ದೌರ್ಬಲ್ಯವಾಗಿದೆ. ಆ ಬಯಕೆಯು ಈಡೇರುವ ತನಕ ವಿಷಯಾಸಕ್ತಿಯುಳ್ಳವನಿಗೆ ನೆಮ್ಮದಿ ಸಿಗಲಾರದು. ಈ ಬಯಕೆಯುಳ್ಳವನು ಹೆಚ್ಚಿನ ವೇಳೆ ಬುದ್ಧಿ ವಿವೇಕವನ್ನು ಕಳಕೊಂಡು ಅಂಧನಾಗಿ ಬಿಡುತ್ತಾನೆ. ಅಲ್ಲಾಹನು ಈ ದೌರ್ಬಲ್ಯ ದಿಂದ ಮುಕ್ತನು. ಯಾವುದೇ ದೌರ್ಬಲ್ಯವು ಅವನ ಮಹಿಮೆಗೆ ಅತೀತವಾಗಿದೆ.

"ಅಲ್ಲಾಹನು ಸ್ವಯಂ ಮಹಾ ಅನ್ನದಾತನು, ಮಹಾಶಕ್ತಿಶಾಲಿ ಮತ್ತು ಪ್ರಚಂಡ ನಾಗಿದ್ದಾನೆ." (ಪವಿತ್ರ ಕುರ್‌ಆನ್, 51:58)

"ಅವನೇ ಅಲ್ಲಾಹ್ ಅವನ ಹೊರತು ಬೇರಾವ ಆರಾಧ್ಯನೂ ಇಲ್ಲ. ಅವನು ಸಾಮ್ರಾಟನು, ಪರಮ ಪಾವನನು, ಸಾದ್ಯಂತ ಮಂಗಲಮಯನು, ಶಾಂತಿದಾತನು, ಸಂರಕ್ಷಕನು, ಪ್ರಬಲನು, ತನ್ನ ಆಜ್ಞೆಯನ್ನು ಶಕ್ತಿಯಿಂದ ಅನುಷ್ಠಾನಿಸಿ ಬಿಡುವವನು, ಸದಾ ಸರ್ವೋನ್ನತನಾಗಿಯೇ ಇರುವವನು, ಜನರು ಮಾಡುತ್ತಿರುವ ಸಹಭಾಗಿತ್ವದಿಂದ ಅಲ್ಲಾಹನು ಪರಿಶುದ್ಧನು." (ಪವಿತ್ರ ಕುರ್‌ಆನ್, 59:23)

ಯಾವ ವಸ್ತುವೂ ಅಲ್ಲಾಹನಿಗೆ ಸರಿಸಮಾನವಲ್ಲ. ಸೃಷ್ಟಿಗಳು ಸೃಷ್ಟಿಕರ್ತನ ವರ್ಗಕ್ಕೆ ಸೇರಿದವರಲ್ಲ. ಆದ್ದರಿಂದ ಅಲ್ಲಾಹನಿಗೆ ಪತ್ನಿಯಿಲ್ಲ.

"ಅಲ್ಲದೆ, ನಮ್ಮ ಪ್ರಭುವಿನ ಪ್ರತಿಷ್ಠೆಯು ಅತ್ಯುನ್ನತವಾಗಿದೆ. ಅವನು ಯಾರನ್ನೂ ತನ್ನ ಪತ್ನಿ ಅಥವಾ ಪುತ್ರನಾಗಿ ಮಾಡಿಕೊಂಡಿಲ್ಲ." (ಪವಿತ್ರ ಕುರ್‌ಆನ್, 72:3)

ಬಹುದೇವವಿಶ್ವಾಸಿ ಧರ್ಮಗಳ ಪುರಾಣಗಳಲ್ಲಿ ದೇವತೆಗಳ ದಾಂಪತ್ಯ ಜೀವನದ ವಿವರಣೆಗಳು ದೊರೆಯುತ್ತವೆ. ಏಕೆಂದರೆ ಸರಿಸುಮಾರು ಎಲ್ಲ ದೇವರಿಗೂ ಪತ್ನಿಯರಿದ್ದಾರೆ.

ಆದರೆ ಅವರ ಅಪರಿಮಿತ ವಿಷಯಾಸಕ್ತಿಯು ಕೇವಲ ಪತ್ನಿಯರಿಂದ ತಣಿಯುವುದಿಲ್ಲ. ಆದ್ದರಿಂದ ಅವರು ಲೋಕವಿಡೀ ಸುತ್ತಾಡುತ್ತಾರೆ. ವಿಲಾಸಿ ಜೀವನದ ಯಾವ ಅವಕಾಶವನ್ನೂ ಕೈಬಿಡುವುದಿಲ್ಲ. ಎಷ್ಟರವರೆಗೆಂದರೆ ಅವರು ತಮ್ಮ ಸೋದರಿ ಮತ್ತು ಪುತ್ರಿಯರನ್ನೂ ಬಿಡುವುದಿಲ್ಲ. ಅವರು ಅದಕ್ಕಾಗಿ ತಮ್ಮ ದೈವಿಕ ಶಕ್ತಿಯನ್ನು ಬಳಸಿಕೊಳ್ಳುತ್ತಾರೆ. ಅದರಿಂದಲೂ ಸಾಧ್ಯವಾಗದಿದ್ದರೆ ಮೋಸ-ವಂಚನೆಯನ್ನು ಮಾಡುತ್ತಾರೆ. ಎಲ್ಲ ಬಹುದೇವವಿಶ್ವಾಸಿ ಧರ್ಮಗಳ ಪುರಾಣಗಳು ಇಂತಹ ಕತೆಗಳಿಂದ ತುಂಬಿ ಹೋಗಿದೆ. ಯಾವ ದೇವತೆಯ ಜೀವನವೂ ಈ ದೌರ್ಬಲ್ಯದಿಂದ ಮುಕ್ತವಾಗಿಲ್ಲ.

ಅಲ್ಲಾಹನಿಗೆ ಪುತ್ರ-ಪುತ್ರಿಯರಿಲ್ಲ

ಪುತ್ರ ಪುತ್ರಿಯರ ಕಲ್ಪನೆಯು ಪತ್ನಿ ಮತ್ತು ಲೈಂಗಿಕ ಸಂಪರ್ಕದಿಂದ ಉಂಟಾಗುತ್ತದೆ. ಅಲ್ಲಾಹನಿಗೆ ಲೈಂಗಿಕ ಬಯಕೆಯಿಲ್ಲ. ಅವನಿಗೆ ಪತ್ನಿಯಿಲ್ಲ. ಆದ್ದರಿಂದ ಅವನಿಗೆ ಸಂತಾನವಿರುವುದು ಅಸಾಧ್ಯ. ಅವನು ಸೃಷ್ಟಿಕರ್ತನಾಗಿದ್ದಾನೆ. ಎಲ್ಲರೂ ಅವನ ಸೃಷ್ಟಿಗಳಾಗಿದ್ದಾರೆ. ಸೃಷ್ಟಿಯು ಅವನ ಸಂತಾನವಾಗಲಾರದು.

"ಅವನು ಭೂಮಿ-ಆಕಾಶಗಳ ಕರ್ತೃ. ಅವನಿಗೊಬ್ಬ ಬಾಳ ಸಂಗಾತಿಯೇ ಇಲ್ಲದಿರುವಾಗ ಅವನಿಗೆ ಮಗನಾಗುವುದು ಹೇಗೆ? ಅವನು ಸರ್ವವನ್ನೂ ಸೃಷ್ಟಿಸಿದನು ಮತ್ತು ಅವನು ಸಕಲ ವಸ್ತುಗಳ ಜ್ಞಾನವುಳ್ಳವನು." (ಪವಿತ್ರ ಕುರ್‌ಆನ್, 6:101)

ಅಲ್ಲಾಹನ ಸಂತಾನವು ದೇವರಾಗುವುದು ಸಾಧ್ಯವಿಲ್ಲ. ಏಕೆಂದರೆ ಹುಟ್ಟು ಉಳ್ಳವನು ದೇವರಾಗಲಾರನು. ಸೃಷ್ಟಿಯೂ ಆಗಲಾರದು. ಏಕೆಂದರೆ ಸಂತಾನವು ತಂದೆಯ ವರ್ಗಕ್ಕೇ ಸೇರಿರಬೇಕು. ಸೃಷ್ಟಿಯು ಎಂದೂ ಸೃಷ್ಟಿಕರ್ತನ ವರ್ಗಕ್ಕೆ ಸೇರುವುದಿಲ್ಲ.

"ಇಷ್ಟಾಗಿಯೂ ಜನರು 'ಯಕ್ಷ'ರನ್ನು ಅಲ್ಲಾಹನಿಗೆ ಸಹಭಾಗಿಗಳಾಗಿಸಿಬಿಟ್ಟರು. ವಸ್ತುತಃ ಅವನು ಅವರನ್ನು ಸೃಷ್ಟಿಸಿದವನು. ಆದರೆ ಅವರು ವಿಚಾರ ಮಾಡದೆ ಅವನಿಗೆ ಪುತ್ರ ಮತ್ತು ಪುತ್ರಿಯರನ್ನು ಕಲ್ಪಿಸಿಕೊಂಡರು. ವಸ್ತುತಃ ಅವನು ಇವರು ಹೇಳುತ್ತಿರುವ ವಿಷಯ ಗಳಿಂದ ಪರಿಶುದ್ಧನೂ ಅತ್ಯುನ್ನತನೂ ಆಗಿರುತ್ತಾನೆ." (ಪವಿತ್ರ ಕುರ್‌ಆನ್, 6:100)

'ವಿಚಾರ ಮಾಡದೆ' ಎಂದರೆ ಅಲ್ಲಾಹನಿಗೆ ಸಂತಾನವಿಲ್ಲ ಎಂಬ ನಂಬಿಕೆಗೆ ಯಾವುದೇ ಆಧಾರ, ಪ್ರಮಾಣ ಅಥವಾ ಜ್ಞಾನವಿಲ್ಲ. ಇದು ಕೇವಲ ಊಹೆಯಾಧಾರಿತ ಮಾತುಗಳು, "ಅವನು ಪರಿಶುದ್ಧನೂ ಅತ್ಯುನ್ನತನೂ ಆಗಿರುತ್ತಾನೆ." ಅರ್ಥಾತ್ ಸಂತಾನ ವಿರುವುದು ದೇವತ್ವ ಕಲ್ಪನೆಗೆ ವಿರುದ್ಧವಾಗಿದೆ. ಸಂತಾನವು ಸೃಷ್ಟಿಗಳಿಗೆ ಭೂಷಣವೇ ಹೊರತು ಸೃಷ್ಟಿಕರ್ತನಿಗಲ್ಲ.

ಎಲ್ಲರೂ ಅಲ್ಲಾಹನ ದಾಸರಾಗಿರುವರು. ದಾಸರು ಒಡೆಯನ ಸ್ಥಾನಮಾನ ಹೊಂದುವುದೆಂತು?

"ಯಾರನ್ನಾದರೂ ತನ್ನ ಮಗನನ್ನಾಗಿ ಮಾಡಿಕೊಳ್ಳುವುದು ರಹ್ಮಾನನಿಗೆ ಶೋಭಿಸುವುದಿಲ್ಲ. ಭೂಮಿ-ಆಕಾಶಗಳಲ್ಲಿರುವವರೆಲ್ಲರೂ ಅಲ್ಲಾಹನ ಸನ್ನಿಧಿಯಲ್ಲಿ ದಾಸರ ನೆಲೆಯಲ್ಲಿ ಹಾಜರಾಗಲಿರುವರು." (ಪವಿತ್ರ ಕುರ್‌ಆನ್, 19:92-93)

ಮನುಷ್ಯನಿಗೆ ತನ್ನ ಮರಣದ ನಂತರ ತನ್ನ ಸಂತತಿ ಬಾಕಿ ಉಳಿಯಬೇಕಾದರೆ ಸಂತಾನದ ಅಗತ್ಯವಿರುತ್ತದೆ. ಆ ಸಂತಾನವು ಅವನ ಅಪೂರ್ಣ ಕೆಲಸಗಳನ್ನು ಪೂರ್ಣಗೊಳಿಸುತ್ತಾನೆ ಮತ್ತು ಅವನು ಬಿಟ್ಟು ಹೋದ ಸೊತ್ತು ಸಂಪತ್ತುಗಳ ಉತ್ತರಾಧಿಕಾರಿಯಾಗುತ್ತಾನೆ. ಆದರೆ ಅಲ್ಲಾಹನು ಚಿರಂಜೀವಿ. ಅವನಿಗೆ ಸಂತತಿ ಬೆಳೆಸುವ ಅಗತ್ಯವಾಗಲೀ, ಉತ್ತರಾಧಿಕಾರಿಯ ಅಗತ್ಯವಾಗಲಿ ಸಹಾಯಕನ ಬಯಕೆಯಾಗಲಿ ಇಲ್ಲ. ಅವನು ಎಲ್ಲ ವಸ್ತುಗಳಿಂದಲೂ ನಿರಪೇಕ್ಷನಾಗಿದ್ದಾನೆ.

"ಅಲ್ಲಾಹನು ತನಗೋರ್ವ ಪುತ್ರನನ್ನು ಮಾಡಿಕೊಂಡಿದ್ದಾನೆಂದು ಜನರಾಡಿಬಿಟ್ಟರು, 'ಅಲ್ಲಾಹ್ ಪರಮ ಪವಿತ್ರನು', ಅವನಂತು ನಿರಪೇಕ್ಷನಾಗಿರುತ್ತಾನೆ."

(ಪವಿತ್ರ ಕುರ್‌ಆನ್, 10:68)

ಅವನು ಸರ್ವ ಸಮರ್ಥನು. ಅವನ ಇಚ್ಛೆಯೇ ಎಲ್ಲ ಕೆಲಸಗಳ ಪರಿಪೂರ್ಣತೆಯ ಖಾತರಿಯಾಗಿದೆ. ಅವನಿಗೆ ಸಂತಾನದ ಅಗತ್ಯವೇ ಇಲ್ಲ.

"ಯಾರನ್ನಾದರೂ ಮಗನಾಗಿ ಮಾಡಿಕೊಳ್ಳುವುದು ಅಲ್ಲಾಹನಿಗೆ ಭೂಷಣವಲ್ಲ. ಅವನು ಪರಿಶುದ್ಧನು. ಅವನು, ಏನಾದರೂ ಆಗಬೇಕೆಂದು ತೀರ್ಮಾನಿಸಿದರೆ 'ಆಗು' ಎಂದು ಬಿಡುತ್ತಾನೆ ಮತ್ತು ಅದು ಆಗಿಬಿಡುತ್ತದೆ." (ಪವಿತ್ರ ಕುರ್‌ಆನ್, 19:35)

ಅಲ್ಲಾಹನು ಕೂಡಾ ಯಾರದೇ ಸಂತಾನವಲ್ಲ. ಏಕೆಂದರೆ ಯಾರು ಸೃಷ್ಟಿಯಾದನೋ ಅವನು ದೇವನಾಗಲಾರ.

"ಅವನಿಗೆ ಯಾವುದೇ ಸಂತಾನವಿಲ್ಲ. ಅವನು ಯಾರ ಸಂತಾನವೂ ಅಲ್ಲ."

(ಪವಿತ್ರ ಕುರ್‌ಆನ್, 112:3)

ಎಲ್ಲ ಬಹುದೇವವಿಶ್ವಾಸಿ ಮತಗಳಲ್ಲಿ ತಂದೆ, ದೇವರು ಮತ್ತು ಪುತ್ರ-ಪುತ್ರಿಯರು ದೇವರಾಗುತ್ತಾರೆ. ಒಂದು ವೇಳೆ ಯಾವುದೇ ದೇವತೆಗೆ ಸಂತಾನವಿಲ್ಲದಿದ್ದರೆ ಅವನು ಯಾರನ್ನಾದರೂ ದತ್ತು ತೆಗೆದುಕೊಳ್ಳುತ್ತಾನೆ ಅಥವಾ ಬೇರಾವುದೇ ವಿಧಾನದಿಂದ ಸಂತಾನವನ್ನು ಹೊಂದುತ್ತಾನೆ. ಗಣೇಶನ ಕಥೆ ಇದಕ್ಕೆ ಸ್ಪಷ್ಟ ಉದಾಹರಣೆಯಾಗಿದೆ. ಅವನ ಹುಟ್ಟಿನ ಕುರಿತು ಪುರಾಣಗಳಲ್ಲಿ ವಿಭಿನ್ನ ವರದಿಗಳಿವೆ. ಪ್ರಖ್ಯಾತ ವರದಿಯಂತೆ ಅವನನ್ನು ಪಾರ್ವತಿ ತನ್ನ ದೇಹದ ಕೊಳೆಯಿಂದ ಸೃಷ್ಟಿಸಿದಳು. ಅವನ ತಂದೆ ಶಿವನು ಪ್ರಮಾದವಶಾತ್ ಆತನ ತಲೆ ಕಡಿದು ಬಿಟ್ಟನು. ಅನಂತರ ಒಂದು ಆನೆಯ ಮರಿಯ ಶಿರವನ್ನು ಗಣೇಶನ ಕತ್ತಿಗೆ ಜೋಡಿಸಲಾಯಿತು.

ಅಲ್ಲಾಹನು ಅವತಾರ ತಾಳುವುದಿಲ್ಲ

ಜನರು ಧಾರ್ಮಿಕ ನಾಯಕರ ಶ್ರದ್ಧೆಯಲ್ಲಿ ಮಿತಿಮೀರಿದಾಗ ಅವರನ್ನು ದೈವಿಕ ಗುಣಗಳನ್ನು ಹೊಂದಿದವರು ಎಂದು ನಂಬುತ್ತಾರೆ. ಈ ಶ್ರದ್ಧೆ-ಭಕ್ತಿಯು ಇನ್ನಷ್ಟು ಹೆಚ್ಚಾದಾಗ ಅವರನ್ನು ಸಾಕ್ಷಾತ್ ದೇವರೆಂದೇ ಪರಿಗಣಿಸಲಾಗುತ್ತದೆ. ಅವರು ದೇವನ ಅವತಾರವಾಗಿದ್ದಾರೆಂದು ನಂಬಲಾಗುತ್ತದೆ. ಏಸು ಕ್ರಿಸ್ತರ ಬಗ್ಗೆ ಕ್ರೈಸ್ತರು ದೇವ ಪುತ್ರನು ಮನುಷ್ಯ ರೂಪ ತಾಳಿದ್ದು ಎಂದು ನಂಬುತ್ತಾರೆ. ಶ್ರೀ ರಾಮ ಮತ್ತು ಶ್ರೀ ಕೃಷ್ಣನ ಬಗ್ಗೆ ಹಿಂದುಗಳಲ್ಲಿ ಹೆಚ್ಚಿನವರು ವಿಷ್ಣುವಿನ ಅವತಾರವೆಂದು ಪರಿಗಣಿಸುತ್ತಾರೆ. ದೇವನು ಮನುಷ್ಯ ರೂಪ ಧರಿಸಿ ಬರುವ ವಿಶ್ವಾಸವು ವ್ಯಾಪಕವಾದಾಗ ಅದು ಇನ್ನಷ್ಟು ಮುಂದುವರಿದು ದೇವನು ಮೃಗಗಳ ರೂಪವನ್ನು ಧರಿಸುತ್ತಾನೆ. ಸಿಂಹ, ಹಂದಿ ಮತ್ತು ಆಮೆಯ ರೂಪದಲ್ಲಿ ದೇವನ ಅವತಾರವಿದೆಯೆಂಬ ನಂಬಿಕೆಯೂ ಇದೆ. ಈ ಅವತಾರಗಳು ಲೋಕದಿಂದ ಅನ್ಯಾಯ, ಕ್ಷೋಭೆ ಮತ್ತು ಅಧರ್ಮವನ್ನು ಅಳಿಸಲಿಕ್ಕಾಗಿ ಬಂದಿವೆಯಂತೆ.

ಸೃಷ್ಟಿಗಳಂತೆ ತಾಯಿಯ ಉದರದಲ್ಲಿರುವುದು, ಹುಟ್ಟುವುದು, ಪೋಷಿಸಲ್ಪಡುವುದು, ಶರೀರವನ್ನು ಹೊಂದಿರುವುದು, ತಿನ್ನುವುದು, ಕುಡಿಯುವುದು, ಮಲಮೂತ್ರ ವಿಸರ್ಜನೆ ಮಾಡುವುದು, ಪತ್ನಿ-ಮಕ್ಕಳನ್ನು ಹೊಂದುವುದು, ದುಃಖ-ಕಷ್ಟಗಳನ್ನು ಅನುಭವಿಸುವುದು, ಮಾನವೀಯ ಅಥವಾ ಮೃಗೀಯ ಭಾವನೆಗಳನ್ನು ಹೊಂದಿರುವುದು, ಸಾಯುವುದು ಅಥವಾ ಆತ್ಮಹತ್ಯೆ ಮಾಡಿಕೊಳ್ಳುವುದು- ಇವೆಲ್ಲಾ ಅಲ್ಲಾಹನಿಗೆ ಭೂಷಣವಾಗಿವೆಯೇ? ಇಲ್ಲ- ಖಂಡಿತ ಇಲ್ಲ. ಈ ಪೈಕಿ ಯಾವುದೂ ಜಗತ್ತಿನ ಸೃಷ್ಟಿಕರ್ತನಿಗೆ ಶೋಭಿಸುವಂತಹುದಲ್ಲ. ದೇವನು ಸೃಷ್ಟಿಗಳಂತಲ್ಲ. ಸೃಷ್ಟಿಗಳಂತಹ ಯಾವುದೇ ವಿಷಯ ಅವನಲ್ಲಿಲ್ಲ. ಅವನು ಸೃಷ್ಟಿಯಾಗಿಲ್ಲ. ಅವನಿಗೆ ಸಂತಾನವಿಲ್ಲ. ಅವನು ತನ್ನ ಅಸ್ತಿತ್ವ ಮತ್ತು ಗುಣಗಳಲ್ಲಿ ಅಸದೃಶನಾಗಿದ್ದಾನೆ. ಎಲ್ಲರಿಂದಲೂ ಅವನು ನಿರಪೇಕ್ಷನಾಗಿದ್ದಾನೆ.

ಏಸುಕ್ರಿಸ್ತ(ಅ) ಅವರನ್ನು ದೇವ ಅಥವಾ ದೇವಪುತ್ರನ ಅವತಾರವೆಂದು ಬಗೆಯುವ ಕ್ರೈಸ್ತರ ಕುರಿತು ಪವಿತ್ರ ಕುರ್‌ಆನ್ ಹೀಗೆ ಹೇಳಿದೆ:

"ಮರ್ಯಮರ ಪುತ್ರ 'ಮಸೀಹ'ರನ್ನೇ ದೇವನೆನ್ನುವವರು ಖಂಡಿತವಾಗಿಯೂ 'ಸತ್ಯನಿಷೇಧ' ಮಾಡಿದರು. ಓ ಪೈಗಂಬರರೇ, ಅವರೊಡನೆ ಹೇಳಿರಿ: ಅಲ್ಲಾಹನು ಮರ್ಯಮರ ಪುತ್ರ ಮಸೀಹರನ್ನು, ಅವರ ಮಾತೆಯನ್ನು ಮತ್ತು ಸಕಲ ಭೂ ನಿವಾಸಿಗಳನ್ನು ನಾಶಮಾಡಿ ಬಿಡಲಿಚ್ಛಿಸಿದರೆ ಅವನನ್ನು ಆ ಇಚ್ಛೆಯಿಂದ ತಡೆಯುವ ಸಾಮರ್ಥ್ಯ ಯಾರಿಗಿದೆ? ಅಲ್ಲಾಹನು ಭೂಮಿ-ಆಕಾಶಗಳ ಮತ್ತು ಅವುಗಳ ನಡುವೆ ಇರುವ ಸಕಲ ವಸ್ತುಗಳ ಒಡೆಯನಾಗಿರುತ್ತಾನೆ. ಅವನು ತಾನಿಚ್ಛಿಸಿದುದನ್ನು ಸೃಷ್ಟಿಸುತ್ತಾನೆ. ಅವನ ಮಹಿಮೆಯು ಎಲ್ಲವನ್ನೂ ಆವರಿಸಿಕೊಂಡಿದೆ." (ಪವಿತ್ರ ಕುರ್‌ಆನ್, 5:17)

ಮರ್ಯಮರ ಪುತ್ರ ಮಸೀಹ್ ಮತ್ತು ಇತರೆಲ್ಲ ಮನುಷ್ಯರನ್ನು ನಾಶ ಮಾಡಬಲ್ಲ ಅಲ್ಲಾಹನೆಲ್ಲಿ ಮತ್ತು ಸ್ವಯಂ ನಾಶವಾಗಲಿರುವ ಮಸೀಹರೆಲ್ಲಿ? ಹಾಗಿ... ರ ಅಲ್ಲಾಹನು

ಮಸೀಹರ ರೂಪ ತಾಳುವುದೆಂತು? ಅಲ್ಲಾಹನಂತು ಸಮಸ್ತ ವಿಶ್ವದ ಸೃಷ್ಟಿಕರ್ತನೂ ಒಡೆಯನೂ ಅಧಿಪತಿಯೂ ಆಗಿದ್ದಾನೆ. ಅವನಿಗೆ ಇಂತಹ ಕೃತ್ಯಗಳು ಭೂಷಣವೇ ಅಲ್ಲ. ಅವನಿಗೆ ಅದರ ಅಗತ್ಯವೂ ಇಲ್ಲ. ಈಸಾ ಬಿನ್ ಮರ್ಯಮ್(ಅ) ತಿನ್ನುತ್ತಿದ್ದರು, ಕುಡಿಯುತ್ತಿದ್ದರು. ತಿನ್ನುವ ಕುಡಿಯುವವನು ಎಂದೂ ದೇವನಾಗಲಾರ.

"ಮರ್ಯಮರ ಪುತ್ರ ಮಸೀಹರು ಕೇವಲ ಓರ್ವ ಸಂದೇಶ ವಾಹಕರಾಗಿದ್ದರೇ ವಿನಾ ಇನ್ನೇನೂ ಆಗಿರಲಿಲ್ಲ. ಅವರಿಗಿಂತ ಮುಂಚೆ ಇನ್ನೂ ಅನೇಕ ಸಂದೇಶವಾಹಕರು ಗತಿಸಿ ಹೋಗಿದ್ದರು. ಅವರ ಮಾತೆ ಓರ್ವ ಸತ್ಯಸಂಧ ಮಹಿಳೆಯಾಗಿದ್ದರು. ಅವರಿಬ್ಬರೂ ಆಹಾರ ಸೇವನೆ ಮಾಡುತ್ತಿದ್ದರು." (ಪವಿತ್ರ ಕುರ್‌ಆನ್, 5:75)

ಲೋಕದಿಂದ ಅಕ್ರಮಿಗಳ ಅನ್ಯಾಯವನ್ನು ಅಳಿಸಲಿಕ್ಕಾಗಿ ದೇವನು ಅವತಾರ ತಾಳುತ್ತಾನೆಂದು ಬಹುದೇವವಿಶ್ವಾಸಿಗಳು ಹೇಳುತ್ತಾರೆ. ಆದರೆ ಕೇವಲ ಈ ಕೆಲಸಕ್ಕಾಗಿ ವಿಶ್ವದ ಒಡೆಯನೂ ಅಧಿಪತಿಯೂ ಮನುಷ್ಯ ಅಥವಾ ಪ್ರಾಣಿಗಳ ರೂಪ ತಾಳುವ ಅಗತ್ಯವಿದೆಯೇ? ಅವನು ವಿಶ್ವದ ಯಾವ ಶಕ್ತಿಗೆ ಆಜ್ಞಾಪಿಸಿದರೂ ಅದು ಆ ಅಕ್ರಮಿಗಳನ್ನು ಅಳಿಸಿ ಬಿಡಬಲ್ಲುದು. ಅವನು ಸ್ವತಃ ಬಾರದೆಯೇ ಇಂತಹ ವ್ಯಕ್ತಿಗಳನ್ನೂ ಅವರ ಎಲ್ಲ ಸೇನೆ ಮತ್ತು ಶಕ್ತಿಗಳನ್ನು ಮುಗಿಸಿ ಬಿಡಬಲ್ಲನು. ಅವತಾರ ತಾಳದೆಯೇ ಈ ಕಾರ್ಯವನ್ನು ಅವನು ಸುಲಭದಿಂದ ಮಾಡಬಲ್ಲವನಾಗಿದ್ದು ಹಾಗೆ ಮಾಡುತ್ತಲೂ ಇರುವಾಗ ಅವನ ಮಹಿಮೆಗೆ ಸಿಲುಕದಂತಹ ಅವತಾರ ತಾಳುವ ಅಗತ್ಯವಾದರೂ ಏನಿದೆ? ವಿಶ್ವದ ಸೃಷ್ಟಿಕರ್ತನು ತನ್ನ ಸೃಷ್ಟಿಯ ರೂಪ ತಾಳುವನು ಎಂಬು ಯಾವ ವಿಚಾರವಂತನಾದರೂ ಭಾವಿಸಬಲ್ಲನೇ?

ಅವತಾರಗಳು ಬರುವ ಉದ್ದೇಶ ಮನುಷ್ಯನ ಸುಧಾರಣೆಯೂ ಆಗಿರಬಹುದು. ಆದರೂ ಈ ಕಾರ್ಯಕ್ಕೂ ಜಗತ್ತಿನ ಸೃಷ್ಟಿಕರ್ತನು ಮನುಷ್ಯನ ರೂಪ ತಾಳ ಬೇಕಾಗಿಲ್ಲ. ಅಲ್ಲಾಹನು ಮನುಷ್ಯರ ಪೈಕಿ ತನಗಿಷ್ಟ ಬಂದವರನ್ನು ಈ ಕಾರ್ಯಕ್ಕಾಗಿ ಆರಿಸಿಕೊಳ್ಳಬಲ್ಲನು. ಅವರಿಗೆ ತನ್ನ ಸಂದೇಶವನ್ನು ನೀಡಿ ಅದನ್ನು ಜನರಿಗೆ ತಲುಪಿಸುವಂತೆ ಹಾಗೂ ಅವರ ಸುಧಾರಣೆ ಮತ್ತು ತರಬೇತಿಯ ಕಾರ್ಯ ನಿರ್ವಹಿಸುವಂತೆ ಆದೇಶಿಸಬಲ್ಲನು. ಇದನ್ನೇ ಅವನು ಮಾಡುತ್ತಿದ್ದನು. ಅವನು ಜನರ ಸುಧಾರಣೆಗಾಗಿ ತನ್ನ ಸಂದೇಶವಾಹಕರನ್ನು ನೇಮಿಸಿದನು. ಆ ಎಲ್ಲ ಸಂದೇಶವಾಹಕರು ಮನುಷ್ಯರೇ ಆಗಿದ್ದರು. ದೇವನ ಅವತಾರವಾಗಿರಲಿಲ್ಲ.

"ಪೈಗಂಬರರೇ, ನಾವು ನಿಮಗಿಂತ ಮುಂಚೆಯೂ ಮನುಷ್ಯರನ್ನೇ ಸಂದೇಶವಾಹಕರಾಗಿ ರವಾನಿಸಿದ್ದೇವು. ಅವರ ಮೇಲೆ ನಾವು 'ದಿವ್ಯವಾಣಿ' ಮಾಡುತ್ತಿದ್ದೇವು. ನಿಮಗೆ ಗೊತ್ತಿಲ್ಲದಿದ್ದರೆ ಗ್ರಂಥದವರೊಡನೆ ಕೇಳಿರಿ." (ಪವಿತ್ರ ಕುರ್‌ಆನ್, 21:7)

"ಓ ಪೈಗಂಬರರೇ, ಹೇಳಿರಿ- ನಾನು ನಿಮ್ಮಂತೆಯೇ ಇರುವ ಒಬ್ಬ ಮನುಷ್ಯ. ನಿಮ್ಮ ದೇವನು ಏಕ ಮಾತ್ರ ದೇವನೆಂದು ನನ್ನ ಕಡೆಗೆ 'ದಿವ್ಯವಾಣಿ' ಮಾಡಲಾಗುತ್ತಿದೆ."

(ಪವಿತ್ರ ಕುರ್‌ಆನ್, 18:110)

ಶಿಫಾರಸುದಾರರಿಲ್ಲ

ಸಾಮಾನ್ಯವಾಗಿ ಅಪರಾಧಿಯನ್ನು ಶಿಕ್ಷೆಯಿಂದ ರಕ್ಷಿಸಲಿಕ್ಕಾಗಿ ಅಥವಾ ಅನರ್ಹನಿಗೆ ಯಾವುದಾದರೂ ಒಂದು ವಸ್ತುವನ್ನು ಕೊಡಿಸಲಿಕ್ಕಾಗಿ ಶಿಫಾರಸು ಮಾಡಲಾಗುತ್ತದೆ. ಇದು ಸ್ಪಷ್ಟವಾದ ಭ್ರಷ್ಟಾಚಾರವಾಗಿದೆ. ಆತ್ಮಸಾಕ್ಷಿಯಿರುವ ಯಾವ ವ್ಯಕ್ತಿಯೂ ಇಂತಹ ಶಿಫಾರಸು ಮಾಡಲಾರ ಮತ್ತು ಸ್ವೀಕರಿಸಲಾರ. ಆದರೆ ಬಹುದೇವವಿಶ್ವಾಸಿಗಳು ತಮ್ಮ ದೇವರುಗಳ ಬಗ್ಗೆ ಅವರು ಜಗದೊಡೆಯನಾದ ದೇವನ ಬಳಿ ಅವರ ಅಕ್ರಮ ಶಿಫಾರಸು ಮಾಡುವರೆಂದೂ ಅವರನ್ನು ಆತನ ಹಿಡಿತದಿಂದ ರಕ್ಷಿಸುವರೆಂದೂ ನಂಬುತ್ತಾರೆ. ವಾಸ್ತವದಲ್ಲಿ ಅಲ್ಲಾಹನ ಬಳಿ ಇಂತಹ ಯಾವನೇ ಶಿಫಾರಸುದಾರನಿರಲಾರನು. ಅವನು ಯಾರ ಒತ್ತಡಕ್ಕೂ ಮಣಿಯುವುದಿಲ್ಲ. ಅವನು ತಪ್ಪು ತೀರ್ಮಾನಗಳನ್ನು ಮಾಡುವುದಿಲ್ಲ. ಅವನನ್ನು ಯಾರೂ ಮೋಸಕ್ಕೆ ಒಳಪಡಿಸುವಂತಿಲ್ಲ. ಅವನು ತನ್ನ ಪರಿಪೂರ್ಣ ಜ್ಞಾನದ ಆಧಾರದಲ್ಲಿ ಸರಿಯಾದ ತೀರ್ಮಾನವನ್ನೇ ಮಾಡುವನು.

ಅಕ್ರಮಿಗಳಿಗೆ ಆಪ್ತ ಮಿತ್ರನಾಗಲಿ, ಪ್ರಭಾವಶಾಲೀ ಶಿಫಾರಸುದಾರನಾಗಲಿ ಇರಲಾರನು. ಅಲ್ಲಾಹನು ದೃಷ್ಟಿಯ ಚೌರ್ಯಗಳನ್ನೂ ಹೃದಯದೊಳಗೆ ಬಚ್ಚಿಟ್ಟಿರುವ ರಹಸ್ಯಗಳನ್ನೂ ತಿಳಿಯುತ್ತಾನೆ. ಅಲ್ಲಾಹನು ನ್ಯಾಯಪೂರ್ಣ ತೀರ್ಮಾನ ಮಾಡುವನು.

"(ಈ ಬಹು ದೇವವಿಶ್ವಾಸಿಗಳು) ಅಲ್ಲಾಹನನ್ನು ಬಿಟ್ಟು ಯಾರನ್ನು ಪ್ರಾರ್ಥಿಸುತ್ತಾರೋ ಅವರು ಯಾವ ವಿಷಯವನ್ನೂ ತೀರ್ಮಾನಿಸುವವರಲ್ಲ. ನಿಶ್ಚಯವಾಗಿಯೂ ಅಲ್ಲಾಹನೇ ಎಲ್ಲವನ್ನೂ ಕೇಳುವವನೂ ಕಾಣುವವನೂ ಆಗಿರುವನು." (ಪವಿತ್ರ ಕುರ್‌ಆನ್, 40:20)

ಈ ವಚನವು ಸತ್ಯನಿಷೇಧಿಗಳು ಮತ್ತು ಬಹುದೇವವಿಶ್ವಾಸಿಗಳ ಕುರಿತಾಗಿದೆ. ಇನ್ನು ಈ ಕೆಳಗಿನ ವಚನಗಳನ್ನು ಗಮನಿಸಿರಿ:

"ಸತ್ಯವಿಶ್ವಾಸಿಗಳೇ, ವ್ಯಾಪಾರ ವಿನಿಮಯಗಳು ನಡೆಯದ, ಗೆಳೆತನಗಳೂ ಶಿಫಾರಸುಗಳೂ ಫಲಕಾರಿಯಾಗದ ಆ ದಿನ ಬರುವುದಕ್ಕಿಂತ ಮೊದಲೇ ನಾವು ನಿಮಗೆ ಒದಗಿಸಿರುವ ಸೊತ್ತು ವಿತ್ತಗಳಿಂದ ಖರ್ಚು ಮಾಡಿರಿ." (ಪವಿತ್ರ ಕುರ್‌ಆನ್, 2:254)

"ಓ ಪೈಗಂಬರರೇ, ತಮ್ಮ ಪ್ರಭುವಿನ ಮುಂದೆ ಆತನ ಹೊರತು (ಅಧಿಕಾರಬಲವುಳ್ಳ) ಸಹಾಯಕರು ಅಥವಾ ಶಿಫಾರಸು ಮಾಡುವವರು ಯಾರೂ ಇಲ್ಲದಂತಹ ಸ್ಥಿತಿಯಲ್ಲಿ ಹಾಜರುಗೊಳಿಸಲ್ಪಡಲಿದ್ದೇವೆಂದು ಭಯಪಡುವವರಿಗೆ ನೀವು ಇದರ (ಈ ದಿವ್ಯ ಬೋಧನೆಯ) ಮೂಲಕ ಉಪದೇಶ ನೀಡಿರಿ." (ಪವಿತ್ರ ಕುರ್‌ಆನ್, 6:51)

ಸತ್ಯವಿಶ್ವಾಸಿಗಳ ಪಾಲಿಗೂ ಅಕ್ರಮ ಶಿಫಾರಸು ಫಲಕಾರಿಯಾಗದೆಂದು ಈ ವಚನಗಳಿಂದ ತಿಳಿದುಬರುತ್ತದೆ.

ನ್ಯಾಯಾಧಿಪತಿಗೆ ಸರಿಯಾದ ಸ್ಥಿತಿಯನ್ನು ತಿಳಿಸಿ ಆತನಿಗೆ ಸರಿಯಾದ ತೀರ್ಮಾನಕ್ಕೆ ಬರಲು ನೆರವಾಗುವುದು ಕೂಡಾ ಶಿಫಾರಸುಗಳ ಉದ್ದೇಶಗಳಲ್ಲೊಂದಾಗಿದೆ. ಆದರೆ ಅಲ್ಲಾಹನ ಜ್ಞಾನವು ಪ್ರತಿಯೊಂದು ವಸ್ತುವನ್ನು ಆವರಿಸಿದೆ. ಆದ್ದರಿಂದ ಅವನಿಗೆ ಯಾವುದನ್ನೂ ತಿಳಿಸುವ ಅಗತ್ಯವಿಲ್ಲ.

"ಆತನ ಸನ್ನಿಧಿಯಲ್ಲಿ ಆತನ ಅಪ್ಪಣೆಯಿಲ್ಲದೆ ಶಿಫಾರಸು ಮಾಡತಕ್ಕವನಾರಿದ್ದಾನೆ? ದಾಸರ ಮುಂದಿರುವುದನ್ನೂ ಆತನು ಬಲ್ಲನು. ಅವರಿಂದ ಮರೆಯಾಗಿರುವುದನ್ನೂ ಆತನು ಬಲ್ಲನು. ಆತನು ಸ್ವತಃ ತಿಳಿಯಗೊಡಿಸುವ ಹೊರತು ಆತನ ಜ್ಞಾನ ಭಂಡಾರದಿಂದ ಯಾವ ವಿಷಯವನ್ನೂ ಅವರು ತಿಳಿಯಲಾರರು." (ಪವಿತ್ರ ಕುರ್‌ಆನ್, 2:255)

ಅರ್ಥಾತ್ ಅಲ್ಲಾಹನು ಎಲ್ಲವನ್ನೂ ಬಲ್ಲನು. ಆದರೆ ಮನುಷ್ಯನು ಅಲ್ಲಾಹನು ದಯಪಾಲಿಸಿದಷ್ಟು ಜ್ಞಾನವನ್ನು ಮಾತ್ರ ಹೊಂದಿರುವನು. ಮನುಷ್ಯನು ಅಲ್ಲಾಹನ ಜ್ಞಾನದಲ್ಲಿ ಹೆಚ್ಚಳ ಮಾಡುವ ಪ್ರಮೇಯವೇ ಇಲ್ಲ. ಆದ್ದರಿಂದ ಅವನು ಅಲ್ಲಾಹನ ಮುಂದೆ ಶಿಫಾರಸು ಮಾಡುವುದಾದರೂ ಹೇಗೆ?

ಬುಖಾರಿ ಮತ್ತು ಮುಸ್ಲಿಮ್ ಎಂಬ ಹದೀಸ್ (ಪ್ರವಾದಿ ವಚನ) ಗ್ರಂಥಗಳಲ್ಲಿ ಬಂದಿರುವ ಒಂದು ವರದಿಯು ಈ ವಿಷಯದ ಮೇಲೆ ಇನ್ನಷ್ಟು ಬೆಳಕು ಚೆಲ್ಲುತ್ತದೆ.

"ಮತ್ತು ನಿಮ್ಮ ನಿಕಟ ಸಂಬಂಧಿಕರನ್ನು ಎಚ್ಚರಿಸಿ." ಎಂಬ ವಚನವು ಅವತೀರ್ಣ ಗೊಂಡಾಗ ಪ್ರವಾದಿವರ್ಯರು(ಸ) ತಮ್ಮ ಸಂಬಂಧಿಕರನ್ನು ಸಾರ್ವತ್ರಿಕವಾಗಿಯೂ ಖಾಸಗಿ ಯಾಗಿಯೂ ಕರೆದರು. ಅನಂತರ ಹೇಳಿದರು, 'ಕಲಬ್ ಬಿನ್‌ಲವಿ ಗೋತ್ರದವರೇ, ನಿಮ್ಮನ್ನು ನರಕಾಗ್ನಿಯಿಂದ ರಕ್ಷಿಸಿಕೊಳ್ಳಿರಿ. ಏಕೆಂದರೆ ಅಲ್ಲಾಹನ ಬಳಿ ನಾನು ನಿಮಗೇನೂ ನೆರವಾಗಲಾರೆನು. ಮುರ್ರ ಬಿನ್ ಕಲಬ್ ಗೋತ್ರದವರೇ, ನಿಮ್ಮನ್ನು ನರಕಾಗ್ನಿಯಿಂದ ರಕ್ಷಿಸಿಕೊಳ್ಳಿರಿ. ಅಲ್ಲಾಹನ ಬಳಿ ನಾನೂ ನಿಮಗೇನೂ ನೆರವಾಗಲಾರೆನು. ಅಬ್ದುಶ್ಶಮ್ಸ್ ಗೋತ್ರದವರೇ, ನಿಮ್ಮನ್ನು ನರಕಾಗ್ನಿಯಿಂದ ರಕ್ಷಿಸಿಕೊಳ್ಳಿರಿ. ನಾನು ಅಲ್ಲಾಹನ ಹಿಡಿತ ದಿಂದ ನಿಮ್ಮನ್ನು ರಕ್ಷಿಸಲಾರೆನು. ಅಬ್ದು ಮನಾಫ್ ಗೋತ್ರದವರೇ, ನಿಮ್ಮನ್ನು ನರಕಾಗ್ನಿ ಯಿಂದ ರಕ್ಷಿಸಿ ಕೊಳ್ಳಿರಿ. ನಾನು ಅಲ್ಲಾಹನ ಶಿಕ್ಷೆಯಿಂದ ನಿಮ್ಮನ್ನೂ ಕಿಂಚಿತ್ತು ರಕ್ಷಿಸಲಾರೆ. ಹಾಶಿಮ್ ಗೋತ್ರದವರೇ, ನಿಮ್ಮನ್ನು ನರಕಾಗ್ನಿಯಿಂದ ರಕ್ಷಿಸಿಕೊಳ್ಳಿರಿ. ನಾನು ಅಲ್ಲಾಹನ ಹಿಡಿತದಿಂದ ನಿಮ್ಮನ್ನು ರಕ್ಷಿಸಲಾರೆನು. ಅಬ್ದುಲ್ ಮುತ್ತಲಿಬ್ ಗೋತ್ರದವರೇ, ನಿಮ್ಮನ್ನು ನರಕಾಗ್ನಿಯಿಂದ ರಕ್ಷಿಸಿಕೊಳ್ಳಿರಿ. ನಾನು ನಿಮ್ಮನ್ನು ಅಲ್ಲಾಹನ ಯಾತನೆಯಿಂದ ಸ್ವಲ್ಪವೂ ರಕ್ಷಿಸಲಾರೆನು. ಓ ಫಾತಿಮಾ, ನಿನ್ನನ್ನು ನರಕಾಗ್ನಿಯಿಂದ ರಕ್ಷಿಸಿಕೋ. ನನ್ನ ಸೊತ್ತಿನಿಂದ ನಿನಗೆಷ್ಟು ಬೇಕಾದರೂ ಕೇಳು ಆದರೆ ಅಲ್ಲಾಹನ ಹಿಡಿತದಿಂದ ನಾನು ನಿನ್ನನ್ನು ಸ್ವಲ್ಪವೂ ರಕ್ಷಿಸಲಾರೆನು'.

V V V V